# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ ಸಂಚಿಕೆ ೪೨ ಅಕ್ಟೋಬರ್ ೨೦೨೨



KARNATAKA CULTURAL ORGANIZATION BRINDAVANA (KCOB) NJ, USA

ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ

ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ

# ಈ ಸಂಚಿಕೆಯಲ್ಲಿ


ಸಂಪಾದಕೀಯ...೩

ಅಧ್ಯಕ್ಷರ ನುಡಿ... ೪

ಜ್ಞಾನ ಜ್ಯೋತಿ... ೫

ಜೀವದುಸಿರು ಹುಸಿ ಗಾಳಿಯಾದಾಗ...೭

ಬೃಂದಾವನದಲ್ಲಿ.. ೯

ಅಮೇರಿಕಾದಲ್ಲಿ ನವರಾತ್ರಿ... ೧೨

ನನ್ನ ಪುಟ್ಟ ವನದಲ್ಲಿ ... ೧೫

ಕರ ಕೌಶಲ್ಯ.... ೧೭

ಕಾರ್ಯಾಗಾರ...೧೯

ಸಣ್ಣ ಕಥೆ... ೨೧

ಕಥಾ ಚಿಂತನ ಮಾಲಿಕೆ - 10, ... ೨೨

ಉಧಮ್ ಸಿಂಗ್... ೨೩

ಅಗಣಿತ ತತ್ವ... ೨೪

ಮಾತಿನ ಮಹತ್ವ... ೨೫

ದಿಗ್ಗಜ ನಮ್ ಕಾರಂತಜ್ಜ...೨೬

ಕಥಾ ಕಾಲಕ್ಷೇಪ... ೨೮

ಭಾವ ಲಹರಿ... ೨೯

ರುಚಿ ಅಭಿರುಚಿ... ೩೩

ಪುಟಾಣಿ ಪ್ರಪಂಚ... ೩೫

ಕ್ಯಾಮರಾ ಕಣ್ಣು... ೩೮


ಮುಖಪುಟ ಚಿತ್ರ: ದೀಪಾವಳಿಯ ದೀವಿಗೆಗಳು (ಕೃಪೆ:ಅಂತರ್ಜಾಲ)

ಮೇಲಿನ ಪುಟಗಳಿಗೆ ನೇರವಾಗಿ ಹೋಗಲು, ಆಯಾ ಶೀರ್ಷಿಕೆಗಳನ್ನು ಕ್ಲಿಕ್ ಮಾಡಿ!

ಹಿಂದಿನ ಸಂಚಿಕೆಗಳು...

ಪ್ರಿಯ ಬೃಂದಾವನ ಓದುಗರೇ

ಶರದೃತು ಶಿಶಿರದಂತೆ ಭಾಸವಾಗುತ್ತಿದೆಯಲ್ಲವೇ? ಆದರೂ ನಾವು ಎರಡು ವರ್ಷದ ಮೇಲೆ ಮತ್ತೆ ಮೊದಲಿನಂತೆ ಓಡಾಡುತ್ತಿದ್ದೇವೆ, ಒಬ್ಬರನ್ನೊಬ್ಬರು ಮುಖತಃ ಭೇಟಿಯಾಗುತ್ತಿದ್ದೇವೆ. ಅಂತೂ ಈ ಪಿಡುಗಿನಿಂದ ಹೊರಬಂದೆವು. ಇನ್ನು ಕೋವಿಡ್ ಬಂದರೂ ಫ್ಲೂ ನಂತೆ ಬಂದು, ಹೋಗುವ ಹಾಗೆ ಕಾಣಿಸುತ್ತದೆ. ಜೀವಭಯವಿಲ್ಲ. ಪ್ರತಿವರ್ಷವೂ ಫ್ಲೂ ವ್ಯಾಕ್ಸೀನಿನ ತರಹ ಕೋವಿಡ್ ವ್ಯಾಕ್ಸೀನ್ ತೆಗೆದುಕೊಳ್ಳಬೇಕಾಗಬಹುದು. ಚಿಂತೆಯಿಲ್ಲ ಅಲ್ಲವೇ?

ಬೃಂದಾವನ ಗಣೇಶೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿತು. ನೀವೆಲ್ಲರೂ ಪಾಲ್ಗೊಂಡು ಅದರ ಯಶಸ್ಸಿಗೆ ಕಾರಣರಾಗಿದ್ದೀರಿ. ಧನ್ಯವಾದಗಳು. ಈಗ ತಾನೇ ನವರಾತ್ರಿ ಮುಗಿಯಿತು. ಮೈಸೂರಿನ ದಸರಾ ಆಚರಣೆಯನ್ನು ಇಲ್ಲಿಂದಲೇ ಕೇಳಿ, ನೋಡಿ, ನಮ್ಮ ನಮ್ಮ ಮನೆಗಳಲ್ಲೂ ಬೊಂಬೆ ಹಬ್ಬವನ್ನು ಬಂಧುಮಿತ್ರರೊಡನೆ ಆಚರಿಸಿದೆವು. ಎರಡು ವರ್ಷದ ನಂತರ ಎಲ್ಲ ಹಬ್ಬಗಳನ್ನೂ ಒಟ್ಟಾಗಿ ಆಚರಿಸಲು ಅವಕಾಶ ಸಿಗುತ್ತಿದೆ.


ಬೃಂದಾವನ ವಾಣಿಯ 42ನೇ ಸಂಚಿಕೆಯನ್ನು ನಿಮ್ಮ ಮುಂದಿಡಲು ಹರ್ಷವಾಗುತ್ತಿದೆ. ಈ ಸಂಚಿಕೆಯಲ್ಲಿರುವ ಅನೇಕ ಆಸಕ್ತಿಪೂರ್ಣ ಲೇಖನಗಳು, ಕವಿತೆಗಳು, ಮನಸ್ಸನ್ನು ಮುದಗೊಳಿಸುವ ಮಕ್ಕಳ ಚಿತ್ರಕಲೆ, ಮತ್ತು ಲೇಖನಗಳನ್ನು ಓದಿ, ನಿಮ್ಮ ಪ್ರತಿಕ್ರಿಯೆಗಳನ್ನು ನಮ್ಮೊಡನೆ ಹಂಚಿಕೊಳ್ಳಿ. ಹಾಗೆಯೇ ನಿಮ್ಮ ಯಾವುದಾದರೂ ಬರಹವನ್ನೂ ಕಳಿಸಿ. ನಿಮ್ಮ ಸಲಹೆಗಳಿಗೂ ಸ್ವಾಗತ.

ಬೃಂದಾವನದ ಈ ವರ್ಷದ ಮುಂದಿನ ಕಾರ್ಯಕ್ರಮಗಳಲ್ಲಿ ಭೇಟಿಯಾಗೋಣ.
ನಿಮ್ಮೆಲ್ಲರಿಗೂ ಮುಂಬರುವ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು.

ನಿಮ್ಮ,
ಬೃಂದಾವನ ವಾಣಿ ಸಂಪಾದಕ ತಂಡ

ಸಂಪಾದಕ ಮಂಡಳಿ:

ಶ್ರೀವಿದ್ಯಾ ಪ್ರಶಾಂತ್, ಲಕ್ಷ್ಮಿ ಕೊಲಾಲ್, ಜ್ಯೋತಿ ಚಂದ್ರ, ಸತ್ಯ, ನರಸಿಂಹ ಮೂರ್ತಿ, ವಿದ್ಯಾ ಮೂರ್ತಿ, ಶೈಲಾ ಪಾಟಂಕರ್, ಪ್ರಶಾಂತ್





***ಎಲ್ಲರಿಗೂ ನಮಸ್ಕಾರ!!***

ನೀವೆಲ್ಲರೂ ನವರಾತ್ರಿ ಹಬ್ಬವನ್ನು ಅದ್ದೂರಿಯಿಂದ ಆಚರಿಸಿ ಆ ಜಗನ್ಮಾತೆಯ ಆಶೀರ್ವಾದವನ್ನು ಪಡೆದುಕೊಂಡಿರುವಿರೆಂದು ನಂಬಿರುತ್ತೇನೆ.

ನ್ಯೂಜೆರ್ಸಿ ಮತ್ತು ಭಾರತದಾದ್ಯಂತ ಪ್ರತಿಯೊಬ್ಬರೂ ಸತತವಾಗಿ ೯ ದಿನಗಳ ಕಾಲ ಆನಂದದಿಂದ ಹಬ್ಬವನ್ನು ಆಚರಿಸಿರುವ ದೃಶ್ಯಾವಳಿಗಳು ಅನೇಕ ಸಾಮಾಜಿಕ ಮಾಧ್ಯಮಗಳಲ್ಲಿ ನೋಡುತ್ತಿದ್ದೇವೆ ಮತ್ತೆ ಹಬ್ಬಗಳನ್ನು ಒಟ್ಟಾಗಿ ಆಚರಿಸುತ್ತಿರುವುದನ್ನು ನೋಡಿದರೆ ಮನಸ್ಸಿಗೆ ಎಷ್ಟೋ ಸಮಾಧಾನವೆನಿಸುತ್ತದೆ. ಎಲ್ಲ ಋತುಗಳಲ್ಲಿ ಶರದೃತುವು ನನ್ನ ನೆಚ್ಚಿನ ಋತುವಾಗಿದೆ. ಈ ಕಾಲದಲ್ಲಿ ಹವಾಮಾನವು ಆಹ್ಲಾದಕರವಾಗಿದ್ದು, ಶರದೃತುವಿನಲ್ಲಿ ಅರಳುವ ವರ್ಣರಂಜಿತ ಪುಷ್ಪಗಳು, ಹಬ್ಬಗಳನ್ನು ಹೊತ್ತು ತರುತ್ತಿರುವಂತೆ ಭಾಸವಾಗುತ್ತದೆ.

ಸುಮಾರು ಎರಡು ದಶಕಗಳಿಗೂ ಹೆಚ್ಚಿನ ಸಮಯ ನ್ಯೂಜೆರ್ಸಿಯಲ್ಲಿ ವಾಸವಾಗಿರುವ ನನ್ನ ಬೇರುಗಳು ಗಟ್ಟಿಯಾಗಿ ಊರಿವೆ ಎಂದು ನಾನು ಭಾವಿಸುತ್ತೇನೆ. ಇಲ್ಲಿ ನಾನು ಗಳಿಸಿದ ಸ್ನೇಹಿತರು ನನ್ನ ಕುಟುಂಬದವರಂತಾಗಿ ಎಲ್ಲರೂ ಒಟ್ಟಾಗಿ ಸೇರಿ ಹಬ್ಬಗಳನ್ನು ಆಚರಿಸುವ ಸಂಭ್ರಮವೇ ಒಂದು ಭಾಗ್ಯ. ಈ ಒಂಭತ್ತು ದಿನಗಳು, ನನ್ನ ಬಂಧು ಬಾಂಧವರ ಮನೆಗಳಲ್ಲಿನ ಗೊಂಬೆಗಳ ಪ್ರದರ್ಶನ, ಪ್ರಾರ್ಥನೆ, ಪಾರಾಯಣ, ಪಠಣ, ಸಂಗೀತ, ನೃತ್ಯ, ನವರಾತ್ರಿಯ ವಿಶೇಷ ರಾಸ್ ಗರ್ಬಾಕ್ಕೆ ಇಡೀ ವರ್ಷ ಕಾದಿರುತ್ತೇನೆ. ಇವೆಲ್ಲವನ್ನೂ ಆಚರಿಸಲು ಅನುವು ಮಾಡಿಕೊಟ್ಟಿರುವ ನಮ್ಮ ಕರ್ಮಭೂಮಿ ಅಮೆರಿಕಾಕ್ಕೂ ನಾನು ಕೃತಜ್ಞಳಾಗಿದ್ದೇನೆ. ನೀವೆಲ್ಲರೂ ನವರಾತ್ರಿ ಒಂಬತ್ತು ದಿನಗಳ ಪ್ರಾರ್ಥನೆ ಉಪವಾಸಗಳ ವೈಜ್ಞಾನಿಕ ಲಾಭವನ್ನು ನನ್ನಂತೆಯೇ ಪಡೆದುಕೊಂಡಿರುವಿರೆಂದೂ ಭಾವಿಸುತ್ತೇನೆ.

ಪ್ರಗತಿ ತಂಡವು ಧಾರ್ಮಿಕ ಕಾರ್ಯಗಳಲ್ಲಿ ಅತ್ಯಂತ ಚಟುವಟಿಕೆಯಿಂದಿರುವುದು ಈಗಾಗಲೇ ನಿಮಗೆಲ್ಲರಿಗೂ ತಿಳಿದಿರುವ ವಿಷಯ. ಪ್ರಗತಿ ತಂಡದ ಚಾರಿಟಿ ವಿಭಾಗವು ಕರ್ನಾಟಕದ ಗ್ರಾಮೀಣ ಭಾಗಗಳಲ್ಲಿ ಆರ್ಥಿಕವಾಗಿ ಹೆಣಗಾಡುತ್ತಿರುವ ಕರಕುಶಲ ವಸ್ತುಗಳನ್ನು ಯಾವುದೇ ಯಂತ್ರಗಳ ಸಹಾಯವಿಲ್ಲದೆ, ಕೈಯ್ಯಿಂದಲೇ ತಯಾರಿಸುವ ಗ್ರಾಮಸ್ಥರಿಂದ ಪರಿಸರಪ್ರೇಮಿ ಮಣ್ಣಿನ ಗಣೇಶ, ಗೌರಿ, ದುರ್ಗಾದೇವಿಯ ಮೂರ್ತಿಗಳನ್ನು ಮಾಡಿಸಿ ಅವುಗಳನ್ನು ನ್ಯೂಜೆರ್ಸಿಗೆ ಸರಿಯಾದ ಸಮಯಕ್ಕೆ ತಲುಪುವಂತೆ ವ್ಯವಸ್ಥೆ ಮಾಡಿತ್ತು. ನಮ್ಮ ಕೈಸೇರಿದ ಮೂರ್ತಿಗಳು ಹೇಗಿರುವುದೋ ಎಂಬ ಕುತೂಹಲ ನಮಗಿತ್ತಾದರೂ, ತೆಗೆದು ನೋಡಿದಾಗ ಎಲ್ಲರನ್ನೂ ದಂಗುಬಡಿಸುವಷ್ಟು ಮುದ್ದಾಗಿದ್ದುದಲ್ಲದೆ, ಒಂದೇ ಒಂದು ಮೂರ್ತಿಯೂ ಮುಕ್ಕಾಗದಂತೆ ಸೊಗಸಾಗಿ ಪ್ಯಾಕಿಂಗ್ ಮಾಡಿ ಕಳುಹಿಸಲಾಗಿತ್ತು. ತಿಂಗಳುಗಳ ಮೊದಲೇ ಗೌರಿ,ಗಣೇಶ ಹಬ್ಬಕ್ಕೆ ಮೂರ್ತಿಗಳನ್ನು ಆರ್ಡರ್ ಮಾಡಿದ ಸದಸ್ಯರಿಗೆ, ಮತ್ತಿತರರಿಗೆ, ಮೂರ್ತಿಗಳನ್ನು ಅವರವರ ಮನೆ ಸೇರಿಸುವಲ್ಲಿ ಪ್ರಗತಿ ತಂಡವು ಅತ್ಯಂತ ಸಮರ್ಥವಾಗಿ ಕಾರ್ಯ ನಿರ್ವಹಿಸಿತೆನ್ನಲು ಹೆಮ್ಮೆಯಾಗುತ್ತದೆ.

ಬೃಂದಾವನವು ಸೆಪ್ಟೆಂಬರ್ 18 ರಂದು ಹೊರಾಂಗಣದಲ್ಲಿ ಸುರಕ್ಷಿತವಾಗಿ ಗಣೇಶೋತ್ಸವ ಕಾರ್ಯಕ್ರಮವನ್ನೇರ್ಪಡಿಸಿತ್ತು. ಎಲ್ಲ ಸದಸ್ಯರ ನೆರವಿನಿಂದ ಇದೊಂದು ಅದ್ಭುತ ಕಾರ್ಯಕ್ರಮವಾಗಿತ್ತು. ಈ ಹೊರಾಂಗಣ ಕಾರ್ಯಕ್ರಮದಲ್ಲಿ ಕರ್ನಾಟಕದ ವಿವಿಧ ಭಾಗಗಳನ್ನು ಪ್ರತಿನಿಧಿಸುವ ಮೆರವಣಿಗೆಯನ್ನು ಮೊಟ್ಟಮೊದಲ ಬಾರಿಗೆ ಹಮ್ಮಿಕೊಂಡಿದ್ದೆವು. ಬೃಂದಾವನದಲ್ಲಿ ಕರ್ನಾಟಕದ ಕಲಾವಿದರಿಗೆ ಅವರ ಪ್ರತಿಭೆಯನ್ನು ಪ್ರದರ್ಶಿಸಲು ವೇದಿಕೆಯನ್ನು ಒದಗಿಸುವ ಮೂಲಕ ಪ್ರೋತ್ಸಾಹಿಸುತ್ತಲೇ ಇದ್ದೇವೆ. ಅಂತೆಯೇ ಕರ್ನಾಟಕದ ಕಲಾವಿದರಾದ ಶ್ರೀಮತಿ ಸ್ನೇಹಾ ಮತ್ತು ಶ್ರೀ ಯೋಗೀಶ್ ಕುಮಾರ್ ಅವರಿಂದ ಸುಂದರವಾದ ನೃತ್ಯ ಪ್ರದರ್ಶನ ಜರುಗಿತು. ನಂತರ ಸಂಜೆ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಎಲ್ಲರೂ ಕೋಲಾಟದಲ್ಲಿ ಭಾಗವಹಿಸಿ ಸಂಭ್ರಮದಿಂದ ಹಬ್ಬವನ್ನು ಆಚರಿಸಿದರು.ಬೃಂದಾವನ ತನ್ನ ರೆಕ್ಕೆಗಳನ್ನು ಹರಡಿ ವಿವಿಧ ಸಾಮಾಜಿಕ-ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿರುವಂತೆ, ನಮ್ಮ ಸದಸ್ಯರಿಗೆ ಅನುಕೂಲವಾಗುವಂತೆ ಹಲವು ಹೊಸ ಕಾರ್ಯಕ್ರಮಗಳನ್ನು ಪರಿಚಯಿಸುವ ಯೋಜನೆ ಹೊತ್ತಿದೆ. ಇತ್ತೀಚೆಗೆ ವಲಸೆ ಬಂದಿರುವ ಯುವ ಕುಟುಂಬಗಳಿಗೆ ನಮ್ಮ ಸಂಸ್ಥೆಯನ್ನು ಪರಿಚಯಿಸಿ ಇದರ ಲಾಭವನ್ನು ನ್ಯೂಜೆರ್ಸಿಯ ಎಲ್ಲ ಕನ್ನಡಿಗರು ಪಡೆದುಕೊಳ್ಳಲು ನೀವೆಲ್ಲರೂ ಸಹಾಯ ಮಾಡಬೇಕೆಂದು ನಿಮ್ಮೆಲ್ಲರನ್ನು ನಾನು ಕೋರುತ್ತೇನೆ.

ಥ್ಯಾಂಕ್ಸ್‌ಗಿವಿಂಗ್ ಮತ್ತು ಕ್ರಿಸ್ಮಸ್ ಅಮೆರಿಕದಲ್ಲಿ ನೀಡುವ ಋತುವಾಗಿದೆ. ನಿಮ್ಮ ನೆಚ್ಚಿನ ಚಾರಿಟಿಯನ್ನು ಆರಿಸಿ, ನಿಮ್ಮಿಂದ ಸಾಧ್ಯವಾದಷ್ಟು ಕೊಡುಗೆ ನೀಡಲು ನಾನು ನಿಮ್ಮಲ್ಲಿ ಪ್ರತಿಯೊಬ್ಬರನ್ನು ವಿನಂತಿಸುತ್ತೇನೆ. ಅಗತ್ಯವಿರುವವರನ್ನು ಮೇಲಕ್ಕೆತ್ತಲು ಸಹಾಯ ಮಾಡುವುದು ನಮ್ಮ ಜವಾಬ್ದಾರಿಯಾಗಿದೆ. ಈ ನಿಟ್ಟಿನಲ್ಲಿ ನಾವು ಶ್ರಮಿಸುವುದನ್ನು ಬಿಡದೆ, ಅನೇಕ ಯೋಗ್ಯ ಕಾರ್ಯಗಳಿಗೆ ದೇಣಿಗೆ ನೀಡುವುದನ್ನು ಪರಿಗಣಿಸಲು ನಿಮ್ಮೆಲ್ಲರಿಗೂ ಅವಕಾಶಗಳನ್ನು ತರುತ್ತೇವೆ. ಶೀಘ್ರದಲ್ಲೇ ಹೊರಬರುವ ಮಾಹಿತಿಗಾಗಿ ದಯವಿಟ್ಟು ಗಮನಿಸಿ.

ಅಂತಿಮವಾಗಿ, ನಮ್ಮ ಎಲ್ಲಾ ಸದಸ್ಯರಿಗೆ ಸುರಕ್ಷಿತ, ಸರಿಯಾದ ಮತ್ತು ಅತ್ಯಂತ ಸಂತೋಷದ ದೀಪಾವಳಿ ಹಬ್ಬವನ್ನು ನಾನು ಬಯಸುತ್ತೇನೆ. ಧನಲಕ್ಷ್ಮಿ ದೇವಿಯು ನಿಮ್ಮೆಲ್ಲರನ್ನು ಆಶೀರ್ವದಿಸಲಿ. ದೀಪಗಳ ಹಬ್ಬವು ಅಮೇರಿಕದಲ್ಲಿ ಎಷ್ಟು ಗಮನ ಸೆಳೆದಿದೆ ಎಂದರೆ ಇದೀಗ ಹೆಚ್ಚಿನ ನ್ಯೂಜೆರ್ಸಿ ಶಾಲೆಗಳಲ್ಲಿ ದೀಪಾವಳಿಗೆ ಅಧಿಕೃತ ರಜೆ ಘೋಷಿಸಲಾಗಿದೆ. ನಿಮ್ಮಲ್ಲಿ ಪ್ರತಿಯೊಬ್ಬರಲ್ಲೂ ಇರುವ ಬೆಳಕು, ದೀಪಗಳಿಗಿಂತ ಪ್ರಕಾಶಮಾನವಾಗಿ ಬೆಳಗಲಿ. ಈ ಸಂದರ್ಭದಲ್ಲಿ
ನಮ್ಮ ಯಾವುದೇ ಭಿನ್ನಾಭಿಪ್ರಾಯಗಳನ್ನು ಬಿಟ್ಟು ಒಟ್ಟಿಗೆ ಬರುವುದನ್ನು ಮುಂದುವರಿಸೋಣ,
ಏಕೆಂದರೆ ಒಟ್ಟಿಗಿದ್ದಾಗ ನಮ್ಮ ಶಕ್ತಿ ಹೆಚ್ಚಿರುತ್ತದೆ.
ಸುರಕ್ಷಿತವಾಗಿರಿ, ಅದ್ಭುತವಾದ ಹಬ್ಬದ ಋತುವನ್ನು ಆನಂದಿಸಿರಿ

**ಧನ್ಯವಾದಗಳೊಂದಿಗೆ**
**ನಿಮ್ಮ, ಪದ್ಮಿನಿ ಹೇಮಂತ್**
ಅಧ್ಯಕ್ಷರು, ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ




# ಆಗ್ರಹ

**ಶ್ರೀ ಯೋಗೀಂದ್ರ ಭಟ್ ಉಳಿ.** *ಶ್ರೀ ಕೃಷ್ಣವೃಂದಾವನ, ನ್ಯೂಜರ್ಸಿ.*

**ಸಂ**ಸಾರದಲ್ಲಿ ಎಲ್ಲವೂ ಸರಿಯಾಗಿರಬೇಕೆಂದರೆ ಮನೆಮಂದಿಯೊಳಗೆ ಭಿನ್ನಾಭಿಪ್ರಾಯಗಳಿರಬಾರದು. ಭಾವೈಕ್ಯತೆ ಬೇಕು. ಸಂಘ, ಸಂಸ್ಥೆಗಳಲ್ಲಿಯೂ ಹೀಗೆಯೇ. ನಾಯಕನಾದವನು ಎಲ್ಲರ ಅಭಿಪ್ರಾಯಗಳನ್ನೂ ಆಲಿಸಬೇಕು. ಎಲ್ಲರ ವಿಶ್ವಾಸವನ್ನೂ ಸಂಪಾದಿಸಬೇಕು. ತಾರ್ಕಿಕವಾಗಿ ಸಿದ್ಧವಾದೊಂದು ನಿರ್ಣಯಕ್ಕೆ ತನ್ನವರೆಲ್ಲರನ್ನೂ ಬದ್ಧರಾಗಿರುವಂತೆ ಮನಃಪೂರ್ವಕವಾಗಿ ಒಪ್ಪಿಸಬೇಕು. ನಾನು ಹೇಳಿದ್ದೇ ನಡೆಯಬೇಕೆಂಬ ಆಗ್ರಹ ಮನಸ್ಸುಗಳನ್ನು ಕೆಡಿಸಬಹುದು, ಕೆರಳಿಸಬಹುದು. ಉಳಿದವರ ಉತ್ಸಾಹವನ್ನು ಕುಂದಿಸಬಹುದು.

ತಾವು ಹೇಳಿದ್ದೇ ಸರಿಯೆಂದು ವಾದ ಮಾಡುವ ಮೊಂಡುಗಳು ನಮಗೆ ಎಲ್ಲೆಡೆ ಸಿಗುತ್ತಾರೆ. ಇತರರ ಮಾತುಗಳನ್ನು ಕೇಳುವ ವ್ಯವಧಾನವೇ ಇಲ್ಲದವರು ಮತ್ತು ತಮ್ಮ ಅಭಿಪ್ರಾಯಗಳನ್ನು ಒತ್ತಾಯಪೂರ್ವಕವಾಗಿ ನಮ್ಮ ಮೇಲೆ ಹೇರುವವರು. ಮತ್ತೂ ಕೆಲವರಿದ್ದಾರೆ. ಅದ್ಯಾವಗಲೋ ನಡೆದೊಂದು ಘಟನೆ ಮತ್ತು ಅದರಲ್ಲಿನ ತಮ್ಮ ಅಪೂರ್ವ ನೈಪುಣ್ಯವನ್ನು ಈವತ್ತಿಗೂ ಹೇಳಿಕೊಂಡು ತಿರುಗುವವರು. ಅಂದು ಅವರು ಗೆದ್ದಿರಬಹುದು, ಆದರೆ ಅಂತಹ ಅದೆಷ್ಟೋ ಸಂದರ್ಭಗಳು ಇಂದಿನಕಾಲಕ್ಕೆ ಅತ್ಯಂತ ಅಪ್ರಸ್ತುತವಾಗಿರುತ್ತವೆ.



ಪ್ರತಿಯೊಬ್ಬನಿಗೂ ಅವನದ್ದೇ ಆದದ್ದೊಂದು ದೃಷ್ಟಿಕೋನವಿರುತ್ತದೆ. ಪ್ರತಿಯೊಂದು ವಿಷಯವನ್ನೂ ಅನೇಕ ಆಯಾಮಗಳಿಂದ ವಿಶ್ಲೇಷಿಸಲು ಬರುತ್ತದೆ. ಆದ್ದರಿಂದ, ಬಹುತೇಕ ಸಂದರ್ಭಗಳಲ್ಲಿ ಇತರರು ತೆಗೆದುಕೊಳ್ಳುವ ನಿರ್ಧಾರಗಳು ನಮಗೆ ವಿಭಿನ್ನವಾಗಿಯೇ ಗೋಚರಿಸಬಹುದು. ಅವರವರ ಅಭಿರುಚಿಯಂತೆ ಅವರವರ ಅಭಿಪ್ರಾಯಗಳು. ಕಾರಿನ ಚಾಲಕರು ಗಮ್ಯಸ್ಥಾನಕ್ಕೆ ನಮ್ಮನ್ನು ಕ್ಲಪ್ತಸಮಯದಲ್ಲಿ ಕ್ಷೇಮವಾಗಿ ತಲುಪಿಸುವುದೇ ನಮಗೆ ಮುಖ್ಯ ಹೊರತು ಇದೇ ರಸ್ತೆಯಲ್ಲಿ ಸಾಗಬೇಕು, ಹೀಗೆಯೇ ಚಾಲನೆ ಮಾಡಬೇಕು ಇತ್ಯಾದಿ ಆಗ್ರಹಗಳನ್ನು ಅವರ ಮೇಲೆ ಹೇರುವುದು ಅನವಶ್ಯಕವಲ್ಲವೇ?

ಬಹಳ ಸಂದರ್ಭಗಳಲ್ಲಿ ಕಾರ್ಯಸಾಧನೆಯಲ್ಲಿನ ಲಕ್ಷ್ಯ ಮತ್ತು ಅವಿರತವಾದ ಪರಿಶ್ರಮವೇ ನಿರ್ಣಾಯಕ ಹೊರತು ಕಾರ್ಮಿಕರ ಕಾರ್ಯಶೈಲಿಯಲ್ಲ. ಕೆಟ್ಟು ಹೋದ ವಾಹನವನ್ನು ರಿಪೇರಿ ಮಾಡುವವನು ಬಲಗೈಯ್ಯನ್ನು ಬಳಸುತ್ತಾನೋ, ಎಡಗೈಯ್ಯನ್ನು ಬಳಸುತ್ತಾನೋ ಎನ್ನುವುದು ನಮಗೇಕೆ? . ಸುಮ್ಮನೆ ಸಲಹೆಗಳನ್ನು ಕೊಡುತ್ತಾ ಅವನಿಗೆ ಕಿರಿಕಿರಿಯನ್ನುಂಟು ಮಾಡುವುದಕ್ಕಿಂತ ಅವನನ್ನು ಅವನ ಪಾಡಿಗೆ ಕೆಲಸ ಮಾಡಲು ಬಿಡುವುದೇ ಕ್ಷೇಮವಲ್ಲವೇ?

ಕೆಲಸದ ದಕ್ಷತೆಯ ಬಗ್ಗೆ ಯಜಮಾನನಿಗಿರುವ ವಿಶ್ವಾಸವೂ ಕಾರ್ಮಿಕರಲ್ಲಿನ ನೈಪುಣ್ಯವನ್ನು ಹೆಚ್ಚಿಸುತ್ತದೆ. ನಿಯಮಿತವಾದ ಸ್ವಾತಂತ್ರ್ಯವೂ ಕಾರ್ಯದ ಕ್ಷಮತೆಯನ್ನು ಮತ್ತು ವೇಗವನ್ನು ವೃದ್ಧಿಸುತ್ತದೆ.

ಕೆಲವೊಂದು ಸಲ ನಾವು ಬಹಳ ಯೋಚಿಸಿ ಕೈಕೊಂಡ ನಿರ್ಣಯಗಳೂ ಕೈಕೊಡಬಹುದು. ಆತುರದ ಮತ್ತು ಅನಿವಾರ್ಯ ತೀರ್ಮಾನಗಳು ಯಶಸ್ಸನ್ನು ತಂದುಕೊಡುವುದೂ ಇದೆ. ಹಾಗೆಂದು ಹೇಳಿ ಅದದ್ದಾಗಲಿ ಎಂದುಕೊಂಡು ಸುಮ್ಮನೆ ಮುನ್ನುಗ್ಗುವ ಉಡಾಫೆ ಬೇಡ. ಏನನ್ನೂ ಯೋಚಿಸದೆ, ಆ ಕ್ಷಣಕ್ಕೆ ತೋಚಿದಂತೆ, ಇಷ್ಟ ಬಂದಂತೆ ವ್ಯವಹರಿಸಿಕೊಂಡು ಹೋಗುವುದು ಶ್ರೇಯಸ್ಕರವಲ್ಲ. ಅಪಾಯಕ್ಕದು ಮುಕ್ತ ಆಮಂತ್ರಣ.

ಕೇವಲ ನಮ್ಮ ಅನುಭವಗಳ ಅಧಾರದಲ್ಲಿ ಎಲ್ಲವನ್ನೂ ನಿರ್ಣಯಿಸುವುದು ಸುಲಭವಲ್ಲ. ಸಾಕಷ್ಟು ಯೋಚಿಸಬೇಕಾಗುತ್ತದೆ. ಅನುಭವಸ್ಥರ ಸಲಹೆಗಳನ್ನೂ ಪಡೆಯಬೇಕಾಗುತ್ತದೆ. ಆದರೆ ಅವರ ಮೇಲಿನ ಅವಲಂಬನೆ ಬೇಡ. ಇತರರೇನಿದ್ದರೂ ಸಲಹೆಕೊಡಲಷ್ಟೇ ಸಮರ್ಥರು ಎನ್ನುವ ಎಚ್ಚರಿಕೆ ಬೇಕು. ಐತಿಹಾಸಿಕ ಉದಾಹರಣೆಗಳು, ಹಿರಿಯರ ಅನುಭವ ಕಥನಗಳು ನಮ್ಮನ್ನು ಒಳ್ಳೆಯ ರೀತಿಯಲ್ಲಿ ಯೋಚಿಸುವಂತೆ ಮಾಡುತ್ತವೆ. ಸನ್ನಿವೇಶಕ್ಕೆ ಸರಿಯಾದ ರೀತಿಯಲ್ಲಿ ನಡೆದುಕೊಳ್ಳುವ ದಾರಿಯನ್ನು ತೋರಿಸಿಕೊಡುತ್ತವೆ. ಎಲ್ಲ ಸಂದರ್ಭಗಳಲ್ಲಿಯೂ ಅಂತಿಮ ನಿರ್ಧಾರವನ್ನಂತೂ ನಾವೇ ತೆಗೆದುಕೊಳ್ಳಬೇಕಾಗುತ್ತದೆ. ಎಷ್ಟು ವಿಧ ಭಕ್ಷ್ಯಗಳಿದ್ದರೇನು? ಬಡಿಸುವವರು ಎಷ್ಟು ಜನರಿದ್ದರೇನು? ಊಟಮಾಡಬೇಕಾದವರು ನಾವೇ ಅಲ್ಲವೇ? ಮತ್ತು ಇನ್ನು ಸಾಕು, ನಮ್ಮ ಹೊಟ್ಟೆ ತುಂಬಿತೆನ್ನುವುದನ್ನೂ ನಾವೇ ಹೇಳಬೇಕಲ್ಲವೇ?

ದೊಡ್ಡವರ ಒತ್ತಡಕ್ಕೆ ಮತ್ತು ದಾಕ್ಷಿಣ್ಯಕ್ಕೆ ಮನಸೋತು ನಮ್ಮ ಮನಸ್ಸಿಗೆ ಒಪ್ಪಿಗೆಯಾಗದ ಕೆಲಸವನ್ನು ಕೈಗೆತ್ತಿಕೊಳ್ಳುವುದು ಯಾವತ್ತಿಗೂ ಒಳ್ಳೆಯದಲ್ಲ. ಅದರಿಂದ ನಮ್ಮ ಸಮಯ ಮತ್ತು ಶ್ರಮ ವ್ಯರ್ಥವಾಗುವುದೇ ಹೊರತು ಅದರಿಂದ ನಮಗಾರಿಗೂ ಲಾಭವಿಲ್ಲ. ನೆಮ್ಮದಿಯೂ ಇಲ್ಲ, ಸಂತೋಷವೂ ಇಲ್ಲ. ಧಣಿಗಳು ಹೇಳಿದ್ದೇ ವೇದವಾಕ್ಯವೆಂದು ತಮ್ಮ ಬುದ್ಧಿಯನ್ನು ಸ್ವಲ್ಪವೂ ಉಪಯೋಗಿಸದೆ ಸುಮ್ಮನೆ ಕೆಲಸ ಮಾಡುವ ಮಂದಿಯನ್ನು ವಿಧೇಯರೆನ್ನಲಾಗುವುದಿಲ್ಲ. ಅಂತಹ ಮೂರ್ಖತನದಿಂದ ಸಂಸ್ಥೆಗಳಿಗೆ ಲಾಭಕ್ಕಿಂತ ನಷ್ಟವೇ ಜಾಸ್ತಿ. ಕೈಮೇಲೆ ಕುಳಿತ ಸೊಳ್ಳೆಯನ್ನು ಕೊಲ್ಲಲು ಹೇಳಿದರೆಂದು ಕತ್ತಿಬೀಸಲು ಹೊರಟವರಿಗೇನನ್ನುವುದು? ಬೆಳೆದುನಿಂತ ಪೈರನ್ನು ತಿನ್ನಲು ಬಂದ ಆಡಿನ ಮರಿಯನ್ನು ಗದ್ದೆಯ ಉದ್ದಗಲಕ್ಕೂ ಅಟ್ಟಾಡಿಸಿ ಹಿಡಿದು ತಂದು ಯಜಮಾನನ ಕೈಗಿತ್ತ 'ವಿಧೇಯ'ನನ್ನು ಅಮಾಯಕನೆನ್ನುವುದೇ? ಅನೇಕ ಕಡೆ ಇಂತಹ ಅತಿವಿನಯವಂತರಿಂದ ಅನುಕೂಲಕ್ಕಿಂತ ಹೆಚ್ಚು ಅನ್ಯಾಯವೇ ಸಂಭವಿಸಬಹುದು. ಕಳೆಗಿಂತ ಹೆಚ್ಚು ಬೆಳೆಯೇ ನಾಶವಾಗಿ ಬಿಡಬಹುದು.

ಯಾವಾಗ ಮತ್ತು ಯಾರ ಸಲಹೆ ಕೇಳಬೇಕು ಎಂಬುವುದನ್ನೂ ನಾವು ಸರಿಯಾಗಿ ಯೋಚಿಸಬೇಕು. ಕೆಲವೊಮ್ಮೆ ಸಲಹೆ ಕೇಳಲು ಹೋಗಿ ದಾಕ್ಷಿಣ್ಯಕ್ಕೆ ಸಿಲುಕಿಬಿಡುತ್ತೇವೆ. ನಮಗಿಷ್ಟವಿಲ್ಲದಿದ್ದರೂ ಅವರೇನೆಂದುಕೊಳ್ಳುತ್ತಾರೋ ಏನೋ ಎಂದುಕೊಂಡು ಅನುಸರಿಸಲು ಹೋಗಿ, ಕೊನೆಗೆ ನಾವೇ ನೊಂದುಕೊಳ್ಳುವಂತಾಗುತ್ತದೆ. ಮನೆಕಟ್ಟುವಾಗ, ಮಕ್ಕಳಿಗೆ ಹೆಸರಿಡುವಾಗ, ಹೀಗೆ ಅನೇಕ ಸಂದರ್ಭಗಳಲ್ಲಿ ಹಿರಿಯರ, ಆತ್ಮೀಯರ ಒತ್ತಡಕ್ಕೆ ಮಣಿದು ನಮಗಿಷ್ಟವಿಲ್ಲದ್ದನ್ನೂ ನಾವು ಒಪ್ಪಿಕೊಳ್ಳಬೇಕಾಗುತ್ತದೆ. ದೊಡ್ಡವರಮನೆಯ ಔತಣಕೂಟದಲ್ಲಿ ಊಟವೇನೂ ಚೆನ್ನಾಗಿರದಿದ್ದರೂ, ತಿನ್ನಲಸಾಧ್ಯವಾಗಿದ್ದರೂ ತಿಂದು ತಟ್ಟೆ ಖಾಲಿಮಾಡಿ ಚೆನ್ನಾಗಿದೆಯೆಂದು ನಟಿಸುವುದೆಷ್ಟು ಕಷ್ಟ?

ಮಿತ್ರರೆನಿಸಿಕೊಂಡವರ ಆಗ್ರಹಕ್ಕೆ ಮಣಿದು ದುರಭ್ಯಾಸಗಳಿಗೆ, ದುಶ್ಚಟಗಳಿಗೆ ಬಲಿಯಾಗುವವರ ಅವಸ್ಥೆಯೂ ಹೀಗೆಯೇ ಅಲ್ಲವೇ ? ಏನೂ ಆಗುವುದಿಲ್ಲ ನಾನಿದ್ದೇನೆಂದು ಹೇಳುವವರು ಮತ್ತೆ ನಾವು ಸಮಸ್ಯೆಯ ಸುಳಿಗೆ ಸಿಲುಕಿದಾಗ ಖಂಡಿತಾ ಕಾಣಸಿಗುವುದಿಲ್ಲ! ಅನೇಕ ಅಪರಾಧಗಳಲ್ಲಿ ಇಂಥವರ ವಂಚಕತನದ ಪ್ಲಾನ್ ಗಳಿಗೆ ಬಲಿಯಾದರೇ ಹೆಚ್ಚು. ಏನಾಗುತ್ತದೆಂದು ನೋಡೋಣ ಎಂದು ಪ್ರಯೋಗಾಲಯದಲ್ಲಿನ ಇಲಿಗಳಂತೆ ತಮ್ಮ ಕುತೂಹಲಗಳಿಗೆ ಬಲಿಪಶುವಾಗಿ ನಮ್ಮನ್ನು ಬಳಸಿಕೊಳ್ಳುವವರೂ ಇದ್ದಾರೆ.

ಆದ್ದರಿಂದ ಕಾಲಾನುಸಾರ ಭೌದ್ಧಿಕವಾಗಿ ನಾವೂ ಬೆಳೆಯಬೇಕು. ಸನ್ನಿವೇಶ ಮತ್ತು ಸಂದರ್ಭಕ್ಕನುಗುಣವಾಗಿ ನಮ್ಮ ಅಭಿಪ್ರಾಯ, ನಿರ್ಣಯಗಳೂ ಅಪ್ ಡೇಟ್ ಆಗುತ್ತಿರಬೇಕು. ಪರರ ಆಗ್ರಹಕ್ಕೆ ಬಲಿಯಾಗದೆ ಜಾಗ್ರತೆಯಿಂದ ಬದುಕುವ ಚಾಕಚಕ್ಯತೆಯನ್ನು ಬೆಳೆಸಿಕೊಳ್ಳಬೇಕು.

ಒಟ್ಟಿನಲ್ಲಿ ನಮ್ಮಬುದ್ಧಿಯನ್ನು ಇನ್ನೊಬ್ಬರ ಕೈಗೆ ಕೊಟ್ಟು ಮೋಸಹೋಗಬಾರದು.



# ಅಧ್ಯಾಯ-1: ಪರಿಪೂರ್ಣ ಆರೋಗ್ಯದೊಂದಿಗೆ ನಾನು ಆರಂಭಿಸುತ್ತೇನೆ

**ಅನುವಾದ: ದಾಶರಥಿ ಘಟ್ಟು** **ಮೂಲ: ಪಾಲ್ ಕಲಾನಿಧಿ** (When Breath Becomes Air)

*(ಕಳೆದ ಸಂಚಿಕೆಯಿಂದ..)* ನನ್ನ ಪದವಿಯ ಶಿಕ್ಷಣ ಮುಗಿಯುತ್ತಾ ಬಂದಂತೆ, ನನ್ನ ಅನೇಕ ಸಮಸ್ಯೆಗಳಿಗೆ ಇನ್ನೂ ಪರಿಹಾರ ಸಿಕ್ಕಿಲ್ಲ ಮತ್ತು ನಾನು ಇನ್ನೂ ಏನನ್ನೂ ಕಲಿತಿಲ್ಲ ಎನ್ನುವ ಭಾವನೆ ನನ್ನನ್ನು ತೀವ್ರವಾಗಿ ಕಾಡುತ್ತಲೇ ಇತ್ತು. ನಾನು ಇಂಗ್ಲಿಷ್ ಸಾಹಿತ್ಯದ ಸ್ನಾತಕೋತ್ತರ ಡಿಗ್ರಿಗಾಗಿ ಸ್ಟ್ಯಾನ್ಫರ್ಡ್ ವಿದ್ಯಾಲಯಕ್ಕೆ ಅರ್ಜಿ ಸಲ್ಲಿಸಿ, ಸೀಟು ದೊರಕಿಸಿಕೊಂಡೆ. ನಮ್ಮ ಮಧ್ಯೆ ಅಸ್ತಿತ್ವದಲ್ಲಿರುವ ಭಾಷೆ, ಜನಗಳ ಬುರುಡೆಯ ಅರ್ಧ ಇಂಚು ದಪ್ಪ ಪದರದ ಒಳಗೆ ರಕ್ಷಿಸಲ್ಪಟ್ಟಿರುವ ಮೆದುಳುಗಳನ್ನು ಬೆಸೆಯುವ ನಿಸರ್ಗಾತೀತ ಅದ್ಭುತ ಶಕ್ತಿ. ನಾವು ಮಾತನಾಡುವ 'ಪದ' ಇಬ್ಬರು ವ್ಯಕ್ತಿಗಳ ನಡುವಿನ ಸಂಹವನಕ್ಕಷ್ಟೇ ಸೀಮಿತವಾಗಬಹುದು; ಜೀವನದ ಅರ್ಥ ಏನು ಎಂಬುದನ್ನು ಸ್ಫುರಿಸಬಹುದು; ಅಥವಾ ವ್ಯಕ್ತಿಗಳ ನಡುವೆ ಇರುವ ಸಂಬಂಧಗಳ ಆಳವನ್ನು ಹೇಳಬಹುದು. ಭಾಷೆ ಮಾನವ ಜೀವಿಯ ಸಂಬಂಧಾತ್ಮಕ ಅಂಶ-"ಹ್ಯೂಮನ್ ರಿಲೇಷನಾಲಿಟಿ". ಹೀಗಿದ್ದರೂ, ಈ ಪ್ರಕ್ರಿಯೆ ಮಿದುಳು ಮತ್ತು ಶರೀರದಲ್ಲಿ ಯಾವುದೋ ರೀತಿ ಭೌತಿಕವಾಗಿ ಅಸ್ತಿತ್ವದಲ್ಲಿದೆ. ನಾವು ಅನುಭವಿಸುವ ಭಾವೋದ್ರೇಕ, ಹಸಿವು, ಪ್ರೇಮ ಮತ್ತು ಮಮಕಾರಗಳ ಜೀವನದ ಭಾಷೆ ಮತ್ತು ನರತಂತು, ಜೀರ್ಣಾಂಗ ವ್ಯವಸ್ಥೆ ಮತ್ತು ಹೃದಯದ ಬಡಿತದ - ಜೈವಿಕ ಕ್ರಿಯೆಯ ಭಾಷೆಯ ಮಧ್ಯೆ ಏನೋ ಸಂಬಂಧ, ಅದು ಎಷ್ಟೇ ಸಂಕೀರ್ಣವಾದರೂ, ಇದೆ ಎಂದು ನನಗೆ ಅನ್ನಿಸಿತು.

ತನ್ನ ದಿನಗಳ ಅತ್ಯಂತ ಶ್ರೇಷ್ಠ ದಾರ್ಶನಿಕ ರಿಚರ್ಡ್ ರೋರ್ಡಿಯಿಂದ ಶಿಕ್ಷಣ ಪಡೆಯುವ ಭಾಗ್ಯ ಸ್ಟ್ಯಾನ್ಫರ್ಡ್ ವಿದ್ಯಾಲಯದಲ್ಲಿ ನನಗೆ ದೊರೆಯಿತು. ಪ್ರತಿಯೊಂದು ಬೋಧನಾ ಶಾಖೆಯೂ ಮಾನವನ ಬದುಕನ್ನು ವಿಶಿಷ್ಟ ಮಾರ್ಗದಲ್ಲಿ ಅರಿತುಕೊಳ್ಳುವ ಸಾಧನಕ್ಕಾಗಿ, ತನ್ನದೇ ಪದ ಸಂಪತ್ತನ್ನು ಸೃಷ್ಟಿಸುತ್ತದೆಂದು ಅವರ ತರಬೇತಿಯಲ್ಲಿ ನಾನು ಅರಿತುಕೊಳ್ಳತೊಡಗಿದೆ. ಶ್ರೇಷ್ಠ ಸಾಹಿತ್ಯಿಕ ರಚನೆಗಳು ಅವುಗಳದೇ ಆದ ಸಾಧನಗಳನ್ನು ಸೃಷ್ಟಿಸಿ, ಓದುಗ ಆ ಪದ ಸಂಪತ್ತನ್ನು ಉಪಯೋಗಿಸುವಂತೆ ಒತ್ತಾಯಿಸುತ್ತದೆ. ನನ್ನ ಥೀಸಿಸ್‌ಗೆ ನಾನು ಕವಿ ವಾಲ್ಟ್ ವಿಟ್ಮೆನ್‌ನ ಕೃತಿಗಳ ವಿಶ್ಲೇಷಣೆಯನ್ನು ಆಯ್ಕೆ ಮಾಡಿಕೊಂಡೆ. ಈಗ ನನ್ನನ್ನು ಕಾಡುತ್ತಿರುವ ಪ್ರಶ್ನೆಗಳೇ ಒಂದು ಶತಮಾನದ ಹಿಂದೆ ವಾಲ್ಟ್ ವಿಟ್ಮೆನ್ ನನ್ನು ಕಾಡಿತ್ತು. ಅವನು ಈ ಪ್ರಶ್ನೆಗಳಿಗೆ ತನ್ನ ಚಿಂತನೆಯನ್ನು "ದಿ ಸೈಕಲಾಜಿಕಲ್-ಸ್ಪಿರಿಚುಯಲ್ ಮ್ಯಾನ್" ಎಂದು ಕರೆದಿದ್ದಾನೆ. "ಸೈಕಲಾಜಿಕಲ್-ಸ್ಪಿರಿಚುಯಲ್" ಪದಸಂಪತ್ತನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ನಮಗಿಂತ ಹೆಚ್ಚೇನೂ ಅದೃಷ್ಟ ವಿಟ್ಮೆನ್‌ಗೆ ಇರಲಿಲ್ಲ ಎಂದು ನನ್ನ ಥೀಸಿಸ್ ಮುಗಿಸುವಷ್ಟರಲ್ಲಿ ನನಗೆ ಕಂಡಿತು. ಆದರೆ ಆ ನಿಟ್ಟಿನಲ್ಲಿನ ಅವನ ಸಾಲುಗಳೇ ನಮಗೆ ಉದ್ಬೋಧಕವಾಗಿವೆ.

ಇಷ್ಟರಲ್ಲಿ ಸಾಹಿತ್ಯಿಕ ವಿಷಯಗಳಲ್ಲಿ ನನ್ನ ಅಭ್ಯಾಸವನ್ನು ಮುಂದುವರೆಸುವ ಇಚ್ಛೆಯೂ ನನ್ನಲ್ಲಿ ಕಡಿಮೆಯಾಗತೊಡಗಿತು. ಸಾಹಿತ್ಯದ ಗಮನ ಹೆಚ್ಚಾಗಿ ರಾಜಕೀಯವಾಗಿದ್ದು ಅದು ವಿಜ್ಞಾನ ಶಾಸ್ತ್ರದಿಂದ ದೂರವಿರುವುದೂ ಇದಕ್ಕೆ ಒಂದು ಕಾರಣ. ಇಂಗ್ಲಿಷ್ ಸಾಹಿತ್ಯ ವಲಯದಲ್ಲಿ ನನ್ನ ಸಾಹಿತ್ಯಿಕ ದೃಷ್ಟಿಯನ್ನು ಒಪ್ಪಿಕೊಳ್ಳುವ ಗುಂಪು ಸಿಗುವುದು ತುಂಬಾ ಕಷ್ಟವೆಂದು, ನನ್ನ ಥೀಸಿಸ್ ಮಾರ್ಗದರ್ಶಿಯೊಬ್ಬರು ಹೇಳಿದರು. ಏಕೆಂದರೆ, ಬಹಳಷ್ಟು ಇಂಗ್ಲಿಷ್ ಸಾಹಿತ್ಯದ PhD ಗಳು "ಮಂಗಗಳು ಬೆಂಕಿಯನ್ನು ಕಂಡರೆ ಭಯ ಪಡುವಂತೆ, ವಿಜ್ಞಾನವನ್ನು ಭಯದಿಂದ ನೋಡುತ್ತಾರೆ" ಎಂದು ಹೇಳಿದರು. ನನ್ನ ಬದುಕು ಯಾವ ನಿಟ್ಟಿನಲ್ಲಿ ಸಾಗುತ್ತಿದೆ ಎಂಬುದರ ಬಗ್ಗೆ ನನಗೇ ಖಚಿತವಿರಲಿಲ್ಲ. "ವಿಟ್ಮೆನ್ ಅಂಡ್ ಮೆಡಿಕಲೈಜೇಷನ್ ಆಫ್ ಪರ್ಸನಾಲಿಟಿ" ಎಂಬ ನನ್ನ ಥೀಸಿಸ್ ಗೆ ಉತ್ತಮ ಪ್ರತಿಕ್ರಿಯೆ ಬಂತು. ಆದರೆ ಅದು 'ಶಾಸ್ತ್ರೀಯ'ವಾಗಿರಲಿಲ್ಲ. ಸಾಹಿತ್ಯಿಕ ವಿಮರ್ಶೆಗಿಂತ ಮನೋವೈಜ್ಞಾನಿಕ ಮತ್ತು ನರವೈಜ್ಞಾನಿಕ ಇತಿಹಾಸಗಳನ್ನು ಅದು ಒಳಗೊಂಡಿತ್ತು. ಅದು ಇಂಗ್ಲಿಷ್ ವಿಭಾಗಕ್ಕೆ ಸರಿಹೊಂದುತ್ತಿರಲಿಲ್ಲ.

ನನ್ನ ಬಹಳಷ್ಟು ಇಂಗ್ಲಿಷ್ ಸಾಹಿತ್ಯದ ಕಾಲೇಜು ಮಿತ್ರರು ತಮ್ಮ ಬದುಕಿನ ದಾರಿಗಳನ್ನು ಹುಡುಕಿಕೊಳ್ಳಲು ನ್ಯೂ ಯಾರ್ಕ್ ನಗರವನ್ನು ಸೇರಿಕೊಂಡರು. ಕೆಲವರು ಕಾಮೆಡಿ, ಇನ್ನು ಕೆಲವರು ಪತ್ರಿಕೋದ್ಯಮ ಮತ್ತು ದೂರದರ್ಶನ- ನಾನೂ ಅವರನ್ನೇ ಹಿಂಬಾಲಿಸಿ, ಎಲ್ಲವನ್ನೂ ಹೊಸದಾಗಿ ಪ್ರಾರಂಭಿಸೋಣ ಎಂದು ಸ್ವಲ್ಪ ಸಮಯ ಅಂದುಕೊಂಡೆ. ಆದರೆ ನನ್ನ ಮನಸ್ಸನ್ನು ತುಂಬಿ ಕಾಡುತ್ತಿದ್ದ "ಜೀವಶಾಸ್ತ್ರ, ನೈತಿಕತೆ, ಸಾಹಿತ್ಯ ಮತ್ತು ತತ್ವಶಾಸ್ತ್ರ ಎಲ್ಲಿ ಸಂಧಿಸುತ್ತವೆ?" ಪ್ರಶ್ನೆಯನ್ನು ಅಷ್ಟು ಸುಲಭವಾಗಿ ಬಿಟ್ಟು ಬಿಡಲು ಸಾಧ್ಯವಾಗಲಿಲ್ಲ.

ಒಂದು ಮಧ್ಯಾಹ್ನ ಫುಟ್ ಬಾಲ್ ಆಟದಿಂದ ಮನೆಯ ಕಡೆಗೆ ನಡೆದುಕೊಂಡು ಹೋಗುತ್ತಿದ್ದೆ. ಶರದೃತುವಿನ ತಣ್ಣನೆಯ ಗಾಳಿ ಹಿತವಾಗಿ ಬೀಸುತ್ತಿತ್ತು. ನನ್ನ ಮನಸ್ಸನ್ನು ವಿಹರಿಸಲು ಬಿಟ್ಟಿದ್ದೆ. "ಪುಸ್ತಕಗಳನ್ನು ತೆಗೆದು ಓದು (ಟೇಕ್ ಅಪ್ ಅಂಡ್ ರೀಡ್)" ಎಂಬ ಆಗಸ್ಟಿನ್ ನ ಮಾತುಗಳು ನನ್ನ ಕಿವಿಯಲ್ಲಿ ಮಾರ್ದನಿಸಿತು. ಆದರೆ ನನ್ನ ಆತ್ಮಕ್ಕೆ ಅದರ ವಿರುದ್ಧ ಮಾತುಗಳು ಕೇಳಿಸಿತು- "ಪುಸ್ತಕಗಳನ್ನು ಪಕ್ಕಕ್ಕಿಟ್ಟು ವೈದ್ಯಶಾಸ್ತ್ರವನ್ನು ಅಭ್ಯಾಸ ಮಾಡು." ಥಟ್ಟನೆ ಎಲ್ಲವೂ ಸ್ಪಷ್ಟವಾಯಿತು. ನನ್ನ ತಂದೆ, ಚಿಕ್ಕಪ್ಪಂದಿರು, ಅಣ್ಣ ಎಲ್ಲರೂ ವೈದ್ಯರಾಗಿರುವುದರಿಂದಲೋ ಏನೋ, ವೈದ್ಯಶಾಸ್ತ್ರವನ್ನು ಅಭ್ಯಾಸ ಮಾಡುವ ಸಾಧ್ಯತೆಯನ್ನು ನಾನು ಗಂಭೀರವಾಗಿ ಪರಿಗಣಿಸಿರಲಿಲ್ಲ. ಆದರೆ ವೈದ್ಯರು ಮಾತ್ರ ಹೆಚ್ಚು ಸಮರ್ಥವಾಗಿ "ದಿ ಸೈಕಲಾಜಿಕಲ್-ಸ್ಪಿರಿಚುಯಲ್ ಮ್ಯಾನ್" ನನ್ನು ಅರ್ಥ ಮಾಡಿಕೊಳ್ಳಲು ಸಾಧ್ಯ ಎಂದು ವಿಟ್ಮೆನ್ ನೇ ಸ್ವತಃ ಬರೆದಿಲ್ಲವೇ?

ಮಾರನೆಯ ದಿನ ನಾನು ಹೋಗಿ ಪ್ರಿ-ಮೆಡ್ ಸಲಹೆಗಾರರನ್ನು ಭೇಟಿ ಮಾಡಿ, ಪ್ರಿ -ಮೆಡ್ ಗೆ ತಯಾರಾಗಲು ಬೇಕಾದ ಸಿದ್ಧತೆಗಳ ಬಗ್ಗೆ ಮಾತನಾಡಿದೆ. ವೈದ್ಯಕೀಯ ಕಾಲೇಜುಗಳಿಗೆ ಅರ್ಜಿ ಹಾಕುವ ಮುನ್ನಾ ಒಂದು ವರ್ಷದ ಇಂಟೆನ್ಸ್ ಪಠ್ಯಕ್ರಮವನ್ನು ಅಭ್ಯಾಸ ಮಾಡಬೇಕು. ಕಾಲೇಜುಗಳಿಗೆ ಅರ್ಜಿ ಹಾಕಿ, ಸೀಟು ಸಿಗುವ ಪ್ರಕ್ರಿಯೆಗೆ ಮತ್ತೆ ಹದಿನೆಂಟು ತಿಂಗಳುಗಳು ಬೇಕು. ಇದರ ಅರ್ಥವೆಂದರೆ, ನನ್ನ ಸಾಹಿತ್ಯ ಮಿತ್ರರು ನ್ಯೂಯಾರ್ಕ್ ಗೆ ಹೋಗಿ ನನ್ನನ್ನು ಬಿಟ್ಟು ತಮ್ಮ ಸಂಬಂಧಗಳನ್ನು ಆಳವಾಗಿ ಬೆಳೆಸಿಕೊಳ್ಳುವುದು. ಇದರ ಅರ್ಥವೆಂದರೆ, ಇಂಗ್ಲಿಷ್ ಸಾಹಿತ್ಯವನ್ನು ನಾನು ಪಕ್ಕಕ್ಕಿಡುವುದು. ಆದರೆ ಇದು, ಪುಸ್ತಕಗಳಲ್ಲಿ ಸಿಕ್ಕದ ಉತ್ತರಗಳನ್ನು ಹುಡುಕಲು ನನಗೆ ಸಿಗುವ ಅವಕಾಶ. ಇದು ಬೆರಗನ್ನು ಹುಡುಕುವ ಮತ್ತೊಂದು ಪ್ರಕಾರ. ನರಳಿಕೆಯ ಜೊತೆ ಸಂಬಂಧವನ್ನು ಬೆಳೆಸಿಕೊಳ್ಳುವುದು ಮತ್ತು "ಸಾವು ಮತ್ತು ಅವನತಿಗಳ ಮುಖಾಮುಖಿಯಲ್ಲೂ ಮಾನವ ಜೀವಿಯ ಬದುಕನ್ನು ಯಾವುದು ಅರ್ಥಪೂರ್ಣವಾಗಿಸುತ್ತದೆ?" ಎಂಬ ಪ್ರಶ್ನೆಯನ್ನು ಸತತವಾಗಿ ಬೆನ್ನು ಹತ್ತುವುದು.

ಭೌತ ಶಾಸ್ತ್ರ ಮತ್ತು ರಸಾಯನ ಶಾಸ್ತ್ರದ ಪಾಠಗಳಿಂದ ತುಂಬಿದ ಪ್ರಿ-ಮೆಡ್ ಅಭ್ಯಾಸವನ್ನು ಮಾಡಲು ನಾನು ಪ್ರಾರಂಭಿಸಿದೆ. ಪಾರ್ಟ್ ಟೈಮ್ ಕೆಲಸ ಮಾಡಲು ಮನಸ್ಸಿಲ್ಲದೆ, ಆದರೂ ಪಾಲೋ ಆಲ್ಟೋದಲ್ಲಿ ಬಾಡಿಗೆ ಕೊಡುವ ಶಕ್ತಿಯಿಲ್ಲದೆ, ನಾನು ಒಂದು ಡಾರ್ಮಿನ ತೆರೆದ ಕಿಟಕಿಯ ಮೂಲಕ ಒಳಹೋಗಿ ಅಲ್ಲಿಯೇ ಇರತೊಡಗಿದೆ. ಕೆಲವು ವಾರಗಳ ನಂತರ ಆ ವಸತಿಯ ವ್ಯವಸ್ಥಾಪಕಿಯ ಕೈಗೆ ಸಿಕ್ಕಿ ಹಾಕಿಕೊಂಡೆ. ಸದ್ಯ ಅವಳು ನನಗೆ ಗೊತ್ತಿದ್ದವಳೇ ಆಗಿದ್ದಳು. ಅವಳು ಒಂದು ಕೊಠಡಿಯ ಬೀಗದ ಕೀಲಿಗಳನ್ನು ನನಗೆ ಕೊಟ್ಟು ಕೆಲವು ಉಪಯೋಗಕರ ಎಚ್ಚರಿಕೆಗಳನ್ನು ನನಗೆ ಕೊಟ್ಟಳು-ಮುಖ್ಯವಾಗಿ ಹೈಸ್ಕೂಲಿನ ಚಿಯರ್ ಲೀಡಿಂಗ್ ಶಿಬಿರ ಯಾವಾಗ ಅಲ್ಲಿ ನಡೆಯುತ್ತದೆ ಎಂಬ ಮಾಹಿತಿ. ಆ ಸಮಯಗಳಲ್ಲಿ ನಾನು ಒಂದು ಟೆಂಟ್, ಪುಸ್ತಕಗಳು ಮತ್ತು ಗ್ರನೋಲ ಬಾರುಗಳನ್ನು ಪ್ಯಾಕ್ ಮಾಡಿಕೊಂಡು ಟಾಹೋಗೆ ಹೊರಟು ಹೋಗುತ್ತಿದ್ದೆ. ಶಿಬಿರ ಮುಗಿದ ಮೇಲೆ ಕೊಠಡಿಗೆ ಹಿಂತಿರುಗುತ್ತಿದ್ದೆ.

ವೈದ್ಯಕೀಯ ಕಾಲೇಜುಗಳ ಅರ್ಜಿ ಪ್ರಕ್ರಿಯೆ ಹದಿನೆಂಟು ತಿಂಗಳುಗಳ ಕಾಲ ತೆಗೆದುಕೊಳ್ಳುವುದರಿಂದ, ತರಗತಿಗಳು ಮುಗಿದ ಮೇಲೆ ನನಗೆ ಇಡೀ ಒಂದು ವರ್ಷ ಸಮಯ ಸಿಕ್ಕಿತು. ಆ ಒಂದು ವರ್ಷದಲ್ಲಿ ವಿಜ್ಞಾನ ಮತ್ತು ವೈದ್ಯಕೀಯ ಶಾಸ್ತ್ರದ ಇತಿಹಾಸ ಮತ್ತು ತತ್ವಗಳ ಬಗೆಗಿನ ಪದವಿ ಅಭ್ಯಾಸ ಮಾಡೆಂದು ನನ್ನ ಕೆಲವು ಅಧ್ಯಾಪಕರು ಸಲಹೆ ಕೊಟ್ಟರು. ಹೀಗಾಗಿ ನಾನು ಕೇಂಬ್ರಿಡ್ಜ್ ನ ಎಚ್ ಪಿ ಎಸ್ (ಹಿಸ್ಟರಿ ಆಫ್ ಫಿಲಾಸಫಿ ಅಂಡ್ ಸೈನ್ಸ್) ಪ್ರೋಗ್ರಾಮಿಗೆ ಅರ್ಜಿ ಹಾಕಿ ಅದಕ್ಕೆ ಆಯ್ಕೆಯಾದೆ. ನಂತರದ ಒಂದು ವರ್ಷ ಇಂಗ್ಲಿಷ್ ಗ್ರಾಮ ಪ್ರದೇಶಗಳಲ್ಲಿನ ತರಗತಿಯ ಕೋಣೆಗಳಲ್ಲಿ ನನ್ನ ದಿನಗಳು ಕಳೆಯ ತೊಡಗಿತು. ಬದುಕು ಮತ್ತು ಸಾವುಗಳ ಬಗ್ಗೆ ನಾವು ಯಾವುದೇ ರೀತಿಯ ನೈತಿಕ ಅಭಿಪ್ರಾಯಗಳನ್ನು ರೂಪಿಸಿಕೊಳ್ಳಲು ಅವುಗಳ ನೇರ ಅನುಭವ ಅತ್ಯಂತ ಅಗತ್ಯ ಎನ್ನುವುದರ ಬಗ್ಗೆ ವಾದ ಮಾಡುತ್ತಾ ಆ ದಿನಗಳಲ್ಲಿನ ಬಹುತೇಕ ಸಮಯವನ್ನು ಕಳೆದೆ. ನನ್ನ ಮಾತುಗಳು ಅವುಗಳನ್ನು ಉಸುರುವ ಉಸಿರಿನಷ್ಟೇ ಭಾರವಿಲ್ಲದವುಗಳಾಗಿ ತೋರುತ್ತಿತ್ತು. ಸ್ವಲ್ಪ ಹಿಮ್ಮೆಟ್ಟಿ ಯೋಚಿಸಿದಾಗ, ನನಗೆ ಈಗಾಗಲೇ ಗೊತ್ತಿರುವುದನ್ನೇ ನಾನು ದೃಢೀಕರಿಸುತ್ತಿದ್ದೇನೆ ಎಂಬುದು ಅರಿವಿಗೆ ಬಂತು: ಅದೇನೆಂದರೆ, ಸಾವು ಬದುಕುಗಳ ಆ ನೇರ ಮುಖಾಮುಖಿ ನನಗೆ ಬೇಕಾಗಿದೆ ಎಂಬುದು. ವೈದ್ಯಶಾಸ್ತ್ರವನ್ನು (ಮೆಡಿಸಿನ್) ಅಭ್ಯಾಸ ಮಾಡುವುದರಿಂದ ಮಾತ್ರ ನಾನು ಗಂಭೀರವಾದ ಜೈವಿಕ ತತ್ವ ಶಾಸ್ತ್ರವನ್ನು (ಬಯಲಾಜಿಕಲ್ ಫಿಲಾಸಫಿ) ಬೆನ್ನಟ್ಟಲು ಸಾಧ್ಯ. ನೀತಿಯ ಬಗೆಗಿನ ಕಲ್ಪಿತ ಅಭಿಪ್ರಾಯಗಳು, ನೈತಿಕ ಕ್ರಿಯೆಯ ಮುಂದೆ ತೀರಾ ಕ್ಷುಲ್ಲಕವಾದುದು. ಕೇಂಬ್ರಿಡ್ಜ್ ನಲ್ಲಿ ಪದವಿ ಶಿಕ್ಷಣವನ್ನು ಮುಗಿಸಿ ನಾನು ಯುಎಸ್ ಗೆ ಹಿಂದಿರುಗಿದೆ. ಯೇಲ್ ನ ಮೆಡಿಕಲ್ ಸ್ಕೂಲಿಗೆ ನಾನು ಹೊರಟಿದ್ದೆ.

ಸತ್ತಿರುವ ವ್ಯಕ್ತಿಯನ್ನು ಅನಾಟಮಿ ತರಗತಿಯಲ್ಲಿ ಮೊದಲ ಬಾರಿಗೆ ಕುಯ್ಯುವಾಗ ವಿಲಕ್ಷಣ ಭಾವನೆಗಳು ಉಂಟಾಗುತ್ತವೆಂದು ನಿಮಗನ್ನಿಸಬಹುದು. ಆದರೆ ಆಶ್ಚರ್ಯವೆಂಬಂತೆ ನನಗೆ ಅದು ಸರ್ವೇಸಾಮಾನ್ಯ ಕೆಲಸದಂತೆ ತೋರಿತು. ಜ್ವಾಜ್ವಲ್ಯಮಾನ ದೀಪಗಳು, ಸ್ಟೈನ್ಲೆಸ್ ಸ್ಟೀಲ್ ಮೇಜುಗಳು, ಬೋ ಟೈ ಕಟ್ಟಿಕೊಂಡು ಓಡಾಡುವ ಪ್ರಾಧ್ಯಾಪಕರು- ಅನಾಟಮಿ ತರಗತಿಯ ಕೊಠಡಿಯಲ್ಲಿ ಯಜಮಾನಿಕೆಯ ವಾತಾವರಣವನ್ನು ಸೃಷ್ಟಿಸಿತ್ತು. ಆದರೂ, ಕತ್ತಿನ ಹಿಂಭಾಗದಿಂದ ಬೆನ್ನು ಹುರಿಯವರೆಗೆ ಮಾಡುವ ಆ ಮೊಟ್ಟ ಮೊದಲ ಕುಯ್ತ, ಮರೆಯಲು ಸಾಧ್ಯವೇ ಇಲ್ಲ. ಅದೊಂದು ಅವಿಸ್ಮರಣೀಯ ಅನುಭವ. ಹೆಣ ಕುಯ್ಯಲು ಉಪಯೋಗಿಸುವ ಸ್ಕ್ಯಾಲ್ ಪೆಲ್ ಎಷ್ಟು ಹರಿತವಾಗಿರುತ್ತದೆಂದರೆ, ಅದು ಚರ್ಮವನ್ನು ಕೊಯ್ಯುವುದಕ್ಕಿಂತ ಆ ಭಾಗವನ್ನು ಅನ್ ಝಿಪ್ ಮಾಡಿ, ತೊಗಲಿನ ಕೆಳಗೆ ಅಡಗಿಕೊಂಡಿರುವ ಮಜ್ಜೆಯನ್ನು ತೆರೆದು ತೋರಿಸುತ್ತದೆ. ಎಷ್ಟೇ ಮಾನಸಿಕ ತಯಾರಿ ಮಾಡಿಕೊಂಡಿದ್ದರೂ, ಆ ದೃಶ್ಯ ನಿಮ್ಮನ್ನು ದಂಗುಬಡಿಸುತ್ತದೆ. ಶವ ಛೇದನ ವೈದ್ಯಕೀಯ ಶಾಸ್ತ್ರದ ಒಂದು ವಿಧಿಯಾಗಿ, ನಿಮ್ಮಲ್ಲಿ ಅನೇಕ ರೀತಿಯ ಭಾವನೆಗಳನ್ನು ಕೆರಳಿಸುತ್ತದೆ. ಹೇಸಿಕೆಯಿಂದ ಮೊದಲ್ಗೊಂಡು, ಉಲ್ಲಾಸ, ಓಕರಿಕೆ, ಹತಾಶೆ, ಬೆರಗು- ಮತ್ತು ದಿನ ಕಳೆದಂತೆ ಶೈಕ್ಷಣಿಕ ಅಭ್ಯಾಸದ ಬೇಸರಗೊಳಿಸುವ ಏಕತಾನತೆಯಾಗಿಬಿಡುತ್ತದೆ. ಎಲ್ಲವೂ pathos ಮತ್ತು bathos ನಡುವೆ ಹೊಯ್ದಾಡುತ್ತದೆ. ಸಮಾಜದ ಮೂಲಭೂತ ನಿಷೇಧವನ್ನು ಉಲ್ಲಂಘಿಸುತ್ತಾ ನೀವಿಲ್ಲಿ ಒಂದು ಶವದ ಮುಂದೆ ನಿಂತಿದ್ದೀರಿ; ಹಾಗೆಯೇ ಫಾರ್ಮಲ್ಡಿಹೈಡ್ ಹೊಟ್ಟೆ ಹಸಿವನ್ನು ಉದ್ದೀಪನಗೊಳಿಸಿ, ಅಂತಹ ಖಿನ್ನ ವಾತಾವರಣದಲ್ಲೂ ಒಂದು ಬುರಿಟೋಗಾಗಿ ನಾವು ಹಾತೊರೆಯುವಂತೆ ಮಾಡುತ್ತದೆ. ಕಡೆಕಡೆಗೆ, ನೀವು ಬೆನ್ನು ಹುರಿಯನ್ನು ಛೇದಿಸಿ, ಪೆಲ್ವಿಸ್ಸನ್ನು ಗರಗಸದಿಂದ ಇಬ್ಭಾಗ ಮಾಡಿ, ಹೃದಯವನ್ನು ಹೋಳು ಮಾಡಿ ನಿಮ್ಮ ಅನಾಟಮಿ ಅಸೈನ್ಮೆಂಟ್ ಮುಗಿಸುವ ಹೊತ್ತಿಗೆ bathos ಹಿಂದಕ್ಕೆ ಹೋಗಿ, ಈ ನಿಷೇಧಿತ 'ಪವಿತ್ರ' ಕ್ರಿಯೆಗೆ ಸಾಮಾನ್ಯ ತರಗತಿಯ ಶುಷ್ಕ ಪಾಂಡಿತ್ಯದ ಗುಣಗಳು ಬಂದು ಬಿಡುತ್ತವೆ. ಛಿದ್ರಗೊಂಡ ಶವದ ಮುಂದೆಯೂ ನಾವು ನಗೆಚಾಟಿಕೆಗಳನ್ನು ಹಾರಿಸುತ್ತಾ, ಕೋಡಂಗಿಗಳಂತೆ ಕಪಿಚೇಷ್ಟೆಗಳನ್ನು ಮಾಡುತ್ತಾ ವಾತಾವರಣದ ಗಂಭೀರತೆಯನ್ನು ಅಣಕಿಸತೊಡಗುತ್ತೇವೆ. ಮೆಡ್ ಸ್ಕೂಲಿನ ಶವ ಛೇದನ ಬಹಳಷ್ಟು ಸಮಚಿತ್ತದ ಸೌಮ್ಯ ವಿದ್ಯಾರ್ಥಿಗಳನ್ನು, ಕಲ್ಲೆದೆಯ ಅಹಂಕಾರಿ ವೈದ್ಯರನ್ನಾಗಿ ಮಾರ್ಪಡಿಸಿಬಿಡುತ್ತದೆ!



# ಗಣೇಶೋತ್ಸವ

ಲಕ್ಷ್ಮಿ ಕೊಲಾಲ್ , ನ್ಯೂ ಜರ್ಸಿ

ಶ್ರಾವಣ ಮಾಸದಲ್ಲಿ ಆಚರಿಸುವ ಪ್ರಮುಖವಾದ ಹಬ್ಬವೆಂದರೆ ಗಣೇಶ ಮತ್ತು ಗೌರಿ ಹಬ್ಬ . ಮನೆಯಲ್ಲಿ ಹಬ್ಬವನ್ನು ಆಚರಿಸಿದ್ದರೂ ಎಲ್ಲರಿಗೂ ಸಾಮೂಹಿಕವಾಗಿ ಕನ್ನಡ ಬಂಧುಗಳೊಡನೆ ಸೆಪ್ಟೆಂಬರ್ 18, 2022 ರಂದು ಆಚರಿಸುವ ಅವಕಾಶ ದೊರೆಯಿತು .

ಪ್ರಗತಿ ತಂಡದ ಎಲ್ಲ ಕಾರ್ಯಕರ್ತರು ಸೇರಿ ಅದ್ಭುತವಾದ ಹಬ್ಬವನ್ನು ಸಡಗರದಿಂದ ಮರ್ಸರ್ ಕೌಂಟಿ ಪಾರ್ಕ್ ನಲ್ಲಿ ನೆರವೇರಿಸಿ ಕೊಟ್ಟರು .
ಮೊದಲು ಗಣೇಶನ ಪ್ರಾರ್ಥನೆಯನ್ನು ಕು. ಶ್ರೇಯ ಸುಶ್ರಾವ್ಯವಾಗಿ ಹಾಡಿದಳು .ಪೂಜ್ಯರಾದ ಹಿರೇಮಠ್ ಅವರು ಬಯಲು ಗಣಪತಿಯ ಪೂಜೆಯ ಮಹತ್ವವನ್ನು ಚೆನ್ನಾಗಿ ತಿಳಿಸಿದರು ಮತ್ತು ಪ್ರಾರ್ಥಿಸುವ ರೀತಿಯನ್ನು ಸಹ ಹೇಳಿಕೊಟ್ಟರು .ಶಾಸ್ತ್ರೋಕ್ತವಾಗಿ ಗಣಪತಿಯ ಪೂಜೆ , ಆರತಿ ಮತ್ತು ಪ್ರಸಾದ ವಿನಿಯೋಗವಾಯಿತು .

ಗಣಪತಿಯೊಂದಿಗೆ ಎಲ್ಲರೂ ನಡೆದು ಮಾಡಿದ ಮೆರವಣಿಗೆ ಕಣ್ಣಿಗೆ ಹಬ್ಬದಂತಿತ್ತು ಎಲ್ಲೆಲ್ಲೂ ಸಂಭ್ರಮ ಕೆಲವರು ಮೈಸೂರು ದಸರಾ ಮೆರವಣಿಗೆಯಂತೆ ಗಾಂಭೀರ್ಯದಿಂದ ನಡೆದು ಮೈಸೂರನ್ನು ಪ್ರತಿನಿಧಿಸಿದರೆ , ಇನ್ನೊಂದು ಗುಂಪು ಬೆಂಗಳೂರಿನ ಸೌಂದರ್ಯವನ್ನು ಮತ್ತು ಮಹತ್ವವನ್ನು ಪ್ರತಿನಿಧಿಸಿ ನಡೆದರು...ಇನ್ನೊಂದು ಗುಂಪು ಉತ್ತರ ಕರ್ನಾಟಕವನ್ನು ಪ್ರತಿನಿಧಿಸಿ ಪ್ರದರ್ಶಿಸಿತು , ಅವರ ಉಡುಗೆಗಳಂತೂ ಆಕರ್ಷಕವಾಗಿತ್ತು.

ತುಳುನಾಡನ್ನು ಪ್ರತಿನಿಧಿಸಿದ ನಾಲ್ಕನೆಯ ಗುಂಪು, ಯಕ್ಷಗಾನದ ವೇಷ ತೊಟ್ಟು, ಬಣ್ಣ ಬಣ್ಣದ ಬಾವುಟವನ್ನು ಹಿಡಿದು ನಡೆಯುತ್ತಾ, ತುಳುನಾಡಿಗೆ ಜೈ ಎಂದು ಜೈ ಕಾರ ಮಾಡಿದರು. ಮೆರವಣಿಗೆಯೊಂದಿಗೆ ಪ್ರದಕ್ಷಿಣೆಯೂ ಆಯಿತು. ಮೈಸೂರಿನ ಗುಂಪು ಚಾಮುಂಡಿ ತಾಯಿಯನ್ನು ಭಜಿಸಿ ಭಕ್ತಿಯಿಂದ ನೃತ್ಯ ಪ್ರದರ್ಶನ ಮಾಡಿದರು . ಬೆಂಗಳೂರಿನ ಗುಂಪು ಕರಗ ನೃತ್ಯವನ್ನು ದಿಟ್ಟವಾಗಿ ಮಾಡಿ ಎಲ್ಲರಿಂದ ಭೇಷ್ ಎನ್ನಿಸಿಕೊಂಡರು.

ಉತ್ತರ ಕರ್ನಾಟಕದ ಗುಂಪು ತಮ್ಮದೇ ಆದ ಶೈಲಿಯಲ್ಲಿ ಮಾತಾಡಿ ಅಲ್ಲಿನ ತಿನಿಸುಗಳ ಬಗ್ಗೆ ಹೇಳಿ ಬಾಯಲ್ಲಿ ನೀರೂರಿಸುವುದರೊಂದಿಗೆ ಮಧುರವಾದ ಗಾನವನ್ನು ಹೇಳಿದರು.ಕಡೆಯಲ್ಲಿ ತುಳುನಾಡಿನ ಗುಂಪು ಸುಂದರವಾದ ನೃತ್ಯ ರೂಪಕವನ್ನು ಮಾಡಿ, ದುರ್ಗಾದೇವಿ, ಮಂಜುನಾಥ ಇತ್ಯಾದಿ ದೇವತೆಗಳ ಮಹಿಮೆಯನ್ನು ಅಲ್ಲಿನ ಸಂಸ್ಕೃತಿಯನ್ನು ಕೊಂಡಾಡಿದರು.

ಹಬ್ಬದ ಊಟ ಬಹಳ ಅಚ್ಚುಕಟ್ಟಾಗಿ ರುಚಿಕರವಾಗಿ ಇತ್ತು. ಕಿರಿಯರು, ಹಿರಿಯರೆಲ್ಲರೂ ಸ್ವಯಂ ಸೇವಕರಾಗಿ ಬಹಳಷ್ಟು ಕೆಲಸಗಳನ್ನು ಮಾಡುತ್ತಿದ್ದದ್ದು ಶ್ಲಾಘನೀಯವಾಗಿತ್ತು..

ಇನ್ನೊಂದು ಕಡೆ ಬಣ್ಣದ ಬಟ್ಟೆಗಳ ಮತ್ತು ಕುಸುರಿ ಕೆಲಸ ಮಾಡಿದ ಒಡವೆಗಳ ಅಂಗಡಿಯು ಇತ್ತು. ನಮ್ಮ ಹೆಣ್ಣು ಮಕ್ಕಳು ಆಗಾಗ್ಗೆ ಅತ್ತ ಕಡೆಯೂ ಹೋಗಿ ನೋಡುತ್ತಾ , ಕೊಳ್ಳುತ್ತಾ ಆನಂದಿಸುತ್ತಿದ್ದರು ಮತ್ತು ವಿಧ ವಿಧವಾದ ಫೋಟೋಗಳನ್ನು ಕ್ಲಿಕ್ಕಿಸುತ್ತಲೇ ಇದ್ದರು.

ಕರುನಾಡಿನಲ್ಲಿ ಕಾವೇರಿ ಹರಿಯಲು ಗಣೇಶನು ಕಾಗೆಯ ರೂಪದಲ್ಲಿ ಬಂದು ಅಗಸ್ತ್ಯ ಮುನಿಗಳಿಗೆ ದಾರಿ ತೋರಿದ ಸ್ವಾರಸ್ಯಕರ ಉಪಕಥೆಯನ್ನು ಶ್ರೀಮತಿ ಉಮಾ ಮೂರ್ತಿ ಅವರು ಹೇಳಿದರು ಹಾಗೂ ಗಣೇಶನ ವಿವಿಧ ರೂಪಗಳಲ್ಲಿ ನೃತ್ಯಗಣೇಶ ರೂಪವು ಒಂದು ಎಂದು ತಿಳಿಸಿದರು.

ಪ್ರಗತಿ ತಂಡವು ಗಣೇಶೋತ್ಸವದಲ್ಲಿ ಶ್ರೀಮತಿ ಸ್ನೇಹಾ ನಾರಾಯಣ್ ಮತ್ತು ಶ್ರೀ ಯೋಗೇಶ್ ಕುಮಾರ್ ಅವರಿಂದ ನರ್ತನ ಹಾಗೂ ನೃತ್ಯ ಕಾರ್ಯಕ್ರಮವನ್ನು ಏರ್ಪಡಿಸಿತ್ತು. ಸ್ನೇಹಾ ನಾರಾಯಣ್ ಅವರು ಭಾರತ ಸಂಸ್ಕೃತಿಯ ವಿವಿಧವಾದ ಅಭಿರುಚಿಯ ಬಗ್ಗೆ ಹೇಳಿದರು ಮತ್ತು ದೂರದಲ್ಲಿ ನೆಲೆಸಿರುವ ಅನಿವಾಸಿ ಕನ್ನಡಿಗರಿಗಿರುವ ಆಸಕ್ತಿಯನ್ನು ನೋಡಿ ಹೆಮ್ಮೆಯನ್ನು ವ್ಯಕ್ತಪಡಿಸಿದರು .







ಗಣೇಶ ಸ್ತುತಿಯೊಂದಿಗೆ ನೃತ್ಯ ಪ್ರಾರಂಭವಾಯಿತು .ಗಣೇಶನ ಆಕಾರ ಗುಣವಿಶೇಷಣಗಳನ್ನು ತೋರಿಸಿ ಮಾಡಿದ ಈ ನೃತ್ಯ ಬಹಳ ಚೆನ್ನಾಗಿತ್ತು. ಪ್ರಕೃತಿ ಮತ್ತು ಪುರುಷ ಅಥವಾ ಅರ್ಧನಾರೀಶ್ವರನ ನೃತ್ಯವನ್ನು ಶ್ರೀಮತಿ ಸ್ನೇಹಾ ನಾರಾಯಣ್ ಮತ್ತು ಶ್ರೀ ಯೋಗೇಶ ಅವರು ಶಿವ ಪಾರ್ವತಿಯರಂತೆ ಅಭಿನಯಿಸಿ ನರ್ತಿಸಿದರು. ಶ್ರೀಮತಿ ಸ್ನೇಹಾ ಅವರು ಕೃಷ್ಣನ ಉತ್ಸಾಹ ಮತ್ತು ಬಾಲಲೀಲೆಗಳನ್ನು "ಪಿಳ್ಳಂಗೋವಿಯ ಚೆಲ್ವ ಕೃಷ್ಣನ " ದೇವರ ನಾಮಕ್ಕೆ ನರ್ತಿಸಿದರು. ಸಭಿಕರು ಸಂತೋಷದಿಂದ ನೋಡಿದರು. ಚಪ್ಪಾಳೆಗಳ ಸುರಿಮಳೆಯೇ ಆಯಿತು.



ಶ್ರೀ ಯೋಗೇಶ್ ಕುಮಾರ್ ಅವರು ಹನುಮಂತ ದೇವನಮೋ ಎಂಬ ಗಾನಕ್ಕೆ ಹನುಮಂತನ ಜ್ಞಾನ, ಧೈರ್ಯ ರಾಮನ ಮೇಲೆ ಅವನಿಗಿರುವ ವಿಶಿಷ್ಟವಾದ ಭಕ್ತಿ ಪೂಜ್ಯಭಾವ , ರಾವಣನ ಅಹಂಕಾರವನ್ನು ಮುರಿವ ಶಕ್ತಿ ಎಲ್ಲವನ್ನು ಬಿಂಬಿಸಿ ನರ್ತಿಸಿದರು. ಈ ನೃತ್ಯವು ನಿಜಕ್ಕೂ ಹನುಮಾನ್ ನರ್ತಿಸಿದಂತೆ ಮನಮೋಹಕವಾಗಿತ್ತು. ಶ್ರೀಮತಿ ಸ್ನೇಹಾ ನಾರಾಯಣ್ ಅವರು ನೃತ್ಯವು ಮನೋರಂಜನೆಯೊಂದಿಗೆ ಮನೋವಿಕಾಸಕ್ಕೂ ಕಾರಣವೆಂದು ಹೇಳಿ ಪ್ರಗತಿ ತಂಡದ ಅಧ್ಯಕ್ಷರಾದ ಪದ್ಮಿನಿ ಅವರಿಗೂ ಮತ್ತು ಸಾಂಸ್ಕೃತಿಕ ವಿಭಾಗದ ಮುಖ್ಯಸ್ಥೆ ಅಮೃತ ಅವರಿಗೂ ಧನ್ಯವಾದಗಳನ್ನು ಅರ್ಪಿಸಿದರು. ಕೊನೆಯದಾಗಿ ಶ್ರೀಮತಿ ಸ್ನೇಹಾ ನಾರಾಯಣ್ ಮತ್ತು ಶ್ರೀ ಯೋಗೇಶ್ ಕುಮಾರ್ ಅವರು ಪಂಚಭೂತಗಳನ್ನು ನಮಿಸಿ ಭೂಮಿ ಮಂಗಳಂ ಎಂಬ ಹಾಡಿಗೆ ನರ್ತಿಸಿ ಜಗನ್ಮಾತೆಗೆ ಸಮರ್ಪಿಸಿದರು . ಸರ್ವರಿಗೂ ಸುಖ ಶಾಂತಿಯನ್ನು ಕೋರಿ ಮಂಗಳ ನರ್ತನವನ್ನು ಪ್ರದರ್ಶಿಸಿದರು .

ಈ ಅದ್ಭುತವಾದ ಕಾರ್ಯಕ್ರಮವನ್ನು ಮತ್ತೆ ನೋಡುವಂತಾಗಲಿ ಎಂದು ಎಲ್ಲರೂ ಬಯಸಿದರು . ಉಮಾ ಮೂರ್ತಿ ಅವರು ಇವರಿಬ್ಬರೂ ಮತ್ತೆ ಬರಲಿ ಎಂದು ಎಲ್ಲರ ಪರವಾಗಿ ಗಣೇಶನನ್ನು ಪ್ರಾರ್ಥಿಸಿ, ವಂದನಾರ್ಪಣೆ ಮಾಡಿದರು. ಪದ್ಮಿನಿ, ಅಮೃತಾ ಮತ್ತು ಮಾಜಿ ಅಧ್ಯಕ್ಷರಾದ ಶ್ರೀ ಪ್ರಸನ್ನ ಕುಮಾರ್ ಅವರು ಗೌರವದಿಂದ ಶ್ರೀಮತಿ ಸ್ನೇಹಾ ನಾರಾಯಣ್ ಮತ್ತು ಶ್ರೀ ಯೋಗೇಶ್ ಕುಮಾರ್ ಅವರನ್ನು ಬೀಳ್ಕೊಟ್ಟರು .

ಗಣೇಶೋತ್ಸವದಲ್ಲಿ ಪ್ರಥಮ ಬಾರಿಗೆ ಕೋಲಾಟವು ಜರುಗಿತು. ಕನ್ನಡ ಶಾಲೆ ಮಕ್ಕಳಿಗೆಲ್ಲ ಪ್ರಶಸ್ತಿಗಳು , ಸರ್ಟಿಫಿಕೇಟ್ ಗಳ ವಿತರಣಾ ಕಾರ್ಯಕ್ರಮವು ಇತ್ತು.ಸಂಜೆ ಟೀ ಮತ್ತು ಕಾಫಿಯೊಂದಿಗೆ ಬೋಂಡಾ , ಬಜ್ಜಿ ರುಚಿಯಾದ ಕುಕೀಸ್ ಕಪ್ ಕೇಕ್ಗಳನ್ನು ಹಿರಿ ಕಿರಿಯರೆಲ್ಲ ಸವಿದರು. ಕೋಲಾಟವನ್ನು ತಾಳಕ್ಕೆ ತಕ್ಕಂತೆ ಕುಣಿದು ರಂಜಿಸಿದರು. ಬೃಂದಾವನದ ಗಣೇಶೋತ್ಸವ ಬಯಲಲ್ಲಿ ಅಂದರೆ ಮರ್ಸರ್ ಕೌಂಟಿ ಪಾರ್ಕ್ ನ್ಯೂ ಜೆರ್ಸಿ ಯಲ್ಲಿ ಅತ್ಯದ್ಭುತವಾಗಿ ನೆರವೇರಿತು ...

**ಸರ್ವೇ ಜನಾಃ ಸುಖಿನೋ ಭವಂತು ..**

**ಪ್ರಕಾಶಕರು:**

**ಬೃಂದಾವನ ಕನ್ನಡ ಕೂಟ**

501(3)(c) ಪಡೆದ ಚಾರಿಟಿ ಸಂಸ್ಥೆ

Karnataka Cultural Organization (KCO) Brindavana
New Jersy, USA

www.Brindavana.org

© 2022 All right reserved. No part of this newsletter may be reproduced, photocopied, or reused without prior permission from the publisher.

ಎಲ್ಲಾ ಮಾಹಿತಿಗಳ ಹಕ್ಕು ಆಯಾ ಲೇಖಕರಿಗೆ ಸೇರಿದ್ದು. "ಬೃಂದಾವನ ವಾಣಿ"ಯಲ್ಲಿ ಪ್ರಕಟವಾಗುವ ಲೇಖನ, ಕಥೆ, ಕವನ, ವಿಚಾರಗಳು ಹಾಗೂ ಮಾಹಿತಿಗಳೆಲ್ಲವುಗಳಿಗೆ ಅವುಗಳ ಲೇಖಕರೇ ಜವಾಬ್ದಾರರು. ಅಂಕಣದಲ್ಲಿ ನೀಡಿರುವ ಮಾಹಿತಿಯ ನಿಖರತೆ ಮತ್ತು ಖಚಿತತೆಗೆ "ಬೃಂದಾವನ ವಾಣಿ" ಮತ್ತು ಬೃಂದಾವನ ಕನ್ನಡ ಕೂಟ ಜವಾಬ್ದಾರರಲ್ಲ. ಚಿತ್ರ ಕೃಪೆ ಅಂತರ್ಜಾಲ/ಲೇಖಕರು

ಲೇಖನಗಳನ್ನು ಕಳುಹಿಸಲು ಮತ್ತು ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: vani@brindavana.org

**ಸದಸ್ಯತ್ವ ಮಾಹಿತಿ**

ಬೃಂದಾವನ ಕನ್ನಡ ಸಂಸ್ಥೆ, ನ್ಯೂ ಜೆರ್ಸಿಯಲ್ಲಿ ಕನ್ನಡ ಮತ್ತು ಕನ್ನಡಿಗರ ಪರವಾದ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಚಾರಿಟೆಬಲ್ ಸಂಸ್ಥೆ. ನ್ಯೂ ಜೆರ್ಸಿ ಹಾಗೂ ಸುತ್ತಮುತ್ತಲಿನ ಕನ್ನಡ ಬಾಂಧವರೆಲ್ಲ ನಮ್ಮೊಡನೆ ಕೈ ಜೋಡಿಸಿ ಕನ್ನಡತನವನ್ನು ಬೆಳೆಸಿ, ಪೋಷಿಸುವಂತೆ ಈ ಮೂಲಕ ಕೇಳಿಕೊಳ್ಳುತ್ತಿದ್ದೇವೆ. ನೀವು ಈಗಾಗಲೇ ಸದಸ್ಯರಾಗಿ ನೋಂದಾಯಿತರಾಗಿರದಿದ್ದಲ್ಲಿ ದಯವಿಟ್ಟು ಸದಸ್ಯರಾಗುವಂತೆ ಈ ಮೂಲಕ ಕೋರುತ್ತಿದ್ದೇವೆ. ವಾರ್ಷಿಕ, ದ್ವೈವಾರ್ಷಿಕ, ಅಜೀವ ಮತ್ತು ವಿದ್ಯಾರ್ಥಿ ಸದಸ್ಯತ್ವಗಳು ಲಭ್ಯ.

www.brindavana.org ಗೆ ಭೇಟಿ ಕೊಟ್ಟು, ನಿಮ್ಮ ವಿವರಗಳನ್ನು ನೀಡಿ, ಸದಸ್ಯತ್ವ ಪಡೆಯಿರಿ. ನಿಮ್ಮ ದೇಣಿಗೆ ಟ್ಯಾಕ್ಸ್ ರಹಿತ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: info@brindavana.org



# ಸಂಭ್ರಮದ ಶರನ್ನವರಾತ್ರಿ

ಶ್ರೀವಿದ್ಯಾ ಪ್ರಶಾಂತ್ , ನ್ಯೂ ಜರ್ಸಿ

ಶಕ್ತಿ ದೇವತೆಯನ್ನು ಆರಾಧಿಸುವ ಹಿಂದೂ ಧರ್ಮದ ದೊಡ್ಡ ಹಬ್ಬಗಳಲ್ಲಿ ಒಂದಾದ ನವರಾತ್ರಿಯು ಅಮೇರಿಕಾದ ನ್ಯೂ ಜರ್ಸಿ ಕನ್ನಡಿಗರೆಲ್ಲರ ಮನೆ ಮನಗಳಲ್ಲಿ ಈ ಬಾರಿ ವಿಶಿಷ್ಟವಾಗಿ, ವಿಜೃಂಭಣೆಯಿಂದ ಆಚರಿಸಲ್ಪಟ್ಟಿತ್ತು. ಒಂಬತ್ತು ರಾತ್ರಿಗಳ ವೈಭವದ ಆಚರಣೆ ಎಲ್ಲಾ ಬಂಧು ಮಿತ್ರರನ್ನು ಜೊತೆಗೂಡಿಸಿ ಸಂಭ್ರಮಿಸುವಂತೆ ಮಾಡಿತ್ತು.

ದಿನವೂ ಸಾಯಂಕಾಲ ಗೊಂಬೆಗಳಿಗೆ ಆರತಿ ಮಾಡಿ ಮುತ್ತೈದೆಯರಿಗೂ ಹಾಗೂ ಕನ್ಯೆಯರಿಗೂ ಅರಶಿನ ಕುಂಕುಮವನ್ನಿತ್ತು ಸತ್ಕರಿಸಿ, ಮನೆಮಂದಿಯೆಲ್ಲಾ ಒಗ್ಗೂಡಿ ಭಕ್ಷ್ಯ-ಭೋಜ್ಯಗಳಿಂದ ಮೃಷ್ಟಾನ್ನವನ್ನು ತಯಾರಿಸಿ ಒಂದಾಗಿ ಸವಿದು ಖುಷಿಯಿಂದ ಹಬ್ಬವನ್ನು ಭಕ್ತಿ ಪ್ರಧಾನವಾಗಿಟ್ಟುಕೊಂಡು ಆಚರಿಸಿದರು. ಒಟ್ಟಿನಲ್ಲಿ ಕೋವಿಡ್ ಎಂಬ ಮಹಾ ಮಾರಿಯಿಂದ ಮುಕ್ತ ಹೊಂದಿದ ಜನ ಮಾನಸವು ಈ ನವ ರಾತ್ರಿಯ ಸಾಂಕೇತಿಕ ಆಚರಣೆಯನ್ನು ಉತ್ಸಾಹದಿಂದ ಮತ್ತು ಅದ್ದೂರಿಯಿಂದ ಸಂಭ್ರಮಿಸಿತು ಎಂದರೆ ತಪ್ಪಾಗಲಾರದು.



**ನಮ್ಮ ನ್ಯೂ ಜರ್ಸಿ ಕನ್ನಡ ಬಾಂಧವರ ಮನೆಯಲ್ಲಿ ಸಜ್ಜಾಗಿರುವ ನವರಾತ್ರಿ ಗೊಂಬೆಗಳು..**





ದಸರಾ ಹಬ್ಬದ ಸಾಂಪ್ರದಾಯಿಕ ಹಾಗೂ ವೈಶಿಷ್ಟ್ಯ ಪೂರ್ಣವಾದ "ಗೊಂಬೆ ಪೂಜೆ"ಯು ಹಬ್ಬಕ್ಕೆ ಮತ್ತಷ್ಟು ಮೆರುಗನ್ನು ನೀಡಿತ್ತು. ಮೊದಲನೇ ದಿನವೇ ಮನೆಯನ್ನು ಸಿಂಗರಿಸಿ ಕಳಶ ಸ್ಥಾಪನೆ ಮಾಡಿ, ಪಟ್ಟದ ಬೊಂಬೆಗಳೊಂದಿಗೆ, ಅಷ್ಟಲಕ್ಷ್ಮೀ, ದಶಾವತಾರ, ನವದುರ್ಗೆ, ಗಣಪತಿ- ಸುಬ್ರಹ್ಮಣ್ಯ, ವೆಂಕಟೇಶ ಕಲ್ಯಾಣ, ಕೃಷ್ಣ ಲೀಲೆ ಹೀಗೆ ಇನ್ನೂ ಅನೇಕ ಪುರಾಣ ಕಥೆಗಳನ್ನು ಆಧರಿಸಿದ ಗೊಂಬೆಗಳು, ಅಲ್ಲದೆ ಪ್ಲಾಸ್ಟಿಕ್ ನಿಂದ ಮಾಡಿದ ಆಟಿಕೆಗಳು ಮತ್ತು ಕಟ್ಟಿಗೆಯ ಗೊಂಬೆಗಳು ಅಪೂರ್ವವಾಗಿ ಸಜ್ಜಾಗಿದ್ದವು.













## *ಅರುಣ್ ಮೈಸೂರು ಇವರ ಪರಿಕಲ್ಪನೆಯಲ್ಲಿ ಅಪೂರ್ವ ವಾಗಿ ಮೂಡಿಬಂದ "ಗುರುಕುಲ" ಪ್ರತಿಕೃತಿ...*

ನ್ಯೂ ಜೆರ್ಸಿಯ ಈಸ್ಟ್ ಬ್ರುನ್ಸ್ವಿಕ್ ನಗರದಲ್ಲಿ ನೆಲೆಸಿರುವ ಅರುಣ್ ಮೈಸೂರು ಕುಟುಂಬ ಪ್ರತಿ ವರ್ಷವೂ ನವರಾತ್ರಿಯ ಗೊಂಬೆಗಳನ್ನು ವಿಶಿಷ್ಟವಾದ ಪರಿಕಲ್ಪನೆಯನ್ನು ಆಧರಿಸಿ ತಮ್ಮ ಆಸಕ್ತಿಗೆ ಅನುಗುಣವಾಗಿ ಸಂಗ್ರಹಿಸಿ, ಅವುಗಳನ್ನು ಒಪ್ಪವಾಗಿ ಜೋಡಿಸಿ, ಬೆಳಕು- ಬಣ್ಣ ಮತ್ತು ಅಲಂಕಾರದಿಂದ ಸಜ್ಜುಗೊಳಿಸಿ ಪ್ರದರ್ಶನಕ್ಕಿಟ್ಟು ಸ್ನೇಹಿತರನ್ನು ಮನೆಗೆ ಕರೆದು ಸಂತಸದಿಂದ ಗೊಂಬೆ ಹಬ್ಬವನ್ನು ಆಚರಿಸುತ್ತಾರೆ.

ಈ ಬಾರಿ "ಗುರುಕುಲ"ದ ಮಾದರಿಯನ್ನು , ಅರುಣ್ ಮೈಸೂರು ರವರು ತಮ್ಮ ಕಲ್ಪನೆಗೆ ಅನುಗುಣವಾಗಿ ಜೇಡಿಮಣ್ಣನ್ನು ಉಪಯೋಗಿಸಿ, ಋಷಿ- ಮುನಿಗಳು, ಹಟ್ಟಿ, ಪ್ರಾಣಿ- ಪಕ್ಷಿ ಇತ್ಯಾದಿ ಎಲ್ಲಾ ಪುಟ್ಟ-ಪುಟ್ಟ ಪ್ರತಿಕೃತಿಗಳನ್ನು ತಯಾರಿಸಿ ಸುಂದರವಾಗಿ ಮತ್ತು ಅಪೂರ್ವವಾಗಿ ಜೋಡಿಸಿ ಪ್ರದರ್ಶನಕ್ಕೆ ಇಟ್ಟಿದ್ದರು. ಇವರ ಈ ಪ್ರತಿಭಾಪೂರ್ಣ ಕಾರ್ಯ ಹಲವು ಸ್ನೇಹಿತರ ಮೆಚ್ಚುಗೆಗೆ ಪಾತ್ರವಾಯಿತು. ಅರುಣ್ ರವರ ಈ ಆಸಕ್ತಿ ಮತ್ತು ಉತ್ಸಾಹ ಹಾಗೂ ನಮ್ಮ ಸಂಸ್ಕೃತಿಯ ಬಗೆಗಿನ ಕಾಳಜಿ ಸದಾ ಹೀಗೆಯೇ ಮುಂದುವರಿದು, ಮುಂಬರುವ ಪೀಳಿಗೆಗೂ ಮಾದರಿಯಾಗಲಿ ಎಂದು ಹಾರೈಸುತ್ತೇನೆ.








# ಬಾಳೆಯ ಭಯೋತ್ಪಾದಕರು

**ಸುಮಾ ರಮೇಶ್ ,** ಹಾಸನ

ಬಹಳ ದಿನಗಳಿಂದ ಬಳಸುತ್ತಿದ್ದ ಮುನ್ನೂರು ಲೀಟರಿನ ಒಂದು ಪ್ಲಾಸ್ಟಿಕ್ ಡ್ರಮ್ ಇತ್ತೀಚೆಗೆ ಲೀಕಾಗಲಾರಂಭಿಸಿತು. ಹಿಂದೆ ಮನೆ ಕಟ್ಟಿಸುವಾಗ ಕ್ಯೂರಿಂಗ್ ಮಾಡಲು ಅದನ್ನು ಬಳಸುತ್ತಿದ್ದೆವು. ನಂತರ ಮೋಟರ್ ಆನ್ ಮಾಡಿದಾಗ ಓವರ್ ಫ್ಲೋ ವಾಟರ್ ಅದರೊಳಗೆ ಕಲೆಕ್ಟ್ ಆಗುತ್ತಿತ್ತು. ಆ ನೀರು ಗಿಡಗಳಿಗೆ ಬಳಕೆಯಾಗುತ್ತಿತ್ತು. ಹೀಗೆ ದಶಕಗಳಿಂದ ಸೇವೆ ಸಲ್ಲಿಸಿ ಸುಸ್ತಾಗಿದ್ದ ಅದು ವೃದ್ಧರ ಮೂತ್ರ ಕೋಶ ನಿಯಂತ್ರಣ ಕಳೆದುಕೊಂಡು ಲೀಕಾಗುವಂತೆ ಇನ್ನು ನನ್ನಿಂದಾಗದು ಎಂದು ತನ್ನ ಸವೆದ ಬೇಸ್ ನಿಂದ ಹಾಗು ಹೊರಮೈಯಿಂದ ಹನಿಸಲಾರಂಭಿಸಿತು. ಅದನ್ನು ಮೂಲೆಯಲ್ಲಿಟ್ಟರೆ ಅಲ್ಲೇ ಧೂಳು ಹಿಡಿದು ಸೆಲಬೆ ಕಟ್ಟಿ ಕೂರುವುದು.....ಡಿಸ್ಪೋಸ್ ಮಾಡಿದರೆ ಒಳಿತೆನಿಸಿತು. ಹಳೇ ಪ್ಲಾಸ್ಟಿಕ್ ನವನಿಗೆ ಕೊಟ್ಟರೆ ಹತ್ತುಪಾಯಿ ಕೊಡುವುದೂ ಡೌಟಿತ್ತು , ಅದರ ಬದಲು ಅದರೊಳಗೆ ಮಣ್ಣು ತುಂಬಿ ಬಾಳೆಗಿಡ ನೆಟ್ಟರೆ ಹೇಗೆ ಎಂಬ ಆಲೋಚನೆ ಮೂಡಿತು. ಸರಿ..... ಕೂಡಲೇ ಕಾರ್ಯೋನ್ಮುಖಳಾದೆ. ನನ್ನ ಸಸ್ಯ ಪ್ರೇಮಕ್ಕೆ ಸಾಕ್ಷಿಯಾಗಿ ಈಗಾಗಲೇ ನಮ್ಮ ಕಾಂಪೌಂಡಿನೊಳಗೆ ಮರಿಮಲೆನಾಡೇ ಸೃಷ್ಟಿಯಾಗಿತ್ತು. ಅದಕ್ಕೆ ಕಲಶವಿಟ್ಟಂತೆ ಈ ಹೊಸ ಸದಸ್ಯನ ಸೇರ್ಪಡೆಯಾಗುವುದರಲ್ಲಿತ್ತು.

ಯೂಟ್ಯೂಬ್ ನಲ್ಲಿ ಮಾಹಿತಿ ಸಂಗ್ರಹಿಸಿ ಮಣ್ಣು, ಗೊಬ್ಬರ ಹಾಗು ಮರಳನ್ನು ನಿರ್ದಿಷ್ಟ ಪ್ರಮಾಣದಲ್ಲಿ ಬೆರೆಸಿ ಡ್ರಮ್ ಗೆ ತುಂಬಿದೆ. ನರ್ಸರಿಯಿಂದ ಬಾಳೆ ಸಸಿ ತಂದು ಅದರಲ್ಲಿ ನೆಟ್ಟೆ. ಪ್ರತಿದಿನ ಅದರ ಬೆಳವಣಿಗೆಯನ್ನು ನೋಡುವುದೇ ಒಂದು ಸಂಭ್ರಮ. ನನ್ನ ಎಕ್ಸೈಟ್ಮೆಂಟ್ ಕಂಡು ಮನೆಯವರಿಗೆಲ್ಲಾ ಮೋಜು. ಬೆಳಿಗ್ಗೆ ಎದ್ದ ಕೂಡಲೇ ಅದರ ಬಳಿ ನಿಂತು ಹೊಸ ಎಲೆ , ಚಿಗುರುಗಳನ್ನು ಗಮನಿಸುತ್ತಿದ್ದೆ. ಅದರಲ್ಲಿ ಬಾಳೆಗೊನೆ ಬಿಡುವ ಬಗ್ಗೆ ಮನೆಯವರಿಗೆಲ್ಲಾ ಅನುಮಾನವಿತ್ತು. ನಾನು ಅಸಾಧ್ಯವಾದದ್ದನ್ನೇನೋ ನಿರೀಕ್ಷಿಸುತ್ತಿರುವೆ ಎಂಬ ಭಾವ. ಇದಕ್ಕಿಂತಾ ಚಿಕ್ಕ ಪಾಟ್ ನಲ್ಲಿ ಬಾಳೆಗೊನೆ ಬಿಟ್ಟಿರೋ ಫೋಟೋ , ವಿಡಿಯೋಸ್ ನ ಯೂಟ್ಯೂಬ್ ನಿಂದ ತೆಗೆದು ನಮ್ಮ ಫ್ಯಾಮಿಲಿ ವಾಟ್ಸಾಪ್ ಗ್ರೂಪಿಗೆ ಶೇರ್ ಮಾಡಿದೆ. ಫೋಟೋಶಾಪ್ ಮಾಡಿದ ವೈರಲ್ ವಿಡಿಯೋಸ್ ಹಾಗು ಎಡಿಟೆಡ್ ಪಿಕ್ಚರ್ಸ್ ನೋಡಿ ಯಾಮಾರ್ತಿದೀಯಾ....ಎಂಬಂತ ಡೌನ್ ಫೇಸ್ ಎಮೋಜೀಸ್ ಗ್ರೂಪ್ ತುಂಬಾ ಹರಿದಾಡಿದವು. ಕುಂಡವನ್ನು ದಾಟಿ ಹೊರಬರಲಾಗದ ಬೇರಿನ ಸೀಮಿತತೆಯಲ್ಲಿ ಫಲವನ್ನು ನಿರೀಕ್ಷಿಸುವ ಬಗ್ಗೆ ಅವರಿಗೆಲ್ಲಾ ಅನುಮಾನವಿತ್ತು. ಗೊನೆ ಬಿಡದಿದ್ರೂ ಎಲೆ ಹಾಗು ದಿಂಡನ್ನು ಯೂಸ್ ಮಾಡ್ಬೋದು ಎಂಬ ಸಮಾಧಾನ ನನಗೆ. ನನ್ನ ಪ್ಯಾಷನ್ ಹಾಗು ಡೆಡಿಕೇಶನ್ ದಿಂಡಿಗಷ್ಟೇ ಸೀಮಿತ ಎಂಬ ಭಾವದಿಂದ ಮನೆಯವರು ನೋಡುವಾಗ ಇವರಿಗೆಲ್ಲಾ ಸ್ವಲ್ಪ ಇಮೋಶನ್ಸ್ ಕಮ್ಮಿ ಎನಿಸುತ್ತಿತ್ತು. ಸಸ್ಯ ಸಾನಿಧ್ಯದ ಸ್ವರ್ಗೀಯ ಸುಖ, ನನ್ನ ಮಾತೃ ಹೃದಯಕ್ಕೆ ಮಗುವಿನ ಬೆಳವಣಿಗೆಯ ಪ್ರತೀ ಹಂತವನ್ನೂ , ಕಂಪನವನ್ನೂ ಅನುಭವಿಸಿದಂತಹ ಆನಂದ ನೀಡುತ್ತಿತ್ತು. ಪ್ರತಿನಿತ್ಯ ಅದರ ಆರೈಕೆಯಲ್ಲಿ ನನ್ನ ಮನದ ಖಾತೆಗೊಂದಿಷ್ಟು ಸಂತೋಷ, ಸಡಗರ ಜಮೆಯಾಗುತ್ತಿತ್ತು.

ದಿನಕಳೆದಂತೆ ನನ್ನ ಕದಳೀಗಿಡ ಸಮೃದ್ಧವಾಗಿ ಬೆಳೆಯಲಾರಂಭಿಸಿತು. ಅದರ ಎಲೆಗಳು ದಿಂಡಿನ ಸುತ್ತಲೂ ನವಿರಾಗಿಯೂ , ವಿಸ್ತಾರವಾಗಿಯೂ ಹರಡಿ ಶೋಡಷಿಯಂತೆ ಬಾಗಿ ಬಳುಕಿ ನನ್ನ ಮನಕ್ಕೆ ನವಚೈತನ್ಯವನ್ನು ತುಂಬುತ್ತಿತ್ತು. ಸಂಪೂರ್ಣ ಒಣಗಿ ಕೆಳಗೆ ಜಗ್ಗಿದ ಹಳೆ ಎಲೆಗಳನ್ನು ಆಗಾಗ ಕತ್ತರಿಸುತ್ತಿದ್ದರಿಂದ ಗಿಡದ ಅಂದ ಮತ್ತೂ ಹೆಚ್ಚಿತ್ತು. ಗೊನೆ ಏನಾದರೂ ಬರುವ ಸೂಚನೆ ಇದೆಯೇ ಎಂದು ಪ್ರತಿದಿನ ಅದರ ಸುಳಿಯನ್ನು ಗಮನಿಸುತ್ತಿದ್ದೆ. ಅದನ್ನು ಸ್ವಾಗತಿಸಲು ನನ್ನ ಮನ ಕಾತರಿಸುತ್ತಿತ್ತು. ಮನೆಗೆ ಬಂದ ಗೆಳತಿಯರೆಲ್ಲಾ ನೋಡಿ ಪ್ರಶಂಸಿಸಿ ಗೊನೆ ಬಿಟ್ಟಾಗ ನಮಗೊಂದು ಚಿಪ್ಪು ಕೊಡೋದು ಮರೀಬೇಡ ಎಂದು ಅಡ್ವಾನ್ಸ್ ಬುಕಿಂಗ್ ಮಾಡಿ ಹೋಗಿದ್ದರು. ಒಂದೆರಡು ಬಾರಿ ಅದರ ಎಲೆಯನ್ನು ಕತ್ತರಿಸಿ ತಂದು ಮನೆಯವರೆಲ್ಲಾ ಊಟ ಮಾಡಿದಾಗ ಸಾರ್ಥಕ ಭಾವದಿಂದ ಒಂದು ಹಿಡಿ ಹೆಚ್ಚೇ ಉಂಡಿದ್ದೆ.

ಚಳಿಗಾಲ ಪ್ರಾರಂಭವಾದಂತೆ ಗಿಡ ಸ್ವಲ್ಪ ಮಂಕಾಯಿತು. ಬಿಳಿಯ ಪೌಡರಿನಂತಹ ಕಲೆ ಎಲೆಗಳ ಹಿಂಭಾಗದಲ್ಲಿ ಮೂಡಿ ಗಿಡದ ಆರೈಕೆ ಮಾಡುವಾಗ ಅದು ನನ್ನ ಮೈಮೇಲೂ ಉದುರುತ್ತಿತ್ತು. ಈ ಮಧ್ಯೆ ಗಾಳಿಯ ಹೊಡೆತಕ್ಕೆ ಅದರ ಎಲೆಗಳು ಅಲ್ಲಲ್ಲಿ ಹರಿದು ಮುರುಟಿಕೊಂಡಿತು. ಗಿಡದ ಎಲೆಗಳು ಮೊದಲಿನ ತಾಜಾತನ ಕಳೆದುಕೊಂಡು ಕಂದು ಬಣ್ಣಕ್ಕೆ ತಿರುಗಿ ಮೇಕಪ್ ತೆಗೆದ ಪೋಷಕನಟಿಯನ್ನು ನೆನಪಿಸುತ್ತಿತ್ತು. ಯಾವುದೋ ಒಂದೆರಡು ಸ್ಪ್ರೇ ಬಳಸಿ ನೋಡಿದೆ, ಪ್ರಯೋಜನವಾಗಲಿಲ್ಲ. ಬಾಳೆಗಿಡವನ್ನು ಕಂಡೊಡನೆ ಸಂತೋಷದಿಂದ ಅರಳುತ್ತಿದ್ದ ಮನಕ್ಕೆ ಮೋಡ ಕವಿದಂತಾಯಿತು. ಅದರ ಆರ್ದ್ರ ನೋಟ ನನ್ನೆದೆಯ ತೋಯಿಸುತ್ತಿತ್ತು.

ಅಂದು ಬೆಳಗ್ಗೆ ಎದ್ದು ಎಂದಿನಂತೆ ಅದರ ಮುಂದೆ ನಿಂತೆ. ಎಲೆಗಳೆಲ್ಲಾ ಹರಿದು ಅಲ್ಲಲ್ಲೆ ಸುರುಳಿ ಸುತ್ತಿಕೊಂಡಿತ್ತು. ಅದರ ಮಾಟವೆಲ್ಲಾ ಒಪ್ಪ ಕಳೆದುಕೊಂಡು ಚೆಲ್ಲಾಪಿಲ್ಲಿಯಾಗಿತ್ತು. ಗಿಡದ ಅಂದವೇ ನಶಿಸಿತ್ತು. ನನ್ನೆಡೆಗೆ ತನ್ನ ಪೇಲವ ನೋಟ ಬೀರುತ್ತಾ ನರಳುತ್ತಿತ್ತು. ನೋವಿನಿಂದ ಅದರ ಮೈಯನ್ನು ಸವರಿದೆ. ಕಾಲಿಗೆ ಏನೋ ಅಂಟಿದ ಅನುಭವವಾಯಿತು. ನನ್ನ ದೃಷ್ಟಿ ಕೆಳಗೆ ಹರಿದಾಗ ಅವಾಕ್ಕಾದೆ. ನೆಲದ ಮೇಲೆಲ್ಲಾ ಹೈಬ್ರಿಡ್ ಹೆಸರುಕಾಳಿನ ಗಾತ್ರದ ನೂರೆಂಟು ಹಸಿರು ಉಂಡೆಗಳು ಉದುರಿದ್ದವು.

ಇದೇನೆಂದು ಸೂಕ್ಷ್ಮವಾಗಿ ಗಮನಿಸಿದಾಗ ಯಾವುದೋ ಕೀಟದ ವಿಸರ್ಜನೆಯೆಂದು ಮನವರಿಕೆಯಾಯಿತು. ಅಷ್ಟೊಂದು ಪ್ರಮಾಣದ ಹಿಕ್ಕೆ ಒಂದೆರಡು ಹುಳುವಿನಿಂದ ಎಕ್ಸ್ ಕ್ರೀಟ್ ಆಗಿರಲು ಸಾಧ್ಯವಿರಲಿಲ್ಲ. ಭಾರೀ ಪ್ರಮಾಣದಲ್ಲೇ ದಾಳಿ ನಡೆದಿದೆ ಎಂಬ ಅನುಮಾನ ಮೂಡಿತು. ಒಂದು ಪೊರಕೆಯಿಂದ ಅದನ್ನೆಲ್ಲಾ ಗುಡಿಸಿದೆ. ಒಂದು ಗಿಡಕ್ಕಾಗುವಷ್ಟು ಗೊಬ್ಬರ ಗುಡ್ಡೆಯಾಯಿತು. ಹಾಗೆಯೇ ತಲೆಯೆತ್ತಿ ಗಿಡವನ್ನು ಸೂಕ್ಷ್ಮವಾಗಿ ಪರಿಶೀಲಿಸಿದೆ. ಎಲೆಯ ಅಂಚಿನಲ್ಲಿದ್ದ ಸುರುಳಿಗಳನ್ನು ಕಂಡು ಅನುಮಾನವಾಯಿತು. ಸಮಸ್ಯೆ ಎಲ್ಲಿದೆ ಎಂದು ಕಂಡುಕೊಳ್ಳುವುದು ಪರಿಹಾರದತ್ತ ಮೊದಲ ಹೆಜ್ಜೆಯಾಗಿತ್ತು. ನಿಧಾನವಾಗಿ ಕತ್ತರಿಯಿಂದ ಒಂದು ಸುರುಳಿಯನ್ನು ಬೇರ್ಪಡಿಸಿದೆ. ಸ್ಪೆಷಲ್ ಬೀಡಾದಂತೆ ಪ್ಯಾಕ್ ಆಗಿದ್ದ ಅದನ್ನು ಮೆಲ್ಲನೆ ಬಿಚ್ಚಲಾರಂಭಿಸಿದೆ. ಕಲಾತ್ಮಕವಾಗಿದ್ದ ಮಡಿಕೆಗಳು ಅನ್ಫೋಲ್ಡ್ ಆದಂತೆಲ್ಲಾ ನನ್ನ ಎದೆಬಡಿತವೂ ಏರುತ್ತಿತ್ತು. ಕೊನೆಯ ಮಡಿಕೆಯನ್ನು ತೆಗೆದಾಗ ರೇಷ್ಮೆ ಹುಳುವಿನಂತ ಕೀಟ ಗರ್ಭದಿಂದ ಹೊರಬಂದ ಶಿಶುವಿನಂತೆ ಹೊರಳುತ್ತಾ ತನ್ನ ಪ್ರತಿರೋಧ ವ್ಯಕ್ತಪಡಿಸಿತು.

ವಂಶಜರೊಂದಿಗೆ ಸೇರಿಸಿದೆ. ಅಲ್ಲೇ ಇದ್ದ ಸೈಜ್ ಗಲ್ಲನ್ನು ಆ ಗುಡ್ಡೆಯ ಮೇಲಿಟ್ಟು ಹಿಂತಿರುಗಿ ನೋಡದೆ ಒಳಬಂದೆ. ಸಾಮೂಹಿಕ ಹತ್ಯಾಕಾಂಡಕ್ಕೆ ಸಾಕ್ಷಿಯಾಗಿದ್ದಕ್ಕೋ ಏನೋ ಹೊಟ್ಟೆ ತೊಳೆಸಿದಂತಾಯಿತು. ಹಾಗೇ ಬಚ್ಚಲಿಗೆ ಹೋಗಿ ಹೊಟ್ಟೆ ಖಾಲಿ ಮಾಡಿ ಸ್ನಾನ ಮುಗಿಸಿ ಬಂದೆ.

ಒಂದು ವಾರದವರೆಗೆ ಬಾಳೆ ಪಾಟಿನೆಡೆಗೆ ತಿರುಗಿ ಕೂಡಾ ನೋಡಲಿಲ್ಲ. ಊಟ ಮಾಡುವಾಗಲೂ, ನಿದ್ರೆಯಲ್ಲೂ ..... ಎಲ್ಲಿ ನೋಡಿದರೂ ಸುರುಳಿಯೊಳಗಿನ ಭಯೋತ್ಪಾದಕರದ್ದೇ ಮೆರವಣಿಗೆ, ಕದಳಿಯ ಕಿಲ್ಲರ್ಸ್ ದೇ ಕನವರಿಕೆ, ನನ್ನ ಮೆಮೊರಿಯಲ್ಲಿ ಡಿಲೀಟ್ ಆಗದ ಡೇಟಾದಂತೆ ಕಾಡುತ್ತಿತ್ತು. ಈ ಮಧ್ಯೆ ನಿನ್ನ ಬಾಳೆಗಿಡ ಗೊನೆ ಬಿಡ್ತಾ...ನಮಗೊಂದು ಚಿಪ್ಪು ಸಿಗುತ್ತಾ ಎಂದು ಕರೆ ಮಾಡಿ ಕೇಳುವ ಗೆಳತಿಯರ ಗೋಳು. ಮರೆಯೋಣವೆಂದರೆ ಮರೆಯಲಿ ಹ್ಯಾಂಗ.... ಎಂಬಂತಾಯಿತು.



ನಾನು ಮಿಡುಕಿದ ರಭಸಕ್ಕೆ ಕೀಟದೊಂದಿಗೆ ಅದರ ಕವಚವೂ ಕೆಳಗೆ ಬಿತ್ತು. ಒಂದರೆಕ್ಷಣ ಸುಧಾರಿಸಿಕೊಂಡು ಬಡಪಾಯಿ ಗಿಡದ ತುಂಬಾ ಸುತ್ತಿಕೊಂಡಿದ್ದ ಸುರುಳಿಗಳನ್ನು ಗಮನಿಸಿದೆ. ಇಪ್ಪತ್ತಕ್ಕೂ ಹೆಚ್ಚು ಇದ್ದವು.ಅವನ್ನೆಲ್ಲಾ ಕತ್ತರಿಸಿ ಕೆಳಗೆ ಹಾಕಿದೆ. ಪ್ರತಿಯೊಂದನ್ನೂ ಬಿಚ್ಚಿ ನೋಡುವ ಉತ್ಸಾಹವಾಗಲೀ, ಗುಂಡಿಗೆಯಾಗಲೀ ಇರಲಿಲ್ಲ. ನನ್ನ ಬಾಳೆಯ ಸುಂದರ ಎಲೆಗಳನ್ನೆಲ್ಲಾ ನುಣ್ಣಗೆ ಸುತ್ತಿ ಬೆಚ್ಚನೆಯ ವಸತಿ ಕಲ್ಪಿಸಿಕೊಂಡು ಸುಖಿಸುತ್ತಿದ್ದ ಶತ್ರು ಪಾಳಯವನ್ನು ಹಾಗೆಯೇ ಬಿಡಲು ಮನಸ್ಸು ಬರಲಿಲ್ಲ. ಬಿಟ್ಟರೆ ಇನ್ನಷ್ಟು ಗಿಡಗಳಿಗೆ ಆಕ್ರಮಣ ಮಾಡುವುದರಲ್ಲಿ ಸಂಶಯವಿರಲಿಲ್ಲ. ಶತ್ರುಶೇಷವೂ ಉಳಿಯದಂತೆ ನಾಶ ಮಾಡಬೇಕಿತ್ತು. ಎಲ್ಲವನ್ನೂ ಬಿಚ್ಚದೆ ಒಂದೆಡೆ ಗುಡ್ಡೆ ಮಾಡಿದೆ. ಈಗಾಗಲೇ ಬಿಚ್ಚಿದ್ದ ಒಂದು ಸುರುಳಿಯಿಂದ ಹೊರಬಂದಿದ್ದ ರೆಪ್ರಸೆಂಟೇಟಿವ್ ಸ್ಯಾಂಪಲ್ ನಂತಿದ್ದ ಕೀಟ ಅಲ್ಲೇ ಆಸರೆಗಾಗಿ ತೆವಳುತ್ತಿತ್ತು. ಅದನ್ನೂ ಅದರ

ಹದಿನೈದು ದಿನ ಕಳೆದಂತೆ ಮನಸ್ಸು ಸ್ವಲ್ಪ ತಹಬಂದಿಗೆ ಬಂದಿತು. ಅಂದು ಮುಂಜಾನೆ ಎದ್ದು ಹೊರಬಂದವಳೇ ಮೆಲ್ಲನೆ ನನ್ನ ಬಾಳೆಗಿಡದ ಪಾಟಿನೆಡೆಗೆ ದೃಷ್ಟಿ ಹಾಯಿಸಿದೆ. ಏನಾಶ್ಚರ್ಯ ! ನಳನಳಿಸುವ ಎರಡು ಹೊಚ್ಚ ಹೊಸ ಸುಂದರ ಚಿಗುರೆಲೆಗಳು ಬಳುಕುತ್ತಾ ಚಾಮರ ಬೀಸುತ್ತಾ ನಿತ್ಯ ಶೋಡಷಿಯಂತೆ ಕಂಗೊಳಿಸುತ್ತಿದ್ದವು. ನಿರ್ಜೀವ ವಾಗಿದ್ದ ಅಂಗಳದಲ್ಲಿ ಚಿಗುರಿದ ತಾಜಾ ಹಸುರೆಲೆಗಳು ಗಿಡದ ಅಸ್ತಿತ್ವವನ್ನು ಪ್ರಕಟಿಸಿ ನಲಿಯುತ್ತಿದ್ದವು. ಬದುಕಿನ ಹಲವು ಸುಳಿಗಳನ್ನು ಜಯಿಸಿ ಗಿಡ ಮರುಹುಟ್ಟು ಪಡೆದು ನಗುತ್ತಿತ್ತು. ನಿದ್ರೆಯಿಲ್ಲದೆ ನರಳಿದ್ದ ನನ್ನ ಮನ ಮುದಗೊಂಡು ನವಿರಾಗಿ ಕಂಪಿಸಿತು.



# ತಲೆಯಲ್ಲಿ ಹೊಳೆದದ್ದು ಕಲೆಯಾಗಿ ಅರಳಿತು

**ರೋಹಿಣಿ ಮಹೇಶ್,** ನ್ಯೂ ಜರ್ಸಿ





ರಾಜಸ್ಥಾನಿ ಶೈಲಿಯಲ್ಲಿ "ಐರಾವತ"







ತಂಜಾವೂರಿನ ದೀಪಗಳು



ರಾಜಸ್ಥಾನಿ ಶೈಲಿಯಲ್ಲಿ "ಒಂಟೆ"



ರಾಜಸ್ಥಾನಿ ಶೈಲಿಯಲ್ಲಿ "ಕಾಮಧೇನು"



ಪುಣ್ಯಕೋಟಿಯ ಪಟವಿದು



# ಕುಳೂರ್ - ಕೊಳಲು

ಸನ್ಮಯಿ ಸೋಮಯಾಜಿ (ಗೂಗಲ್ translate ನೆರವಿನಿಂದ)

**ನಾ**ನು ಶಾಲೆಯಲ್ಲಿ ಪಾಶ್ಚಿಮಾತ್ಯ ಕೊಳಲನ್ನು ಕಲಿಯುತ್ತಿದ್ದೇನೆ, ಹೀಗಾಗಿ ಕರ್ನಾಟಕ ಶಾಸ್ತ್ರೀಯ ಕೊಳಲು ಕಲಿಯಲು ತುಂಬಾ ಉತ್ಸುಕಳಾಗಿದ್ದೆ. ನಾನು ಸುಮಧುರ ಕರ್ನಾಟಕ ಕೊಳಲು ಸಂಗೀತ ಕೇಳುವುದನ್ನು ಆನಂದಿಸುತ್ತೇನೆ. ರವಿಚಂದ್ರ ಕುಳೂರ್ ಅವರು ಕಲಿಸುವ ಕೊಳಲು ವರ್ಕ್‌ಶಾಪ್ ನ್ಯೂ ಜೆರ್ಸಿಯಲ್ಲಿ ನಡೆಯಲಿದೆ ಎಂದು ನನ್ನ ತಂದೆ ಹೇಳಿದಾಗ, ನನಗೆ ಅದಕ್ಕೆ ಹೋಗಲೇ ಬೇಕೆಂಬ ಮನಸ್ಸಾಯಿತು. ರವಿ ಕುಳೂರ್ ಅವರ ಬಗ್ಗೆ ಹೆಚ್ಚು ತಿಳಿದುಕೊಳ್ಳಲು ಶುರು ಮಾಡಿದೆ. ಪ್ರದರ್ಶನ ನೀಡಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಸಂಗೀತ ಜ್ಞಾನವನ್ನು ಇತರರಿಗೆ ಪಸರಿಸುವಲ್ಲಿ ರವಿ ಅವರು ತುಂಬಾ ಶ್ರಮಿಸುತ್ತಿದ್ದಾರೆ.

ನ್ಯೂ ಜೆರ್ಸಿಯ ಕೊಳಲು ಕಾರ್ಯಾಗಾರವು ಬೇಸಿಗೆಯ ರಜೆಯಲ್ಲಿ ಅರ್ಚನಾ ಮತ್ತು ಶರತ್ ಮೈನಂಪಾಟಿ ಅವರ ಮನೆಯಲ್ಲಿ ಆಗಸ್ಟ್ ೨೩ ರಿಂದ ೨೭ರ ವರೆಗೆ ನಡೆಯಿತು. ಇದನ್ನು ನ್ಯೂ ಜೆರ್ಸಿ ಬೃಂದಾವನ ಕನ್ನಡ ಕೂಟ ಸಂಸ್ಥೆಯು ಆಯೋಜಿಸಿತ್ತು.



ರವಿಚಂದ್ರ ಕುಳೂರ್ ಅವರು ಅಧ್ಭುತ ಕೊಳಲುವಾದಕರು. ಅವರು 6 ನೇ ವಯಸ್ಸಿನಲ್ಲಿಯೇ ತಮ್ಮ ತಂದೆಯವರಲ್ಲಿ ಕರ್ನಾಟಕ ಕೊಳಲು ಕಲಿಯಲು ಪ್ರಾರಂಭಿಸಿದರು. 9ನೇ ವಯಸ್ಸಿನಲ್ಲಿ ತಾವೇ ಸಂಗೀತ ಕಛೇರಿ ನೀಡುತ್ತಿದ್ದರು. ಕಾಲೇಜಿನಲ್ಲಿ ಇಂಜಿನಿಯರಿಂಗ್ ಓದಿದ್ದರೂ ಸಂಗೀತವನ್ನೇ ವೃತ್ತಿಯಾಗಿ ಆಯ್ಕೆ ಮಾಡಿಕೊಂಡರು . ಅವರು ಪಂಡಿತ್ ರವಿ ಶಂಕರ್ ಮತ್ತು ಡಾ. ಎಂ. ಬಾಲಮುರಳಿಕೃಷ್ಣ ಅವರಂತಹ ಅನೇಕ ಪ್ರಸಿದ್ಧ ಸಂಗೀತಗಾರರೊಂದಿಗೆ ವಿಶ್ವದಾದ್ಯಂತ ಪ್ರದರ್ಶನ ನೀಡಿದ್ದಾರೆ. ಅವರು ಪ್ರಪಂಚದಾದ್ಯಂತ ಅನೇಕ ಕಾರ್ಯಾಗಾರಗಳನ್ನು ಸಹ ಮಾಡಿದ್ದಾರೆ. ಅವರು USA ಹಾಗೂ ಆಸ್ಟ್ರೇಲಿಯಾ ಸೇರಿದಂತೆ 35 ದೇಶಗಳಲ್ಲಿ 1000 ಕ್ಕೂ ಹೆಚ್ಚು ಸಂಗೀತ ಕಚೇರಿಗಳಲ್ಲಿ ವಿದ್ಯಾರ್ಥಿಗಳನ್ನು ಎರಡು ಗುಂಪುಗಳಾಗಿ ಮಾಡಿದ್ದರು. ಎರಡೂ ತರಗತಿಗಳಲ್ಲಿ ವಿವಿಧ ವಯೋಮಾನದ ವಿದ್ಯಾರ್ಥಿಗಳಿದ್ದರು. ಉತ್ತರ ಕೆರೊಲಿನಾ ಮತ್ತು ಸಿಯಾಟಲ್‌ನಂತಹ ದೂರದ ಊರುಗಳಿಂದ ವಿದ್ಯಾರ್ಥಿಗಳು ಬಂದಿದ್ದರು. ನಾನು ಅನೇಕ ಹೊಸ ಜನರನ್ನು ಭೇಟಿಯಾದೆ, ಮತ್ತು ಅವರಲ್ಲಿ ಒಬ್ಬರು ಪ್ರತಿದಿನ ನಮಗೆ donuts ತರುತ್ತಿದ್ದರು :).

ಕೊಳಲು ಹಾಗು ಸಂಗೀತದ ಸ್ವಲ್ಪ ಹಿನ್ನೆಲೆ ಇದ್ದ ವಿದ್ಯಾರ್ಥಿಗಳು ಒಂದು ಗುಂಪಿನಲ್ಲಿದ್ದರು ಮತ್ತು ಅವರಿಗೆ ಬೆಳಿಗ್ಗೆಯಿಂದ ಸಂಜೆಯ ವರೆಗೆ ಪಾಠ ನಡೆಯುತ್ತಿತ್ತು. ಆದ್ಯ, ಶ್ರೀಕರ್, ಅದ್ವೈತ್ ಮತ್ತು ನಾನು ಈ ಗುಂಪಿನಲ್ಲಿದ್ದೆವು.

ಪೂರ್ತಿ ಹೊಸಬರಿಗೆ ಮಧ್ಯಾಹ್ನ ಪಾಠ ನಡೆಯುತ್ತಿತ್ತು. ಸಾರ್ಥಕ್, ಸ್ವರೂಪ್, ಶೇಖರ್ ಅಂಕಲ್ ಮತ್ತು ನನ್ನ ತಂದೆ (ಸುಬ್ರಹ್ಮಣ್ಯ ಸೋಮಯಾಜಿ) ಈ ಗುಂಪಿನಲ್ಲಿದರು.

ಮೊದಲ ದಿನದ ಬೆಳಗಿನ ಅವಧಿಯಲ್ಲಿ ರವಿ ಸರ್ ನಮಗೆಲ್ಲ ಹೊಸ ಕೊಳಲುಗಳನ್ನು ಕೊಟ್ಟರು. ಕೊಳಲನ್ನು ಹಿಡಿದು ಸರಿಯಾಗಿ ಊದುವುದನ್ನು ಕಲಿಸಿದರು. ಮುಂದೆ, ಹರಿಕಾಂಭೋದಿ ರಾಗದಲ್ಲಿ ಸರಳವಾದ ಕರ್ನಾಟಕ ಸ್ವರಗಳನ್ನು ನಮಗೆ ಕಲಿಸಿದರು. ನಾವು ತಪ್ಪುಗಳನ್ನು ಮಾಡಿದಾಗ ಅವರು ತಾಳ್ಮೆಯಿಂದ ನಮ್ಮನ್ನು ಸರಿಪಡಿಸುತ್ತಿದ್ದರು. ಮೊದಲಿಗೆ ಕಷ್ಟವಾದರೂ ಸ್ವಲ್ಪ ಸಮಯದಲ್ಲೇ ನಾವು ಕೆಲವು ಸ್ವರಗಳನ್ನು ನುಡಿಸಲು ಸಾಧ್ಯವಾಯಿತು. ನಂತರ, ಅವರು ಹಿನ್ನೆಲೆಯಲ್ಲಿ ತಬಲಾ ಮತ್ತು ತಾನ್ಪುರ ಧ್ವನಿಯನ್ನು ಹಾಕಿ ಮೊದಲ ಮೂರು ಸರಳೆ ವರಸೆಗಳನ್ನು ಹೇಗೆ ನುಡಿಸಬೇಕೆಂದು ಕಲಿಸಿದರು. ಸಂಜೆಯ ಸೆಷನ್‌ನಲ್ಲಿ ಕೆಲವು ಹೊಸಬರು ಸೇರಿಕೊಂಡರು. ರವಿ ಸರ್ ಹೊಸದಾಗಿ ಕಲಿಯುವವರ ಪ್ರಶ್ನೆಗಳಿಗೆ ಉತ್ತರಿಸಿದರು. ಕರ್ನಾಟಕ ಸಂಗೀತ ಗೊತ್ತಿಲ್ಲದವರಿಗೆ ಮೊದಲ ಸರಳೆ ವರಸೆಯನ್ನು ಕಲಿಸಿದರು.

ಮುಂದಿನ ನಾಲ್ಕು ದಿನ ಬೆಳಿಗ್ಗೆಯಿಂದ ಸಂಜೆಯ ವರೆಗೆ ತರಗತಿಗಳು ನಡೆಯುತ್ತಿತ್ತು. ದಿನಗಳು ತುಂಬಾ ವೇಗವಾಗಿ ಹೋದವು. ರವಿ ಸರ್ ಅವರ ಕಲಿಸುವ ಶೈಲಿ, ತಾಳ್ಮೆ ಮತ್ತು ಕಲಿಸುವ ಉತ್ಸಾಹವನ್ನು ನೋಡಿ ನನಗೆ ಕಲಿಯುವ ಸ್ಪೂರ್ತಿ ಹೆಚ್ಚಿತು. ಪ್ರತಿ ದಿನ ನಾವು ಹಿಂದೆ ಕಲಿತಿದ್ದನ್ನು ಅಭ್ಯಾಸ ಮಾಡುತ್ತಿದ್ದೆವು, ನಂತರ ಹೊಸ ವಿಷಯಗಳನ್ನು ಕಲಿಯುತ್ತಿದ್ದೆವು. ಹೀಗೆ ನಾವು ಹತ್ತು ಸರಳೆ ವರಸೆಗಳು, ಶಂಕರಾಭರಣ ರಾಗ, ಕೆಲವು ಗಮಕಗಳು ಮತ್ತು ಅಲಂಕಾರಗಳನ್ನು ವಿವಿಧ ವೇಗದಲ್ಲಿ ನುಡಿಸುವುದನ್ನು ಕಲಿತೆವು. ಸಂಜೆಯ ಅವಧಿಯಲ್ಲಿ ರವಿ ಸರ್ ಅವರು ಹೊಸ ವಿದ್ಯಾರ್ಥಿಗಳಿಗೆ ಹರಿಕಾಂಭೋದಿ ರಾಗ ಮತ್ತು ತಾಳದ ಜೊತೆಗೆ ನುಡಿಸಲು ಕಲಿಸಿದರು. ನಾವೂ ಅವರೊಡನೆ ಅಭ್ಯಾಸ ಮಾಡುತ್ತಿದ್ದೆವು.

ಒಮ್ಮೆ ಪ್ರಸನ್ನ ಕುಮಾರ್ ಮತ್ತು ಉಷಾ ಅವರು ರವಿ ಸರ್ ಭೇಟಿ ಮಾಡಲು ಬಂದಿದ್ದರು. ಆಗ ರವಿ ಸರ್ ಸುಮಧುರವಾಗಿ "ಜಗದೋದ್ಧಾರನ" ಕೃತಿಯನ್ನು ನುಡಿಸಿ ಎಲ್ಲರಿಗೂ ಖುಷಿ ಕೊಟ್ಟರು. ನನಗೆ ಅವರ ಅದ್ಭುತ ಕೊಳಲಿನ ಗಾಯನವನ್ನು ಇಷ್ಟು ಹತ್ತಿರದಿಂದ ಕೇಳಿ ರೋಮಾಂಚನವಾಯಿತು.

ಕೊನೆಯ ದಿನ, ಕಾರ್ಯಾಗಾರ ಮುಗಿದಾಗ ನನಗೆ ತುಂಬ ಬೇಸರವಾಯಿತು. ಈ ಕೊಳಲು ಕಾರ್ಯಾಗಾರವು ಎಂದಿಗೂ ಮರೆಯಲಾಗದ ಮತ್ತು ಜೀವನವನ್ನು ಬದಲಾಯಿಸುವ ಒಂದು ಅನುಭವವಾಗಿದೆ. ಇದನ್ನು ಆಯೋಜಿಸಿದ ಕನ್ನಡ ಬೃಂದಾವನದ ಪದಾಧಿಕಾರಿಗಳಿಗೆ, ರವಿ ಸರ್ ಅವರು ಉಳಿದುಕೊಳ್ಳಲು ಹಾಗು ತರಗತಿ ನಡೆಸಲು ಸ್ಥಳಾವಕಾಶ ನೀಡಿದ ಅರ್ಚನಾ ಮತ್ತು ಶರತ್ ಮೈನಂಪಾಟಿ ಅವರಿಗೆ ತುಂಬಾ ಧನ್ಯವಾದಗಳು. ನಾನು ಕೊಳಲು ತರಬೇತಿಯನ್ನು ರವಿ ಸರ್ ಅವರಿಂದ ಆನ್‌ಲೈನನಲ್ಲಿ ಮುಂದುವರೆಸುತ್ತಿದ್ದೇನೆ. ರವಿ ಸರ್ ಅವರನ್ನು ಶೀಘ್ರದಲ್ಲೇ ಇನ್ನೊಂದು ಕಾರ್ಯಾಗಾರದಲ್ಲಿ ಖುದ್ದಾಗಿ ನೋಡಲು ಎದುರು ನೋಡುತ್ತಿದ್ದೇನೆ.





# ಸೂರ್ಯೋದಯ

ಜಾನಕಿ ಶ್ರೀಕಂಠ , ಬೆಂಗಳೂರು

ರೇಡಿಯೋದಲ್ಲಿ ಯುಗಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ ಹೊಸ ವರುಷಕೆ ಹೊಸ ಹರುಷವ ........

ಆ ಧ್ವನಿಯೊಂದಿಗೆ ರೂಪ ತನ್ನ ಧ್ವನಿಯನ್ನು ಸೇರಿಸುತ್ತ ಬಟ್ಟೆ ಪ್ಯಾಕ್ ಮಾಡಿಕೊಳ್ಳುತ್ತ ಇದ್ದಳು. ಅವಳಿಗೆ ಸ್ವರ್ಗಕ್ಕೆ ಒಂದೇ ಗೇಣಿದೆ ಅಂತ ಅನಿಸುತ್ತಿತ್ತು , ಕಾರಣ ಅವಳು ಕೆ ಪಿ ಎಸ್ ಸಿ ಪರೀಕ್ಷೆಯಲ್ಲಿ ಒಳ್ಳೆಯ rank ಪಡೆದು ಅಸಿಸ್ಟೆಂಟ್ ಕಮೀಷನರ್ ಆಗಿ ಆಯ್ಕೆ ಆಗಿದ್ದಳು. ದೇವರ ದಯೆಯಿಂದ ಅವಳಿಗೆ ಬೇಕಾದ ಬೆಂಗಳೂರಿನಲ್ಲೇ ಟ್ರೈನಿಂಗ್ ಗೆ ಕರೆದಿದ್ದರು. ಇನ್ನೊಂದು ವಾರದಲ್ಲಿ ಅವಳು ಕೆಲಸಕ್ಕೆ ಹಾಜರಾಗ ಬೇಕಿತ್ತು. ಮನೆಯಲ್ಲಿ ಆನಂದ, ಆತಂಕ ತಾಂಡವವಾಡುತ್ತಿತ್ತು. ತಾಯಿ ರಾಗಿಣಿ ಮಗಳ ಜೊತೆ ಹೋಗಲಾಗದ ಕಾರಣ ಚಿಂತಿತಳಾಗಿದ್ದಳು. ರೂಪ ಬೇಜಾರು ಮಾಡಿಕೊಳ್ಳ ಬೇಡ, ನಿನ್ನ ತಮ್ಮ ತಂಗಿಯರ ಪರೀಕ್ಷೆ ಮುಗಿದ ಮೇಲೆ ನಾನು ಒಂದು ಹತ್ತು ದಿನ ಬಂದು ನಿನ್ನ ಜೊತೆ ಇರ್ತೀನಿ. ಆದರೆ, ಈಗ ನಿನ್ನೊಬ್ಬಳ್ಳನ್ನೇ ಹೇಗೆ ಕಳಿಸೋದು ಅಂತ ಯೋಚನೆ ಮಾಡ್ತಿದ್ದೀನಿ ಅಂತ ಹೇಳಿ ರೂಪಳಿಗೆ ಪುಡಿಗಳು, ಉಪ್ಪಿನಕಾಯಿಗಳು, ಸಣ್ಣ ಪಾತ್ರೆಗಳು, induction stove ಎಲ್ಲ ಪ್ಯಾಕ್ ಮಾಡ್ತಿದ್ದಳು.

ಅಷ್ಟರಲ್ಲಿ  ಪಕ್ಕದ ಮನೆ ಕಮಲಮ್ಮನ ಮನೆಯಿಂದ ಜೋರಾದ ಬೈಗಳು, ಅಳು, ಬಾಗಿಲ ಬಡಿತ ಎಲ್ಲ ಕೇಳಿಸ್ತು. ರಾಗಿಣಿ, ರೂಪಾಗೆ ಹೋಗಿ ನೋಡ್ಕೊಂಡು ಬಾರೆ ಏನೋ ಹೆಚ್ಚು ಕಡಿಮೆ ಆದ ಹಾಗೆ ಇದೆ ಅಂದಾಗ ಹೊರಗೆ ಹೋದ ರೂಪ ಗರ ಬಡಿದಂತೆ ನಿಲ್ತಾಳೆ. ಹದಿನಾಲ್ಕು ವರ್ಷದ ಗೌರಿ ಜೋರಾಗಿ ಅಳ್ತಾ, ಚಿಕ್ಕಮ್ಮ ನಾನಿಲ್ಲೇ ಇರ್ತೀನಿ, ದಯವಿಟ್ಟು ಒಳಗೆ ಕರೆದುಕ್ಕೊಳ್ಳಿ ಅಂತ ಅಲವತ್ತುಕೊಳ್ಳುತಿರ್ತಾಳೆ. ರೂಪಳಿಗೆ ಕರುಳು ಕಿವುಚಿದಂತೆ ಆಗುತ್ತದೆ. ರೂಪ, ಕಮಲಮ್ಮ ನಾನು ರೂಪ, ಬಾಗಿಲು ತೆಗೀರಿ ಇಲ್ಲಾಂದ್ರೆ ಮಗುವಿಗೆ ಕಿರುಕುಳ ಅಂತ ಪೋಲೀಸ್ ಕಂಪ್ಲೇಂಟ್ ಕೊಡಬೇಕಾಗುತ್ತೆ, ಅಂದಾಗ ಬಾಗಿಲು ತೆಗೆದುಕ್ಕೊಳ್ಳುತ್ತೆ. ಕಮಲಮ್ಮ ಹೇಳುತ್ತಾರೆ ನೋಡಮ್ಮ ರೂಪ, ನಮ್ಮ ಯಜಮಾನರು ನಮ್ಮನ್ನು ಬಿಟ್ಟು ಮೇಲೆ ಹೋದರು, ನಾನು ನನ್ನ ಮಕ್ಕಳ ಜೊತೆ ತವರು ಮನೆಗೆ ಹೋಗ್ತೀನಿ, ಅಮ್ಮ ಹೇಳಿದ್ದಾರೆ ಆ ದರಿದ್ರ ಗೌರಿಯನ್ನು ಕರ್ಕೊಂಡು ಬರ್ಬಾರ್ದು ಅಂತ. ಅದಕ್ಕೆ ಅವಳನ್ನು ಹೊರಗೆ ಹಾಕಿದೆ, ನಾವು ನಾಳೆ ಬೆಳಿಗ್ಗೆ ಹೊರಟು ಹೋಗ್ತೀವಿ, ಅವಳು ಏನ್ ಬೇಕಾದರೂ ಮಾಡಿಕ್ಕೊಳ್ಳಿ, ಹಾಳಾಗಿ ಹೋಗಲಿ ನಂಗೇನು!!! .

ಈ ಮಾತನ್ನು ಕೇಳಿದ ರೂಪ ದಂಗಾಗಿ ನಿಲ್ತಾಳೆ, ತಕ್ಷಣ ಏನೋ ಹೊಳೆದಂತೆ ಆಗಿ ಹಾಗಾದರೆ ನಾನು ಅವಳನ್ನ ನನ್ನ ಜೊತೆ ಕರ್ಕೊಂಡು ಹೋಗ್ಲಾ ಅಂತ ಕೇಳ್ತಾಳೆ. ಅದಕ್ಕೆ ಕಮಲಮ್ಮ ಧಾರಾಳವಾಗಿ ಕರ್ಕೊಂಡು ಹೋಗು, ಅವಳ ನೆರಳು ನನ್ನ ಮೇಲೆ ಬೀಳ್ದೆ ಇದ್ರೆ ಸಾಕು ಅಂದಾಗ, ಹೊರಗೆ ಬಂದು ಗೌರಿಯ ಕಣ್ಣೊರಸಿ ತನ್ನೊಂದಿಗೆ ಕರ್ಕೊಂಡು ಬರ್ತಾಳೆ ರೂಪ!

ಅಮ್ಮ ನೀನೇನು ನಾನೊಬ್ಬಳೆ ಹೋಗ ಬೇಕಲ್ಲ ಅಂತ ಚಿಂತೆ ಮಾಡ್ಕೋಬೇಡ. ಈ ಗೌರೀನ ಬೆಂಗ್ಳೂರಿಗೆ ನಂಜೊತೆ ಕರ್ಕೊಂಡು ಹೋಗ್ತೀನಿ ಅಂತಾಳೆ ರೂಪ . ಅಲ್ಲಿಂದ ಶುರು ಗೌರಿಯ ಭಾಗ್ಯದ ಬಾಗಿಲು ತೆರೆಯಿತು. ಬೆಂಗ್ಳೂರಿಗೆ ಬಂದ ಕೂಡಲೇ ಇಬ್ಬರೂ ಸೇರಿ ತನಗೆ ಕೊಟ್ಟ ಮನೆಯನ್ನು ಸ್ವಚ್ಛ ಮಾಡಿ ಊಟ ಮಾಡಿ ಮಲಗುತ್ತಾರೆ. ಮಾರನೇ ದಿನ ರೂಪ ಗೌರಿಯನ್ನು ಕರೆದುಕೊಂಡು ಹತ್ತಿರದಲ್ಲಿದ್ದ ಶಾಲೆಯಲ್ಲಿ ಹೈ ಸ್ಕೂಲಿಗೆ ಸೇರಿಸುತ್ತಾಳೆ. ಅವಳ ಜವಾಬ್ದಾರಿ ಪೂರ್ತಿ ರೂಪ ಹೊರುತ್ತಾಳೆ. ದಿನಗಳು ಕಳೆದಂತೆ ಇಬ್ಬರ ಬಾಂಧವ್ಯ ಹೆಚ್ಚುತ್ತಾ ಹೋಗುತ್ತದೆ. ಗೌರಿ ಹೈಸ್ಕೂಲ್ ಆದ ಮೇಲೆ ಕಂಪ್ಯೂಟರ್ ಡಿಪ್ಲೋಮ ಮಾಡಿ ಒಳ್ಳೆ ಕಂಪನಿಯಲ್ಲಿ ಕೆಲಸಕ್ಕೆ ಸೇರುತ್ತಾಳೆ.

ರೂಪಾಳಿಗೆ ಮದುವೆಯಾಗಿ ಗಂಡನ ಜೊತೆ ಅಮೆರಿಕಾಗೆ ಬರುತ್ತಾಳೆ. ಈಗ ಇಬ್ಬರ ಮಧ್ಯೆ ಕೇವಲ ಫೋನ್ ಕಾಲ್ ಮಾತ್ರ. ಹಲವು ವರ್ಷ ಕಳೆಯುತ್ತದೆ ರೂಪ ತನ್ನ ಇಬ್ಬರು  ಪುಟ್ಟ ಮಕ್ಕಳ ಜವಾಬ್ದಾರಿ, ತನ್ನ ಕೆಲಸ, ಗಂಡ ಮನೆ ಅಂತ ಪೂರ್ತಿ busy ಆಗ್ತಾಳೆ .

ಒಂದು ದಿನ ರೂಪ ತನ್ನ ಗಂಡ ಮಕ್ಕಳ ಜೊತೆ ಸೂರ್ಯಾಸ್ತ ನೋಡಲು ನ್ಯೂಜೆರ್ಸಿಯಲ್ಲಿರುವ Cape Mayಗೆ  ಹೋಗಿರ್ತಾಳೆ. ಒಂದು ಧ್ವನಿ ರೂಪಕ್ಕ ರೂಪಕ್ಕ ಅನ್ನೋದು ಕೇಳಿ ತಿರುಗಿ ನೋಡ್ತಾಳೆ, ಗೌರಿ ಒಬ್ಬ ಸುಂದರ ಯುವಕನೊಂದಿಗೆ ಓಡೋಡಿ ಬರೋದು ಕಾಣಿಸುತ್ತೆ.  ಗೌರಿ ಹೇಳ್ತಾಳೆ ಅಕ್ಕ ನೀವು ನನ್ನ ಬದುಕಿಗೆ ಹೊಸ ಮುನ್ನುಡಿ ಬರೆದ್ರಿ. ಇವರು ಸತೀಶ್ ಅಂತ ನಮ್ಮ ಕಂಪನಿಯಲ್ಲಿ ನಂಗೆ ಬಾಸ್ ಆಗಿದ್ರು , ಇಬ್ರೂ ಇಷ್ಟ ಪಟ್ಟು ಹೋದ ವಾರ ಮದುವೆ ಆದ್ವಿ, ನಮ್ಮ ಕಂಪೆನಿ ನಮ್ಮಿಬ್ಬರನ್ನೂ ಕೆಲಸದ ಮೇಲೆ ಇಲ್ಲಿಗೆ ಕಳಿಸಿದೆ. ಇದೆಲ್ಲಾ ನಿಮ್ಮಿಂದಾಗಿ ಆಗಿದ್ದು. ಇವತ್ತು ನೀವೆಲ್ಲ ನಮ್ಮ ಗೆಸ್ಟ್ಸ್  . ಬನ್ನಿ ಹೋಟೆಲ್ನಲ್ಲಿ ಊಟ ಮಾಡುತ್ತಾ ಮಾತಾಡೋಣ ಅಂತ ಎಲ್ಲರನ್ನೂ ಹೊರಡಿಸುತ್ತಾಳೆ. ರೂಪಾಳಿಗೆ ಮಾತಿನ ಬದಲು ಸಂತೋಷದ ಕಣ್ಣೀರು ಸುರಿಯುತ್ತದೆ. ಒಬ್ಬರನ್ನೊಬ್ಬರು ತಬ್ಬಿಕ್ಕೊಂಡು ಸೂರ್ಯಾಸ್ತವನ್ನು ನೋಡುತ್ತಾರೆ. ಅಕ್ಕ ನನ್ನ ಬಾಳಿಗೆ ನೀವು ಸೂರ್ಯೋದಯವನ್ನು ಕರುಣಿಸಿದಿರಿ ಎಂದು ಗೌರಿ ಹೇಳುತ್ತಾಳೆ. ಎಲ್ಲರೂ ಹೊಟೇಲಿಗೆ ಹೋಗುತ್ತಾರೆ.



# ಹೊಗಳಿಕೆಯ ಸುತ್ತ ಮುತ್ತ

ಪರಿಮಳಾ ಕೌಜಲಗಿ

ಒಂದೂರಿನಲ್ಲಿ ಒಬ್ಬ ಗೊಂಬೆಕಾರನಿದ್ದ. ಅವನು ಮಾಡಿದ ಗೊಂಬೆಗಳು ಜೀವಕಳೆಯಿಂದ ಕೂಡಿರುತ್ತಿದ್ದವು. ಹೀಗಾಗಿ ಸುತ್ತಲಿನ ಹತ್ತಾರು ಊರುಗಳಲ್ಲಿ ಅವನ ಹೆಸರು ಪ್ರಸಿದ್ಧವಾಗಿತ್ತು. ಒಂದೊಮ್ಮೆ ಅದು ಹೇಗೋ ಅವನಿಗೆ ತನ್ನ ಸಾವಿನ ದಿನ ಗೊತ್ತಾಗಿಬಿಟ್ಟಿತು. ಇಂತಹ ದಿನ, ಇಂತಹ ಸಮಯ ಎಲ್ಲವೂ ತಿಳಿದುಬಿಟ್ಟಿತು. ಸರಿ, ಅವನು ಸಾವಿನ ಹಿಡಿತದಿಂದ ಪಾರಾಗುವ ಉಪಾಯ ಹುಡುಕತೊಡಗಿದ. ತನ್ನಂತೇ ಇರುವ ಒಂಬತ್ತು ಗೊಂಬೆಗಳನ್ನು ತಯಾರು ಮಾಡಿದ. ಎತ್ತರ, ಬಣ್ಣ, ಕಣ್ಣು, ಮೂಗು, ಕೂದಲು ಎಲ್ಲವೂ ಒಂದೇ ತೆರನಾಗಿದ್ದ ಗೊಂಬೆಗಳು ತಯಾರಾದವು. ಅವುಗಳನ್ನು ಸಾಲಾಗಿ ನೆಲದ ಮೇಲೆ ಮಲಗಿಸಿ, ಅವುಗಳ ಮಧ್ಯದಲ್ಲಿ ಹತ್ತನೆಯವನಾಗಿ ತಾನೂ ಮಲಗಿಕೊಂಡುಬಿಟ್ಟ.

ನಿಗದಿತ ಸಮಯಕ್ಕೆ ಯಮದೂತರು ಬಂದರು. ಗೊಂಬೆಕಾರ ಉಸಿರು ಬಿಗಿಹಿಡಿದು, ಕಣ್ಣು ಮುಚ್ಚಿ ಮಲಗಿದ್ದ. ಯಮದೂತರಿಗೆ ಈ ಹತ್ತು ಗೊಂಬೆಗಳಲ್ಲಿ ನಿಜವಾದ ಗೊಂಬೆಕಾರ ಯಾರು ಎಂಬುದು ತಿಳಿಯದೇ ಹೋಯಿತು. ಸಮಸ್ಯೆಯನ್ನು ಯಮದೇವನ ಕಡೆಗೆ ಒಯ್ದರು. ಅವನು ಒಂದು ಉಪಾಯ ಹೇಳಿ ಅವರನ್ನು ತಿರುಗಿ ಕಳಿಸಿದ. ಯಮದೂತರು ತಿರುಗಿ ಬಂದವರೇ ಆ ಗೊಂಬೆಗಳ ಮುಂದೆ ನಿಂತುಕೊಂಡು ಆ ಗೊಂಬೆಕಾರನನ್ನು ಹೊಗಳಲು ಶುರುಮಾಡಿದರು. "ಆಹಾ ಎಂತಹ ನಿಪುಣ ಕಲಾವಿದ ಇವನು! ಈ ಗೊಂಬೆಗಳಲ್ಲಿ ನಿಜವಾಗಿ ನಾವು ಒಯ್ಯಬೇಕಾದ ಮನುಷ್ಯ ಯಾರೆಂದು ನಮಗೆ ತಿಳಿಯುತ್ತಲೇ ಇಲ್ಲ. ಎಂತಹ ಅದ್ಭುತ ಕಲೆ ಇದೆ ಇವನಲ್ಲಿ! ಒಮ್ಮೆ ಇವನಾರು ಎಂಬುದು ಗೊತ್ತಾದರೆ ಅವನ ಬೆನ್ನು ತಟ್ಟಿ ಅಭಿನಂದಿಸಬಹುದಾಗಿತ್ತು" ಹೀಗೇ ಹೊಗಳಿಕೆ ಸಾಗಿತ್ತು. ಗೊಂಬೆಕಾರನ ಮನಸ್ಸು ಹೊಗಳಿಕೆಯಿಂದ ಉಬ್ಬಿಹೋಗಿ ಅವನ ಮುಖದ ಮೇಲೆ ಮಂದಹಾಸ ಮೂಡಿತು. ತಕ್ಷಣ ಯಮಪಾಶ ಅವನನ್ನು ಸೆಳೆದುಬಿಟ್ಟಿತು.

ಈಗ ಇನ್ನೊಂದು ಕಥೆ. ಒಬ್ಬ ಪಂಡಿತನಿದ್ದ. ಅವನು ತನ್ನ ಮಗನನ್ನು ತನಗಿಂತಲೂ ಉತ್ತಮ ಪಂಡಿತನನ್ನಾಗಿ ಮಾಡಬೇಕೆಂಬ ಆಸೆಯಿಂದ ಒಬ್ಬ ಶ್ರೇಷ್ಠ ಗುರುಗಳ ಆಶ್ರಮಕ್ಕೆ ಕಳುಹಿಸಿಕೊಟ್ಟ. ಅಲ್ಲಿ ೧೨ ವರ್ಷ ಬಹಳ ನಿಷ್ಠೆಯಿಂದ ಅಭ್ಯಾಸಮಾಡಿದ ಮಗ ದೊಡ್ಡ ಪಂಡಿತನಾಗಿ ತಿರುಗಿ ಮನೆಗೆ ಬಂದ. ತನ್ನನ್ನು ನೋಡಿ ತನ್ನ ತಂದೆಗೆ ಬಹಳ ಸಂತೋಷವಾಗಬಹುದು, ತನ್ನನ್ನು ತುಂಬ ಹೊಗಳಬಹುದು ಎಂದು ಓಡೋಡಿ ಬಂದು ತಂದೆಯ ಕಾಲಿಗೆ ನಮಸ್ಕರಿಸಿದ. ಆದರೆ ಅವನ ನಿರೀಕ್ಷೆ ಹುಸಿಯಾಯಿತು. ತಂದೆ ಅವನು ಏನೇನು ಓದಿದ್ದಾನೆಂದು ಕೇಳಿ ತಿಳಿದುಕೊಂಡು, "ಇಷ್ಟು ಸಾಲದು, ನೀನು ಓದಬೇಕಾದದ್ದು, ತಿಳಿದುಕೊಳ್ಳಬೇಕಾದದ್ದು ಇನ್ನೂ ಬಹಳವಿದೆ" ಎಂದುಬಿಟ್ಟ.

ಮಗನಿಗೆ ನಿರಾಸೆ, ಕೋಪ ಎಲ್ಲವೂ ಒತ್ತರಿಸಿ ಬಂದು ತಂದೆಯ ಬಗ್ಗೆ ಅಸಾಧ್ಯ ದ್ವೇಷ ಶುರುವಾಯಿತು. ವಿವೇಕ ಮರೆಯಾಗಿ ಹೋಯಿತು. ಅವತ್ತು ರಾತ್ರಿ ತನ್ನ ತಂದೆಯನ್ನು ಮುಗಿಸಿಬಿಡಬೇಕೆಂಬ ದುಷ್ಟ ಯೋಚನೆಯಿಂದ ಮಾಳಿಗೆಯ ಮೇಲೆ ಒಂದು ದೊಡ್ಡ ಕಲ್ಲನ್ನು ಇಟ್ಟುಕೊಂಡು ಕಾದುಕುಳಿತ. ಬೆಳಕಿಂಡಿಯಲ್ಲಿ ಇಣಿಕಿ ನೋಡಿದಾಗ ತಂದೆ-ತಾಯಿ ಸಂಭಾಷಣೆಯಲ್ಲಿ ತೊಡಗಿದ್ದರು. ತಾಯಿ ಕೇಳಿದಳು "ಮಗ ಇಷ್ಟು ದೊಡ್ಡ ಪಂಡಿತನಾಗಿ ತಿರುಗಿಬಂದರೂ ನೀವು ಏಕೆ ಒಂದೂ ಮೆಚ್ಚುಗೆಯ ಮಾತನ್ನಾಡಲಿಲ್ಲ?" ಆಗ ತಂದೆ ಕೊಟ್ಟ ಉತ್ತರ ಹೀಗಿತ್ತು, "ನಿಜ, ನಮ್ಮ ಮಗ ಪಂಡಿತನಾಗಿ ಬಂದಿದ್ದಾನೆ. ಆದರೆ ಅವನು ಇನ್ನೂ ಎತ್ತರಕ್ಕೆ ಏರಬೇಕು, ಅವನ ಹೆಸರು ವಿಶ್ವವ್ಯಾಪಿಯಾಗಬೇಕು ಎಂಬುದೇ ನನ್ನ ಅಪೇಕ್ಷೆ. ಈಗ ನಾನೇನಾದರೂ ಅವನನ್ನು ಹೊಗಳಿಬಿಟ್ಟರೆ ಅವನು ಮುಂದೆ ಕಲಿಯುವುದನ್ನೇ ನಿಲ್ಲಿಸಿಬಿಡಬಹುದು." ಈ ಮಾತುಗಳನ್ನು ಕೇಳಿಸಿಕೊಂಡ ಮಗ ಪಶ್ಚಾತಾಪದಿಂದ ಓಡಿ ಬಂದು ತಂದೆಯ ಕಾಲಿಗೆ ಬಿದ್ದ.

ಮೇಲ್ನೋಟಕ್ಕೆ ಎರಡು ಬೇರೆ ಬೇರೆ ಕಥೆಗಳು ಎನಿಸಿದರೂ ಎರಡರಲ್ಲೂ ಒಂದು ಸಾಮಾನ್ಯ ಸಂಗತಿಯಿದೆ. ಅದೇ ಹೊಗಳಿಕೆ. ಮೊದಲ ಕಥೆಯಲ್ಲಿ ಹೊಗಳಿಕೆಯಿಂದ ಉಬ್ಬಿದ ಗೊಂಬೆಕಾರ ತನ್ನ ಜೀವವನ್ನೇ ಕಳೆದುಕೊಳ್ಳಬೇಕಾಯಿತು. ಎರಡನೆಯ ಕಥೆಯಲ್ಲಿ ಹೊಗಳಿಕೆಯನ್ನು ಬಯಸಿದ ಮಗನಿಗೆ ಅದು ಸಿಗದೇಹೋದಾಗ ತಂದೆಯನ್ನೇ ಕೊಲ್ಲಲು ಬಯಸಿದ.

ಹಾಗಾದರೆ ಹೊಗಳಿಕೆ ಒಳ್ಳೆಯದೋ, ಕೆಟ್ಟದ್ದೋ? ಹೊಗಳಿಕೆ ಖಂಡಿತ ಒಳ್ಳೆಯದು. ಒಂದು ಸಣ್ಣ ಹೊಗಳಿಕೆ, ಮೆಚ್ಚುಗೆ ಅದ್ಭುತ ಫಲಿತಾಂಶ ನೀಡಬಲ್ಲದು. ಉದಾಹರಣೆಗೆ, ಕೆಲಸದಲ್ಲಿ ಬಾಸ್ ಮಾಡಿದ ಹೊಗಳಿಕೆ ಅವನ ಸಹೋದ್ಯೋಗಿಗಳಲ್ಲಿ ಹೆಚ್ಚಿನ ಉತ್ಸಾಹ ತುಂಬಬಲ್ಲದು. ಮಕ್ಕಳು ಶಾಲೆಯಲ್ಲಿ ಏನಾದರೂ ಸಾಧಿಸಿಬಂದಾಗ ಪಾಲಕರು ಅವರ ಬೆನ್ನುತಟ್ಟಿ ಹೊಗಳಿದರೆ ಅವರಿಗೆ ಇನ್ನೂ ಹೆಚ್ಚಿಗೆ ಸಾಧಿಸಲು ಪ್ರೋತ್ಸಾಹ ನೀಡಿದಂತಾಗುತ್ತದೆ.

ಆದರೆ ಅತಿಯಾದರೆ ಯಾವುದೂ ಒಳ್ಳೆಯದಲ್ಲ. ಅತಿಯಾದ ಹೊಗಳಿಕೆ ವಾಸ್ತವವನ್ನು ಮರೆಸಿ ದುರಂತವನ್ನು ತಂದುಬಿಡಬಹುದು; ಅದೇ ಒಂದು ಸಣ್ಣದಾದ, ಮಿತವಾದ ಹೊಗಳಿಕೆ ದುರಂತವನ್ನು ತಪ್ಪಿಸಲೂ ಬಲ್ಲದು.

ಅಂತೂ ಹೊಗಳುವವರಿಗಿಂತ ಹೊಗಳಿಸಿಕೊಳ್ಳುವವರು ಎಚ್ಚರದಿಂದಿರಬೇಕು ಅಷ್ಟೇ !



# ಜಲಿಯನ್ ವಾಲಾಬಾಗ್ ಹತ್ಯಾಕಾಂಡ

## ಯಶಸ್ವಿನಿ

ಅದು ಏಪ್ರಿಲ್ 13, 1919ನೇ ಇಸವಿ, ಪಂಜಾಬ್ ಸೇರಿ ದೇಶದೆಲ್ಲೆಡೆ ಸ್ವಾತಂತ್ರ್ಯ ಹೋರಾಟದ ಕಿಡಿ ಹೊತ್ತಿ ಉರಿಯುತ್ತಿತ್ತು, ಬ್ರಿಟೀಷರು ಭಾರತೀಯರನ್ನು ಪಶುಗಳಂತೆ ನಡೆಸಿಕೊಳ್ಳುತ್ತಿದ್ದರು, ಸಣ್ಣ ಪುಟ್ಟ ತಪ್ಪುಗಳಿಗೂ ಅಮಾನುಷವಾಗಿ ಶಿಕ್ಷಿಸುತ್ತಿದ್ದರು, ಪಂಜಾಬಿನ ಅಮೃತಸರದಲ್ಲಿ ಭಾರತೀಯನೊಬ್ಬ ಬಿಳಿಯ ಮಹಿಳೆಗೆ ಅವಮಾನ ಮಾಡಿದನು ಎಂಬ ಆರೋಪ ಹೊರಿಸಿ ಬ್ರಿಟೀಷರು ಭಾರತೀಯರನ್ನು ರಸ್ತೆಯಲ್ಲಿ ತೆವಳಿಕೊಂಡು ಹೋಗುವ ಶಿಕ್ಷೆಯನ್ನು ವಿಧಿಸಿದರು,ಇದನ್ನು ವಿರೋಧಿಸಿ ಜನನಾಯಕರು 1919ರ ಏಪ್ರಿಲ್ 13 ರಂದು ಜಲಿಯನ್ ವಾಲಾಬಾಗ್ ಉದ್ಯಾನದಲ್ಲಿ ಶಾಂತಿಯುತ ಸಭೆ ಸೇರಲು



ನಿರ್ಧರಿಸಿದರು, ಅಂದು ಸಿಖ್ಖರ ಯುಗಾದಿ ಹಬ್ಬವಾದ "ಬೈಸಾಕಿ" ಹಬ್ಬವನ್ನು ಆಚರಿಸುವುದೆಂದೂ ನಿರ್ಧರಿಸಿದರು, ಇದನ್ನು ತಿಳಿದ ಅಂದಿನ ಪಂಜಾಬಿನ ಗವರ್ನರ್ ಆಗಿದ್ದ ಮೈಕೆಲ್ ಓಡ್ವಯರ್ ಮೂರು ಜನಕ್ಕಿಂತ ಹೆಚ್ಚು ಜನರು ಒಂದೆಡೆ ಸೇರುವಂತಿಲ್ಲ ಎಂಬ ಆದೇಶ ಹೊರಡಿಸಿದನು, ಅಮೃತಸರದ ಸುತ್ತಮುತ್ತ ಹಳ್ಳಿಯಿಂದ ಬಂದಿದ್ದ ಜನರಿಗೆ ಈ ಆದೇಶದ ಬಗ್ಗೆ ಏನೂ ತಿಳಿದಿರಲಿಲ್ಲ, ಹಾಗಾಗಿ ಎಲ್ಲರೂ ಉದ್ಯಾನವನದಲ್ಲಿ ಸೇರಿದ್ದರು, ಇದು ಜಲಿಯನ್ ವಾಲಾ ಬಾಗ್ ಹತ್ಯಾಕಾಂಡಕ್ಕೆ ನಾಂದಿಯಾಯಿತು. ಆಗ ಪಂಜಾಬಿನ ಗವರ್ನರ್ ಆಗಿದ್ದ ಮಹಾನ್ ಕ್ರೂರಿ ಮೈಕೆಲ್ ಓಡ್ವಯರ್ ಸಂಜೆ ಸುಮಾರು 5:15ರ ವೇಳೆಗೆ ತನ್ನ ಸೈನಿಕರಿಗೆ ಸಭೆಯೊಳಗೆ ಗುಂಡು ಹಾರಿಸಲು ಆದೇಶಿಸಿದನು, ಸೈನಿಕರು ಅಮಾನುಷವಾಗಿ ಗುಂಡಿನ ಮಳೆಗೈದರು.

ಇದರಿಂದ 400 ಕ್ಕೂ ಹೆಚ್ಚು ಮಂದಿ ಸಾವಿಗೀಡಾದರು, 1,500 ಕ್ಕೂ ಹೆಚ್ಚು ಮಂದಿ ತೀವ್ರವಾಗಿ ಗಾಯಗೊಂಡರು, ಹೆಚ್ಚಿನವರು ಅಂಗವಿಕಲರಾದರು, ಸುಮಾರು ಹದಿನೈದು ನಿಮಿಷಗಳ ಕಾಲ ಸತತವಾಗಿ ಗುಂಡಿನ ಮಳೆಗೈದಿದ್ದರು, ಜನರು ಗುಂಡೇಟಿನಿಂದ ತಪ್ಪಿಸಿಕೊಳ್ಳಲು ಬಾವಿಗೆ ಹಾರಿದ್ದರು.

ಈ ಭೀಕರ ಹತ್ಯಾಕಾಂಡಕ್ಕೆ ಜಗತ್ತಿನಾದ್ಯಂತ ತೀವ್ರ ಆಕ್ರೋಶ ವ್ಯಕ್ತವಾಯಿತು. ಇದನ್ನೆಲ್ಲ ಕಣ್ಣಾರೆ ಕಂಡ ಅಪ್ರತಿಮ ದೇಶ ಭಕ್ತ ಸರ್ದಾರ್ ಉಧಮ್ ಸಿಂಗ್ ಪ್ರತೀಕಾರ ತೀರಿಸಿಕೊಳ್ಳಲು ಮುಂದಾದನು, ಅವನು ಭಗತ್ ಸಿಂಗ್ ನ ಪ್ರಾಣ ಸ್ನೇಹಿತ, ತನ್ನ ಪ್ರತೀಕಾರಕ್ಕಾಗಿ ಅಮೆರಿಕಾಗೆ ಹೋಗಿ ಶಸ್ತ್ರಾಸ್ತ್ರಗಳನ್ನು ಕಲೆ ಹಾಕಿ ಮರಳಿ ಭಾರತಕ್ಕೆ ವಾಪಾಸಾದನು. ಕೊನೆಗೆ ಪ್ರತೀಕಾರದ ಸಲುವಾಗಿ 1934ರಲ್ಲಿ ಇಂಗ್ಲೆಂಡ್ ಗೆ ಪ್ರಯಾಣ ಬೆಳೆಸಿದನು. ಅಲ್ಲಿ ಭಾರತೀಯರ ಸ್ನೇಹ ಸಂಪಾದಿಸಿದನು. ಹೀಗೆ ಸಣ್ಣ ಪುಟ್ಟ ಕೆಲಸಗಳನ್ನು ಮಾಡುತ್ತ ತನ್ನ ಗುರಿಯ ಬಗ್ಗೆ ಚಿಂತಿಸುತ್ತಿದ್ದನು. ಮೈಕೆಲ್ ಓಡ್ವಯರ್ ನ ಸಂಪರ್ಕ ಸಾಧಿಸಿ ಆತನ ಸ್ನೇಹ ಸಂಪಾದಿಸಿ ಆತನ ಮನೆಯಲ್ಲಿಯೇ ಕೆಲಸ ಗಿಟ್ಟಿಸಿಕೊಳ್ಳುವಲ್ಲಿ ಯಶಸ್ವಿಯಾದನು ಉಧಮ್ ಸಿಂಗ್. ಮೈಕೆಲ್ ಓಡ್ವಯರ್ ನ ಚಲನವಲನ, ದಿನಚರಿಯ ಬಗ್ಗೆ ತಿಳಿದುಕೊಳ್ಳುವುದು ಉಧಮ್ ಸಿಂಗ್ ನ ಉದ್ದೇಶವಾಗಿತ್ತು. ಮನಸ್ಸು ಮಾಡಿದ್ದರೆ ಉಧಮ್ ಸಿಂಗ್ ಆತನ ಮನೆಯಲ್ಲಿಯೇ ಮೈಕೆಲ್ ಓಡ್ವಯರ್ ನನ್ನು ಕೊಲೆ ಮಾಡಬಹುದಿತ್ತು ಆದರೆ ಹಾಗೆ ಮಾಡದೆ ಸೂಕ್ತ ಸಮಯಾವಕಾಶಕ್ಕಾಗಿ ತಾಳ್ಮೆಯಿಂದ ಕಾದನು. ಕೊನೆಗೆ ಮಾರ್ಚ್ 13,1940 ರಂದು ಲಂಡನ್ ನ ಕ್ಯಾಕ್ ಸ್ಟನ್ ಹಾಲ್ನಲ್ಲಿ ಮೈಕೆಲ್ ಓಡ್ವಯರ್ ನನ್ನು ಗುಂಡಿಕ್ಕಿ ಹತ್ಯೆ ಮಾಡಿದನು. ಬ್ರಿಟೀಷ್ ಸರ್ಕಾರ ಈತನಿಗೆ 1940 ರ ಜುಲೈ 31 ರಂದು ಗಲ್ಲು ಶಿಕ್ಷೆ ವಿಧಿಸಿತು,ಕೇವಲ ತನ್ನ 40 ನೇ ವಯಸ್ಸಿಗೆ ದೇಶಕ್ಕಾಗಿ ಪ್ರಾಣವನ್ನರ್ಪಿಸಿದ ಮಹಾನ್ ದೇಶಭಕ್ತ ಸರ್ದಾರ್ ಉಧಮ್ ಸಿಂಗ್. ಈತನ ಅವಶೇಷಗಳನ್ನು 1975 ರಲ್ಲಿ ಭಾರತಕ್ಕೆ ಕಳುಹಿಸಲಾಯಿತು. ಈಗಲೂ ಸಹ ಈ ಭೀಕರ ಘಟನೆಯ ಬಗ್ಗೆ ಬ್ರಿಟನ್ ಸರ್ಕಾರ ಯಾವುದೇ ಅಧಿಕೃತ ಹೇಳಿಕೆಯನ್ನು ನೀಡಿಲ್ಲ. ಜಲಿಯನ್ ವಾಲಾಬಾಗ್ ಹತ್ಯಾಕಾಂಡವು ಇತಿಹಾಸ ಕಂಡ ದುರಂತ ಘಟನೆಯಾಗಿದೆ,ಸಾವಿರಾರು ಮುಗ್ಧಜನರ ಮಾರಣಹೋಮಕ್ಕೆ ಸಾಕ್ಷಿಯಾಗಿದೆ.



# ಭಾರತೀಯ ತತ್ವಶಾಸ್ತ್ರದಲ್ಲಿ ಗಣಿತ

ಟಿ.ಆರ್.ಮಂಜನಾಥ , ಬೆಂಗಳೂರು

ಹಳೆಯ ಕಾಲದ ಗಣಿತದ ಉಪನ್ಯಾಸಕರಿಗೆ ಸನಾತನ ಧರ್ಮದ ಆಳವಾದ ಜ್ಞಾನವಿತ್ತು. ಅವರ ಉಪನ್ಯಾಸ, ಚಿಂತನಾತ್ಮಕ ಹಾಗೂ ಸ್ವಾರಸ್ಯಕರವಾಗಿರುತ್ತಿತ್ತು. ಅಂತಹ ಉಪನ್ಯಾಸಕರು ಈಗ ಹುಡುಕಿದರೂ ಸಿಗುವುದು ಕಷ್ಟ.

ಒಮ್ಮೆ ಅವರು ವಿದ್ಯಾರ್ಥಿಗಳಿಗೆ ಕೆಲವು ವಿಚಿತ್ರ ಪ್ರಶ್ನೆಗಳನ್ನು ಕೇಳಿದರು.

ಸೊನ್ನೆ ಎಂದರೇನು? ಅನಂತ ಎಂದರೇನು? ಸೊನ್ನೆ ಮತ್ತು ಅನಂತ ಒಂದೇನೇ?

ಅದಕ್ಕೆ ಉತ್ತರವಾಗಿ ವಿದ್ಯಾರ್ಥಿಗಳು ಹೀಗೆ ಹೇಳಿದರು. ಸೊನ್ನೆ ಎಂದರೆ ಏನೂ ಇಲ್ಲ ಎಂದರ್ಥ. ಅನಂತ ಎಂದರೆ ಎಣಿಸಲಾಗದಷ್ಟು ಎಂದು. ಸೊನ್ನೆ ಮತ್ತು ಅನಂತ ವಿರುದ್ಧ. ಹಾಗಾಗಿ ಸೊನ್ನೆ ಮತ್ತು ಅನಂತ ಸಮನಾಗಲು ಸಾಧ್ಯವೇ ಇಲ್ಲ.

ಅದಕ್ಕೆ ಉಪನ್ಯಾಸಕರು ಎಣಿಸಲಾಗದ ಸಂಖ್ಯೆ ಇರಲು ಹೇಗೆ ಸಾಧ್ಯ? ಎಂದು ಕೇಳಿದರು.ಅದಕ್ಕೆ ವಿದ್ಯಾರ್ಥಿಗಳಲ್ಲಿ ಉತ್ತರವಿರಲಿಲ್ಲ. ಎಲ್ಲರೂ ಮೌನವಾಗಿದ್ದರು.

ಆಗ ಆ ಉಪನ್ಯಾಸಕರು 'ಅನಂತ'ದ ಬಗ್ಗೆ ವಿಶಿಷ್ಟ ರೀತಿಯ ವಿವರಣೆ ಕೊಟ್ಟರು.

ಒಬ್ಬ ಅನಕ್ಷರಸ್ತ ದನಕಾಯುವವನು ಇದ್ದಾನೆ ಎಂದುಕೊಳ್ಳಿ. ಅವನಿಗೆ 20 ಸಂಖ್ಯೆಯಿಂದ ಮುಂದೆ ಎಣಿಸಲು ಬರುವುದಿಲ್ಲ. ಅವನ ಹತ್ತಿರ 20 ದನಗಳಿಗಿಂತ ಕಡಿಮೆ ದನಗಳಿದ್ದರೆ, ಅವನು ಅಲ್ಲಿರುವ ದನಗಳ ಸಂಖ್ಯೆಯನ್ನು ನಿಖರವಾಗಿ ಇಷ್ಟು ಎಂದು ಹೇಳುತ್ತಾನೆ. ಉದಾಹರಣೆಗೆ ಐದು, ಹತ್ತು, ಹದಿನೈದು, ಹದಿನೆಂಟು. ಆದರೆ 20ಕ್ಕಿಂತ ಹೆಚ್ಚು ದನಗಳಿದ್ದರೆ ಆಗ ಅವನು ಬಹಳ ದನಗಳಿವೆ ಎನ್ನುತ್ತಾನೆ.



ಹಾಗಾಗಿ ಗಣಿತದಲ್ಲಿ ಅನಂತ ಎಂದರೆ ಎಣಿಸಲಾಗದ್ದು ಅಥವಾ ಬಹಳ ಎಂದಾಯಿತು. ಹಾಗೆ ಸೊನ್ನೆ ಎಂದರೆ ಏನೂ ಇಲ್ಲ ಅಥವಾ ಬಹಳ ಕಡಿಮೆ ಎಂದಾಯಿತು.

ಭೂಮಿಯ ಮತ್ತು ಸೂರ್ಯನ ಅಂತರ ನಿಮಗೆಲ್ಲ ಗೊತ್ತಿರುವಂತೆ 151.77 ಮಿಲಿಯನ್ ಕಿಲೋ ಮೀಟರ್. ಭೂಮಿಯ ಸುತ್ತಳತೆ 40,075 ಕಿಲೋ ಮೀಟರ್. ಸೂರ್ಯನ ಮತ್ತು ಭೂಮಿಯ ಅಂತರಕ್ಕೆ ಭೂಮಿಯ ಸುತ್ತಳತೆಯನ್ನು ಹೋಲಿಸಿದಾಗ ಅದು ಬಹಳ ಕಡಿಮೆ ಅಥವಾ ಸೊನ್ನೆಗೆ ಸಮ. ಆದರೆ ಅದೇ ಭೂಮಿಯ ಸುತ್ತಳತೆಯನ್ನು ಒಂದು ಸಣ್ಣ ಕಾಳಿಗೆ ಹೋಲಿಸಿದಾಗ ಭೂಮಿಯ ಸುತ್ತಳತೆ ಬಹಳ ದೊಡ್ಡದು ಅಥವಾ ಅನಂತ (ಎಣಿಸಲಾಗದಷ್ಟು)



ಆದ್ದರಿಂದ ಸಂದರ್ಭಕ್ಕೆ ಅನುಸಾರವಾಗಿ ಅಥವಾ ನಮ್ಮ ಸಾಂದರ್ಭಿಕ ಹೋಲಿಕೆಗೆ ಅನುಸಾರವಾಗಿ ಒಂದು ಸಂಖ್ಯೆ ಸೊನ್ನೆಯೂ ಆಗಬಹುದು ಅಥವಾ ಅನಂತವೂ ಆಗಬಹುದು ಅಲ್ಲವೇ? ಎಂದರು.

ಹಾಗೆಯೇ ಮುಂದುವರೆದು ಬಡತನ ಹಾಗೂ ಶ್ರೀಮಂತಿಕೆಯ ಸಂಬಂಧವೂ ಈ ಸೊನ್ನೆ ಮತ್ತು ಅನಂತದ ಸಂಬಂಧದಂತೆಯೇ. ಅದು ನಮ್ಮ ಅಪೇಕ್ಷೆಗಳನ್ನು, ಅವಶ್ಯಕತೆಗಳನ್ನು ಅವಲಂಬಿಸಿಕೊಂಡಿದೆ.

ನಮ್ಮ ಆದಾಯ ನಮ್ಮ ಅವಶ್ಯಕತೆಗಳಿಗಿಂತ ಹೆಚ್ಚಿದ್ದರೆ ಆಗ ನಾವು ಶ್ರೀಮಂತರು ನಮ್ಮ ಅವಶ್ಯಕತೆಗಳು, ಅಪೇಕ್ಷೆಗಳು ನಮ್ಮ ಆದಾಯಕ್ಕಿಂತ ಹೆಚ್ಚಿದ್ದರೆ ಆಗ ನಾವು ಬಡವರು. ನಾನು ಶ್ರೀಮಂತ. ಬಹಳ ಹಣ ಗಳಿಕೆಯಿಂದಲ್ಲ. ನನ್ನ ಅವಶ್ಯಕತೆಗಳನ್ನುಕಡಿಮೆ ಮಾಡಿರುವುದರಿಂದ.

ಹಾಗೆಯೇ ನೀವು ಕೂಡಾ ನಿಮ್ಮ ಅವಶ್ಯಕತೆಗಳನ್ನು, ಅಪೇಕ್ಷೆಗಳನ್ನು ನಿಮ್ಮ ಆದಾಯಕ್ಕಿಂತ ಕಡಿಮೆ ಮಾಡಿದರೆ ನೀವು ಕೂಡಾ ಶ್ರೀಮಂತರೇ ಅಲ್ಲವೇ? ಎಂದು ತಮ್ಮ ಉಪನ್ಯಾಸ ಮುಗಿಸಿದರು.



# ನಮ್ಮ ಶಬ್ದಗಳೂ ಸಹ ನಮ್ಮ ಕರ್ಮಗಳಾಗಿರುತ್ತವೆ

**ಹೇಮಂತ್ ಚಿನ್ನು**, ಹಾಸನ

ಅದೇ ತಾನೇ ಮಹಾಭಾರತ ಯುದ್ಧ ಮುಗಿದಿತ್ತು. 18 ದಿನಗಳ ಯುದ್ಧ ದ್ರೌಪದಿಯನ್ನು ೮೦ನೇ ವಯಸ್ಸಿನವರೆಗೂ ಕೊಂಡೊಯ್ದಿತ್ತು. ಮಾನಸಿಕ ಮತ್ತು ದೈಹಿಕ ರೂಪದಲ್ಲಿ. ಊರಲ್ಲಿ ಎಲ್ಲಿ ನೋಡಿದರಲ್ಲಿ ವಿಧವೆಯರೇ ಕಾಣಿಸುತ್ತಿದ್ದರು. ಕೈ ಕಾಲು ಮುರಿದುಕೊಂಡು ಅಂಗವೈಕಲ್ಯಗೊಂಡ ಪುರುಷರು, ಅನಾಥ ಮಕ್ಕಳು ಓಡಾಡುತ್ತಿದ್ದರು. ಸ್ಮಶಾನ ಮೌನಗೊಂಡಿತ್ತು ನಂದನವನದಂತಿದ್ದ ಹಸ್ತಿನಾಪುರ.



ರಾಣಿ ದ್ರೌಪದಿ ಶೂನ್ಯಮನಸ್ಕಳಾಗಿ ತದೇಕ ಚಿತ್ತದಿಂದ ಗೋಡೆಯನ್ನು ನೋಡುತ್ತಾ ಕುಳಿತಿದ್ದಳು. ಶ್ರೀ ಕೃಷ್ಣ ಪರಮಾತ್ಮ ಅಲ್ಲಿಗೆ ಬಂದ. ದ್ರೌಪದಿ ಓಡಿ ಹೋಗಿ ಕೃಷ್ಣನನ್ನು ತಬ್ಬಿಕೊಳ್ಳುತ್ತಾಳೆ ಮತ್ತು ಅಳಲು ಪ್ರಾರಂಭಿಸುತ್ತಾಳೆ. ಕೃಷ್ಣ ದ್ರೌಪದಿಯ ತಲೆಯನ್ನು ಸವರುತ್ತಾನೆ ಮತ್ತು ಸಮೀಪದ ಪಲ್ಲಂಗದ ಮೇಲೆ ಕೂರಿಸುತ್ತಾನೆ.

*ದ್ರೌಪದಿ* :- ಕೃಷ್ಣ, ಏನಿದೆಲ್ಲ? ಹೀಗೆಲ್ಲ ಆಗುತ್ತೆ ಅಂತ ನಾನು ಅಂದುಕೊಂಡೇ ಇರಲಿಲ್ಲ.

*ಕೃಷ್ಣ* :- ಕರ್ತವ್ಯ ಮತ್ತು ನಿಯತ್ತು ಬಹು ಕ್ರೂರಿ ಪಾಂಚಾಲಿ, ಅದು ನಾವು ಯೋಚಿಸಿದಂತೆ ಇರುವುದಿಲ್ಲ. ನಮ್ಮ ಕರ್ಮಗಳನ್ನು ಪರಿಣಾಮಗಳಲ್ಲಿ ಬದಲಿಸಿಬಿಡುತ್ತದೆ..... ನೀನು ಸೇಡು ತೀರಿಸಿಕೊಳ್ಳಬೇಕು ಅಂದುಕೊಂಡಿದ್ದೆ, ನಿನ್ನ ಸೇಡು ತೀರಿತು. ದುಶ್ಯಾಸನ, ದುರ್ಯೋಧನರಷ್ಟೇ ಅಲ್ಲ ಇಡೀ ಕೌರವ ವಂಶವೇ ನಿರ್ವಂಶವಾಯ್ತು. ಇದು ನೀನು ಖುಷಿ ಪಡುವ ವಿಚಾರ. ಯಾಕೆ ... ನಿನಗೆ ಆನಂದವಾಗುತ್ತಿಲ್ಲವೇ?

*ದ್ರೌಪದಿ* :- ಕೃಷ್ಣಾ....ನೀನು ನನ್ನ ದುಃಖವನ್ನು ಒರೆಸಲು ಬಂದಿರುವೆಯಾ ... ಅಥವಾ ನನ್ನ ಗಾಯಗಳ ಮೇಲೆ ಉಪ್ಪು ಸುರಿಯಲು ಬಂದಿರುವೆಯಾ?

*ಕೃಷ್ಣ* :- ಇಲ್ಲ ದ್ರೌಪದಿ, ನಾನು ವಾಸ್ತವಿಕತೆಯನ್ನು ಅರ್ಥೈಸಲು ಬಂದಿದ್ದೇನೆ. ನಮ್ಮ ಕರ್ಮದ ಫಲಗಳ ಪರಿಣಾಮಗಳು ನಮ್ಮ ಕಣ್ಣಿಗೆ ಕಾಣುವುದಿಲ್ಲ. ಅವು ಹತ್ತಿರವಾದಾಗ ನಮ್ಮ ಕೈಯಲ್ಲಿ ಏನೂ ಇರುವುದಿಲ್ಲ.

*ದ್ರೌಪದಿ* :- ಅಂದ್ರೆ ......ಇದಕ್ಕೆಲ್ಲ ನಾನೇ ಕಾರಣಾನಾ ಕೃಷ್ಣ?

*ಕೃಷ್ಣ* :- ಇಲ್ಲ ದ್ರೌಪದಿ... ನಿನ್ನನ್ನು ನೀನು ಇಷ್ಟೊಂದು ಮಹತ್ವಪೂರ್ಣಳು ಎಂದು ತಿಳಿದುಕೊಳ್ಳಬೇಡ. ಆದರೆ ನೀನು ನಿನ್ನ ಕರ್ಮಗಳಲ್ಲಿ ಕಿಂಚಿತ್ತಾದರೂ ದೂರದೃಷ್ಟಿ ಇಟ್ಟಿದ್ದಿದ್ದರೆ ಇಂದು ನೀನು ದುಃಖಿಸುವ ಈ ಪರಿಸ್ಥಿತಿ ಬರುತ್ತಿರಲಿಲ್ಲ.

*ದ್ರೌಪದಿ* :- ???????

*ಕೃಷ್ಣ* :- ಅಂದು ಸ್ವಯಂವರದಲ್ಲಿ ಕರ್ಣನಿಗೆ ನೀನು ಅವಮಾನಿಸದೇ ಇದ್ದಿದ್ದರೆ, ಭಾಗವಹಿಸಲು ಅವಕಾಶ ಕೊಟ್ಟಿದ್ದರೆ, ಅದರ ಪರಿಣಾಮ ಬೇರೇನೇ ಇರುತ್ತಿತ್ತು. ನಂತರ ಕುಂತಿಮಾತಾ ನಿನಗೆ ಐದೂ ಪಾಂಡವರನ್ನು ವಿವಾಹವಾಗಲು ಆಹ್ವಾನಿಸಿದಾಗ ನೀನು ತಿರಸ್ಕರಿಸಿದ್ದರೆ, ಅದರ ಪರಿಣಾಮವೂ ಇಂದು ಬೇರೇನೇ ಇರುತ್ತಿತ್ತು. ನಂತರ ನಿನ್ನ ಮಹಲಿನಲ್ಲಿ ದುರ್ಯೋಧನನಿಗೆ ಅವಮಾನ ಮಾಡಿರದೆ ಇದ್ದಿದ್ದರೆ, ನಿನ್ನ ವಸ್ತ್ರಾಪಹರಣವೇ ಆಗುತ್ತಿರಲಿಲ್ಲ. ಆಗಲೂ ಪರಿಸ್ಥಿತಿ ಬೇರೇನೇ ಆಗುತ್ತಿತ್ತು.

*ನಮ್ಮ ಶಬ್ದಗಳೂ ಸಹ ನಮ್ಮ ಕರ್ಮಗಳಾಗಿರುತ್ತವೆ ದ್ರೌಪದಿ.*

ನಾವು ಶಬ್ದಗಳನ್ನು ಆಡುವ ಮುಂಚೆ ಅವುಗಳನ್ನು ಅಳತೆ ಮಾಡಬೇಕಾಗುತ್ತದೆ. ಇಲ್ಲವಾದರೆ ಅದರ ದುಷ್ಪರಿಣಾಮವನ್ನು ನಾವು ಮಾತ್ರ ಅಲ್ಲ, ನಮ್ಮ ಸುತ್ತಮುತ್ತಲಿನ ವಾತಾವರಣವೂ ಅನುಭವಿಸಬೇಕಾಗುತ್ತದೆ. ಎಲ್ಲ ಜೀವರಾಶಿಗಳಲ್ಲಿ ಮನುಷ್ಯ ಏಕಮಾತ್ರ ಜೀವಿಯ ವಿಷ ಹಲ್ಲಿನಲ್ಲಿರಲ್ಲ, ಬದಲಾಗಿ ಆತನ ಶಬ್ದಗಳಲ್ಲಿ ಇರುತ್ತದೆ. ಅದಕ್ಕಾಗಿಯೇ ನಾವು ಆಡುವ ಶಬ್ದಗಳು ಇತರರಿಗೆ ನಾಟಕದಂತೆ, ಅವರ ಭಾವನೆಗಳಿಗೆ ಧಕ್ಕೆಯಾಗದಂತೆ ಆಡಬೇಕು. ಅಂತಹ ಶಬ್ದಗಳನ್ನು ನಿಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಿ. ಆಗ ಜೀವನ ಚರಿತಾರ್ಥವಾಗಿರುತ್ತದೆ.



# ಕಾರಂತ ಎಂಬ ಕೌತುಕಕ್ಕೆ ನಮನ

ಸತ್ಯಮೂರ್ತಿ ಗಣವಳ್ಳಿ

ನಮ್ಮ ಬಾಲ್ಯ ಹಾಗು ಹರಯದಲ್ಲಿ ನಮಗೆ ಮುದ ನೀಡಿದ, ನಮ್ಮ ಪ್ರಜ್ಞಾ ಪ್ರಪಂಚದ ಪರಿಧಿಯನ್ನು ವಿಸ್ತರಿಸಿದ ಸಾಹಿತಿಗಳ ಲ್ಲಿ ಪ್ರಮುಖರಾದವರು ಬೇಂದ್ರೆ, ಕುವೆಂಪು, ಕಾರಂತರು ಎಂಬ ತ್ರಿಮೂರ್ತಿಗಳು. ಬೇಂದ್ರೆ, ಕುವೆಂಪು ಕವನ, ಕಾವ್ಯಗಳನ್ನು ಹೆಚ್ಚಾಗಿ ರಚಿಸುತ್ತಿದ್ದರಿಂದ, ಕಾರಂತರು ಮುಖ್ಯವಾಗಿ ಕಾದಂಬರಿಗಳನ್ನು ಬರೆಯುತ್ತಿದ್ದರಿಂದ, ಕಾರಂತರು ನಮಗೆ ಹೆಚ್ಚು ಹತ್ತಿರವಾಗಿದ್ದರು ಎಂದು ಕಾಣುತ್ತದೆ. ಆಗಿನ ಕಾಲದಲ್ಲಿ ನಮ್ಮಂತಹ ಜನಸಾಮಾನ್ಯರಿಗೆ ಕಾದಂಬರಿ ಹೊತ್ತುಕಳೆಯುವ ಮುಖ್ಯ ಸಾಧನವಾಗಿತ್ತು. ತ್ರಿವೇಣಿ, ಎಂ.ಕೆ.ಇಂದಿರಾ, ಅ ನ ಕೃ, ತ ರಾ ಸು, ಮೊದಲಾದವರ ಕಾದಂಬರಿಗಳು ನಮಗೆ ಅತೀವ ಖುಷಿ ಕೊಡುತ್ತಿದ್ದವು.ಮತ್ತೆ ನಮ್ಮ ಹರಯದಲ್ಲಿ ನರಸಿಂಹಸ್ವಾಮಿಯವರು, ಅವರ ಪ್ರೇಮ ಕವನಗಳಿಂದ ತೀರ ಹತ್ತಿರವಾಗಿದ್ದರು. ಬೇಂದ್ರೆ ಅರ್ಥವಾಗಲು ಸ್ವಲ್ಪ ಕಾಲ ಬೇಕಾಯಿತು. ಕುವೆಂಪು ಅವರ 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಕಾದಂಬರಿಗಳು, ನಮ್ಮದೆ ಮಲೆನಾಡಿನ ಮಡುಗಟ್ಟಿದ ಸಾಂದ್ರತೆಯನ್ನು ಬಿಂಬಿಸುತ್ತಿದ್ದರಿಂದ ಆತ್ಮೀಯವಾಗಿ ನಮ್ಮನ್ನು ಆವರಿಸಿಕೊಂಡಿದ್ದವು.

ನಮ್ಮ ಪ್ರಜ್ಞಾ ಪ್ರಪಂಚ ವಿಸ್ತಾರವಾದ ಮೇಲೆ ಕಾರಂತರ ಕಾದಂಬರಿಗಳು ಮನೋರಂಜನೆಯ ಜೊತೆಗೆ ಹೊಸ ದಿಗಂತಗಳನ್ನು ತೆರೆದವು. ನನಗೆ ಅವರ ಅಳಿದಮೇಲೆ, ಮೊಗ ಪಡೆದ ಮನ, ಮೈ ಮನಗಳ ಸುಳಿಯಲ್ಲಿ, ನರಸಮ್ಮನ ಸಮಾಧಿ, ಕುಡಿಯರ ಕೂಸು, ಬೆಟ್ಟದ ಜೀವ, ಚಿಗುರಿದ ಕನಸು, ಚೋಮನ ದುಡಿ ಮೊದಲಾದವು ಆ ಕಾಲದಲ್ಲೇ ಪ್ರಿಯವಾಗಿದ್ದವು. 'ಮೂಕಜ್ಜಿಯ ಕನಸುಗಳು' ನನ್ನ ಈಚಿನ ಓದಿಗೆ ಗ್ರಾಸವಾದದ್ದು ಅದು ಚಲನಚಿತ್ರವಾದಮೇಲೆ. ಪಿ.ಶೇಷಾದ್ರಿ ಯವರು ಸಿನೆಮಾ ಮಾಧ್ಯಮದಲ್ಲಿ ಅದನ್ನು ಸಶಕ್ತವಾಗಿ ಚಿತ್ರಿಸಿದ ರೀತಿ ಮತ್ತು ಬಿ.ಜಯಶ್ರೀ ಯವರ ಅನನ್ಯವಾದ ನಟನೆ ಆ ಕಾದಂಬರಿಯನ್ನು ಮತ್ತೆ ಮತ್ತೆ ಓದಲು ಪ್ರೇರಣೆಯಾಯಿತು.

ಕಾರಂತರ 'ಮರಳಿ ಮಣ್ಣಿಗೆ' ಕಾದಂಬರಿ ಯ ಬಗ್ಗೆ ಒಬ್ಬ ಓದುಗನ ಪ್ರತಿಕ್ರಿಯೆ ಹೀಗಿದೆ.

"ಮರಳಿ ಮಣ್ಣಿಗೆ ಅಸದೃಶ ದೃಶ್ಯ ಕಾವ್ಯ.ಓದುತ್ತ ಹೋದಂತೆ ನಮ್ಮನ್ನು ಸಂಪೂರ್ಣ ಆವರಿಸಿಕೊಳ್ಳುವ, ಬೆಂಬಿಡದೆ ಕಾಡುವ, ಕಾಲದ ಪರಿವೆ ಇಲ್ಲದೆ ಸರ್ವಕಾಲಕ್ಕು ಸಲ್ಲುವ ಅಪರೂಪದ ಕಾದಂಬರಿ." ಈ ಮಾತು ಅವರ ಇತರ ಕಾದಂಬರಿಗಳಾದ ಕುಡಿಯರ ಕೂಸು, ಬೆಟ್ಟದ ಜೀವ, ಚೋಮನ ದುಡಿ, ಅಳಿದಮೇಲೆ ಮತ್ತು ಅವರ ಇತರ ಶ್ರೇಷ್ಠ ಕಾದಂಬರಿಗಳಿಗೂ ಅನ್ವಯಿಸುತ್ತದೆ. ಮನುಷ್ಯ ಮತ್ತು ಪ್ರಕೃತಿಯ ನಡುವಿನ ಬಿಡಿಸಲಾರದ ನಂಟು ಅವರ ಕೃತಿಗಳಲ್ಲಿ ಕಂಡುಬರುವ ರೀತಿ ಅನನ್ಯವಾದದ್ದು. ಕಾಡು, ಬೆಟ್ಟ, ನದಿ, ಸಮುದ್ರ, ಕಡಲಿನ ಗಾಳಿ, ಮಳೆಗಾಲದ ಕಡಲಿನ ರುದ್ರ ನರ್ತನ, ಕಣ್ಣಿಗೆ ರಾಚುವ ಹಸಿರಿನ ವರ್ಣನೆ, ಪಶ್ಚಿಮ ಘಟ್ಟಗಳ ಅವರ್ಣನೀಯ ಸೌಂದರ್ಯ ಎಲ್ಲವೂ ಅವರ ಕೃತಿಗಳಲ್ಲಿ ಕಣ್ಣಿಗೆ ಕಟ್ಟುವಂತೆ ಚಿತ್ರಿತವಾಗಿದೆ. ಓದಿದ ಮೇಲೆ ನಾವು ಆ ಪ್ರದೇಶಗಳಿಗೆ ಹೋದರೆ, ಆ ಪರಿಸರ ಹಾಗು ಜನ ನಮಗೆ ಚಿರಪರಿಚಿತ ಎನ್ನುವ ಮಟ್ಟದ ವಿವರಣೆ. ತೀ ನಂ ಶ್ರೀ ಯವರು ಹೇಳಿದಹಾಗೆ" ಕಾರಂತರ ಪ್ರತಿಭೆಗೆ ಅಳವಡದ ಕಲೆಯಿಲ್ಲ; ನಿಸರ್ಗವೇ ನಮ್ಮ ಎದುರಿಗೆ ಸುರುಳಿ ಬಿಚ್ಚಿಕೊಂಡು ಸಾಗುತ್ತಿದ್ದರೆ ಉಂಟಾಗುವ ಅನುಭವ ಕಾರಂತರ ಕೃತಿಗಳಲ್ಲಿ ಕಂಡು ಬರುತ್ತವೆ."

**ಇನ್ನು ಅವರ ಮೇರುಕೃತಿ "ಮೂಕಜ್ಜಿಯ ಕನಸುಗಳು".**

ಮೂಕಜ್ಜಿ, ವೈಚಾರಿಕ ನೆಲೆಗಟ್ಟಿನಲ್ಲಿ ತಾತ್ವಿಕವಾಗಿ ಮೂಡಿದ ಅನನ್ಯ ಕೃತಿ.ಈ ಕಾದಂಬರಿಯ ಅರ್ಥ ಹಾಗು ಆಳ ಕೆಲವು ಕಡೆ ನಮ್ಮ ಅಳತೆಯನ್ನು ಮೀರಿದ್ದು ಎಂದು ನನ್ನ ಅನಿಸಿಕೆ. ತೀರ ಎಳೆಯ ವಯಸ್ಸಿನಲ್ಲೇ ಮದುವೆಯಾಗಿ ಗಂಡನನ್ನು ಕಳೆದುಕೊಂಡು ಜೀವನಪೂರ್ತಿ ಬೆಂದು ಬಾಳಿದ ಮೂಕಜ್ಜಿ ಸಿನಿಕಳಾಗದೆ ತನ್ನ ಮುಂದಿನ ಪ್ರಪಂಚ ಹಾಗು ಚಟುವಟಿಕೆಗಳನ್ನು ಅಳೆದು,ತೂಗಿ,ಆರೋಗ್ಯಕರವಾದ ವಿಶ್ಲೇಷಣೆಗೆ ಒಳಪಡಿಸುತ್ತಾಳೆ. ಮೊಮ್ಮಗ ಸುಬ್ರಾಯನ ಅಪ್ಪ ಸತ್ತಾಗ ಮಾತ್ರ ಅವಳು ಹೇಳಿದ್ದು "ಎಲ್ಲರಿಗೂ ಕಾಲ ಬರುತ್ತದೆ, ಒಂದೊಂದು ದಿನ; ಬಾರದವಳೆಂದರೆ ನಾನೆ". ಮರುಕ್ಷಣ ಅವಳು ಹೇಳಿದ್ದು ಅವಳ ಯಾವಾಗಿನ ಮನಸ್ಥಿತಿಯನ್ನು ಸೂಚಿಸುತ್ತದೆ.

"ಸಂಸಾರವೂ ಹಾಗೆಯೇ, ಸುಖ, ದು:ಖಗಳೂ ಹಾಗೆಯೇ, ಈ ಜಗತ್ತು ಕೂಡ ಹಾಗೆಯೇ, ದೇವರೂ ಹಾಗೆಯೇ, ದಿಂಡರೂ ಹಾಗೆಯೇ, ಅವು ಎಲ್ಲವೂ ನಾವು ಕಟ್ಟಿಕೊಂಡ ಹಾಗೆ.ಗಟ್ಟಿಮಾಡಿಕೊ ಮನಸ್ಸನ್ನು." ಎಂದು ಸುಬ್ರಾಯನಿಗೆ ಹೇಳಿ ಸಾಂತ್ವನ ಗೊಳಿಸುತ್ತಾಳೆ.

ದೇವರು ಎಂಬುದು ನಾವು ನಂಬಿದರೆ ಉಂಟು. ನಂಬಿದ್ದಾರೆ ಜನ. ---- ನಂಬಿಕೆಯೂ ಒಂದು ಮರುಳೆ ಎಂದು ಹೇಳುವ ಮೂಕಜ್ಜಿ ದೇವರಿಗಾಗಿ ಮರ ಸುತ್ತಲಿಲ್ಲ. ಪೂಜೆ - ಪುನಸ್ಕಾರ ಗಳಲ್ಲಿ ಯಾವ ನಿಷ್ಠೆಯೂ ತೋರಲಿಲ್ಲ.

ಸ್ವರ್ಗ ನರಕ ಹೆದರುವರಿಗೆ ಮಾತ್ರ ,ಹೆದರದವರಿಗೆ ಯಾವುದೂ ಇಲ್ಲ ಎನ್ನುತ್ತಾಳೆ.

ಗಂಡು ಹೆಣ್ಣಿನ ಸಂಬಂಧ ದ ಬಗೆಗೂ ಸಾಂಪ್ರದಾಯಿಕ ನಿಲುವು ಅವಳದ್ದಲ್ಲ. ಆದ್ದರಿಂದಲೇ ಹೇಳುತ್ತಾಳೆ." ಗಂಡು ಹೆಣ್ಣಿನ ಮಾಯೆಯಿಂದಲೇ ಸಾವಿರ ಸುಖ, ಸಾವಿರ ದು:ಖ,ಸಾವಿರ ರುಚಿ, ಸಾವಿರ ಅರುಚಿ ಹುಟ್ಟಿದ್ದು" ----- ಅದೇ ಮಾಯೆಗೆ ರಾಮ, ಕೃಷ್ಣ, ಶಿವ, ಬ್ರಹ್ಮ ಎಲ್ಲ ದೇವರನ್ನೂ ಸಿಕ್ಕಿ ಹಾಕಿದ್ದೇವೆ ನಾವು. ಹೆಂಡತಿ ಮಕ್ಕಳನ್ನು ಬಿಟ್ಟರು ದಾಸರು. ವಿಟ್ಠಲನನ್ನು, ನಾರಾಯಣನನ್ನು ನಂಬಿ ಹಾಡಿದರು. ನಂಬಿದ್ದೇ ನಂಬಿದ್ದು, ಹಾಡಿದ್ದೇ ಹಾಡಿದ್ದು. ತಮ್ಮ ಹೆಂಡಿರನ್ನು ದಾರಿಮೇಲೆ ಕೆಡೆದು ಹೋದದ್ದೂ ನಿಜ. ಹಾಗೆ ಮಾಡಿ

ಬೇಡಿದ್ದು ಯಾರನ್ನು? ತಂತಮ್ಮ ಹೆಂಡಿರೊಡನೆ ಸುಖವಾಗಿ ವೈಕುಂಠದಲ್ಲೋ, ಕೈಲಾಸದಲ್ಲೋ ಇರುವಂತ ವಿಷ್ಣುವನ್ನು,ಶಿವನನ್ನು. ಅವರೇನು ಕೊಟ್ಟಾರು? ಅವರಿಗೂ ಅವರ ಹೆಂಡಂದಿರಿಂದ ಮುಕ್ತಿ ಸಿಗದೆ ಇರುವಾಗ ?"

ತಾವೇ ಮೋಹಪಾಶ ಕಡಿದುಕೊಳ್ಳಲಾರದ ದೇವರು ಮನುಷ್ಯನ ಮೋಹಪಾಶ ತೊಲಗಿಸುತ್ತಾರೆ ಎನ್ನುವುದು ಕನಸು ಭ್ರಮೆ ಎನ್ನುತ್ತಾಳೆ. ಅದಕ್ಕಾಗಿಯೆ ಆಕೆ ಸುಬ್ರಾಯನಿಗೆ ಹೇಳುತ್ತಾಳೆ. "ಇರುವ ನಾಲ್ಕು ದಿನ ಚಂದವಾಗಿ ಇರುವದಪ್ಪ; ಹೋಗುವ ಕಾಲ ಬಂದರೆ ಹೋಗುವುದು. ಉಳಿದೆಲ್ಲಾ ಮಾತುಕತೆ ನಮ್ಮ ಬುದ್ಧಿಗೆ ಮೀರಿದ ಅಧಿಕ ಪ್ರಸಂಗವಾಗಿ ಕಾಣಿಸುತ್ತದೆ"ಎಂದು.


ಋಷಿ ಮುನಿಗಳ ಬಗ್ಗೆಯೂ ಇದೆ ಅಭಿಪ್ರಾಯ. "ಸಂಸಾರದಲ್ಲಿ ಇರುವುದಕ್ಕೆ ಭಯವಾಗಿ ಸಂಸಾರದ ದುಃಖ, ನೋವು, ಸಾವು ಬೇಡ, ಬರಿಯ ಸುಖ ಮಾತ್ರ ಎಂದು ಸಂಸಾರವನ್ನು ಬಿಟ್ಟು ಗುಹೆ ಸೇರಿಕೊಂಡರು" ಎಂದು ಹೇಳುತ್ತಾಳೆ.

ಬಾಲ್ಯದ ಗೆಳತಿ ತಿಪ್ಪಕ್ಕನೊದಿಗೆ ಮಾತನಾಡುತ್ತಾ ಜನ ಪೂಜಿಸುತ್ತಿದ್ದ ಹಿಂಡುಗಾನ ಅಮ್ಮನನ್ನು ಕುರಿತು ಹೇಳುತ್ತಾಳೆ, "ಈ ಅಮ್ಮ ಮಾಯಾವಿ, ಸಾವಿರ ವೇಷ ತೊಟ್ಟವಳು---- ಹುಟ್ಟಿಸಿದ ಮಕ್ಕಳಿಂದ ಕಪ್ಪ ಕಾಣಿಕೆ ಕೇಳಿದಳು.ರಕ್ತ ಬಲಿ ಬೇಡಿದಳು.ಕುರಿ ಕೋಣಗಳನ್ನು ತಿಂದಳು. ಮಕ್ಕಳನ್ನು ತಿಂದಳು" ಎಂದು.

ನಾಗಿ ಎನ್ನುವ ಹೆಣ್ಣು ಮಗಳು ತನ್ನ ಗಂಡನನ್ನು ಬಿಟ್ಟು ಸುಬ್ರಾಯ ನ ಮಾವನೊಂದಿಗೆ ಸಂಬಂಧ ಬೆಳಸಿ ಮತ್ತೆ ಅವನಿಂದ ಮಕ್ಕಳಾದ ಮೇಲೆ ಅವನಿಂದಲೇ ತಿರಸ್ಕೃತಳಾಗಿ ಅನಾಥಳಾದಾಗ ಗಂಡ ಮತ್ತು ಹೆಂಡತಿಯನ್ನು ಒಂದು ಮಾಡಿ ಸಂತೋಷ ಪಡುತ್ತಾಳೆ.

ಹೀಗೆ ಕಾರಂತರು ಇಂತಹ ಹಲವು ಪ್ರಶ್ನೆ ಗಳನ್ನು ಮೂಕಜ್ಜಿಯ ಮೂಲಕ ವಿಶ್ಲೇಷಣೆಗೆ ಒಳಮಾಡಿದ್ದಾರೆ. ಕಾರಂತರದ್ದು ಬಹುಮುಖ ಪ್ರತಿಭೆ. ಸಣ್ಣ ಕತೆಗಳು, ಕಥನ ಕವನಗಳು,ಕಥಾ ಸಂಕಲನಗಳು,ನಾಟಕಗಳು,ಪ್ರವಾಸ ಕಥನ, ಆತ್ಮ ಚರಿತ್ರೆ, ಯಕ್ಷಗಾನ ,ಬಾಲ ಪ್ರಪಂಚ ,ವಿಜ್ಞಾನ ಪ್ರಪಂಚ ,ಸಿರಿಗನ್ನಡ ಅರ್ಥಕೋಶ, ಹೀಗೆ ಅವರ ಕೃತಿಗಳ,ಕೆಲಸಗಳ ವ್ಯಾಪ್ತಿ ತುಂಬಾ ವಿಶಾಲವಾದದ್ದು. ಒಂದು ವ್ಯಕ್ತಿ ಒಂದು ಜೀವಮಾನ ಕಾಲದಲ್ಲಿ ಇಷ್ಟೊಂದು ಸಾಧಿಸಲು ಸಾದ್ಯವೆ ಎನಿಸುತ್ತದೆ.

ಹೀಗೆ ತಮ್ಮ ಬದುಕಿಗೆ ಯಾವುದೇ ಸೀಮಿತ ಪರಿಧಿಗಳನ್ನು ಬಯಸದ ಕಾರಂತರು ಎಲ್ಲ ಕ್ಷೇತ್ರಗಳಲ್ಲೂ ಕ್ರಿಯಾಶೀಲರಾಗಿ ಬದುಕಿದರು.ಹಾ ಮಾ ನಾಯಕರು ಹೇಳಿದಹಾಗೆ ಯಾವ ಮಾನದಿಂದ ಅಳೆದರೂ ಕಾರಂತರು ವಿಶ್ವ ಲೇಖಕರ ಪಟ್ಟಿಯಲ್ಲಿ ಸೇರಬಲ್ಲರು.ಎಸ್ ಆರ್ ವಿಜಯಶಂಕರ್ ರ ಮಾತಿನಲ್ಲಿ ಹೇಳುವುದಾದರೆ ಕಾರಂತರ ಲೋಕದೃಷ್ಟಿ ಸಮಸ್ತ ಬ್ರಹ್ಮಾಂಡ ವನ್ನು ಒಳಗೊಳ್ಳುವಂತದ್ದು. ಅವರದು ಇತರರ ಪ್ರಾಮಾಣಿಕ ನಂಬಿಕೆಗಳನ್ನು ಗೌರವಿಸುವ ನಾಸ್ತಿಕವಾದ. ಅವರಿಗೆ ಸತ್ಯದ ಅನ್ವೇಷಣೆ ಮುಖ್ಯ .ಎಲ್ಲ ಜ್ಞಾನ ಶಾಖೆಗಳು ಈ ಅನ್ವೇಷಣೆಯಲ್ಲಿ ಅವರಿಗೆ ಸಮಾನ.ಅಂತಹ ಮಹಾನ್ ಚೇತನಕ್ಕೆ ನಮಿಸೋಣ.





# ಹರಿಕಥೆಯ ಹರವು

ಉಷಾ ಬಸ್ರೂರ್, ನ್ಯೂ ಜರ್ಸಿ

ಕರ್ನಾಟಕದ ಪ್ರಾಚೀನ ಕಲೆಗಳಲ್ಲೊಂದಾದ ಹರಿಕಥೆಯು ಎಲ್ಲ ಕಲೆಗಳ ಸಂಗಮವಿದ್ದಂತೆ. ಭಗವಂತನ ಕಥೆಗಳನ್ನು ಹಾಡು, ಕಥೆ, ಅಭಿನಯಗಳ ಮೂಲಕ ಎಲ್ಲರಿಗೂ ಅರ್ಥವಾಗುವಂತೆ ಹೇಳುವ ಶೈಲಿಯೇ ಹರಿಕಥಾಮೃತ! ಹಿಂದೆ, ದೇವಾಲಯದ ಆವರಣದಲ್ಲಿ ಯಾವಾಗಲೂ ಕೇಳಿಬರುತ್ತಿದ್ದ ಈ ಕಲೆ ಕ್ರಮೇಣ ಕಣ್ಮರೆಯಾಗುತ್ತಾ ಬಂದಿದೆ. ಅದು ಪೂರ್ಣವಾಗಿ ನಶಿಸಿಹೋಗದಂತೆ ಕೆಲ ಉತ್ಸಾಹಿ ಹರಿಕಥಾಗಾರರು ಪಣತೊಟ್ಟು, ಮುಂಚಿನಂತೆಯೇ ಪ್ರಚಲಿತಗೊಳಿಸಲು ಹರಸಾಹಸ ಪಡುತ್ತಿದ್ದಾರೆ. ಅಂತೆಯೇ ನಮ್ಮ ನ್ಯೂಜೆರ್ಸಿಯ ವಾಕ್-ಶ್ರವಣ ತಜ್ಞೆಯಾದ ಶ್ರೀಮತಿ ವೀಣಾ ಮೋಹನ್ ಅವರು ಕಳೆದ 11 ವರ್ಷಗಳಿಂದ ಅವರ ತಂಡದೊಂದಿಗೆ ವರ್ಷಕ್ಕೊಮ್ಮೆಯಾದರೂ ಒಂದು ಹರಿಕಥಾ ಪ್ರಸಂಗ ನಡೆಸಿಕೊಡಬೇಕೆಂದು ಪ್ರಾರಂಭಿಸಿ, ಈಗ ಜನರ ಅಪೇಕ್ಷೆಯಂತೆ ತಿಂಗಳಿಗೊಮ್ಮೆ ನಡೆಸಿಕೊಡುತ್ತಿದ್ದಾರೆ. ಇವರ ತಂಡವು ಅಮೆರಿಕಾದ ವಿವಿಧ ರಾಜ್ಯಗಳಲ್ಲಿ ಆಹ್ವಾನದ ಮೇರೆಗೆ ಹೋಗಿ ಪ್ರದರ್ಶನ ನೀಡಿದೆ. ಕೋವಿಡ್ ಸಮಯದಲ್ಲಿ zoom ನಲ್ಲಿಯೂ , ಹಾಗೆಯೇ ಭಾರತದ ಕೆಲವೆಡೆಗಳಲ್ಲಿ Live ಕಾರ್ಯಕ್ರಮವನ್ನೂ ನಡೆಸಿಕೊಟ್ಟಿದ್ದಾರೆ.

ಮೊದಲು ಬರೀ ಕನ್ನಡದಲ್ಲಿ ಮಾತ್ರ ಹೇಳುತ್ತಿದ್ದ ಕಥೆಗಳನ್ನು ಬರಬರುತ್ತಾ ಕೇಳುಗರ ಇಚ್ಛಾನುಸಾರ ಅನ್ಯಭಾಷೆಗಳಲ್ಲೂ ಹೇಳತೊಡಗಿದರು. ಮಕ್ಕಳಿಗೆ ಇಂಗ್ಲೀಷ್ನಲ್ಲೂ, ಅಂತೆಯೇ ತಮಿಳು, ಹಿಂದಿ ಶ್ರೋತೃಗಳಿಗಾಗಿ ಆ ಭಾಷೆಗಳಲ್ಲೂ ಮಾಡಿದ್ದಾರೆ. ಸಂತೋಷದ ಸಂಗತಿ ಎಂದರೆ, ಕಳೆದ 2-3 ವರ್ಷಗಳಿಂದ ನಮ್ಮೀ ಕಲೆಯನ್ನು, ಕಥೆಗಳನ್ನು ಆಸಕ್ತ ಶ್ರೀಲಂಕಾ ಪ್ರಜೆಗಳಿಗೂ ಹೇಳುತ್ತಿದ್ದಾರೆ. ಈ ಹರಿಕಥೆಯ ಮೂಲಕ ಹೆಚ್ಚು ಹೆಚ್ಚು ಜನರಿಗೆ ಮಹಾಭಾರತ, ರಾಮಾಯಣದಂತಹ ಪುರಾಣ ಕಥೆಗಳನ್ನೂ, ಸಂತರ ಹಾಗೂ ವೀರ ಯೋಧರ ಸಾಹಸಗಾಥೆಗಳನ್ನೂ ಪ್ರಚಾರ ಮಾಡುತ್ತಿರುವ ನಮ್ಮ ಹರಿಕಥಾ ದಾಸರಿಗೆ ಎಲ್ಲ ರೀತಿಯಲ್ಲೂ ಸಹಕರಿಸಿ, ಈ ಪ್ರಾಚೀನ ಕಲೆಯನ್ನು ಉಳಿಸಿ, ಬೆಳೆಸಲು ನಾವೆಲ್ಲರೂ ಪಣ ತೊಡೋಣ!









# ಎರಡು ಕವನ

ಶಾಮಸುಂದರ್ ಹಲ್ಲೇಗೆರೆ , ನ್ಯೂ ಜರ್ಸಿ

## ಆ ಐವತ್ತರಾ ನೋಟು

ಕೈಯಲ್ಲಿ ಮರೆದಿದ್ದ ಐವತ್ತರಾ ನೋಟು
ನನ್ನ ಸ್ವಾರ್ಥತೆಯ ಎತ್ತಿ ತೋರಿಸಿತ್ತು
ಮೈಮೇಲೆ ಧರಿಸಿದ್ದ ವಿದೇಶೀ ಕೋಟು
ನನ್ನ ಸಿರಿವಂತಿಕೆಯ ಧಿಕ್ಕರಿಸುತಿತ್ತು.

ಶಿಥಿಲ ದೇಹವದು ನನ್ನನ್ನು ಕಂಡೊಡೇ
ಅಪೇಕ್ಷೆಯ ಕಿರಣವಾ ಹೊತ್ತಿ ಬಂದಿತ್ತು..
ಕೆಂಪು ದೀಪದಿ ನಿಂತ ಆ ನನ್ನ ಕಾರಿನೆಡೆ
ಯಮವಾಹನವ್ಯೂಹವ ಭೇದಿಸಿ ನಡೆದಿತ್ತು..

ಅಂಗಲಾಚಿದವನನ್ನು ತಿರಸ್ಕರಿಸುವುದು ಹೇಗೆ
ಕಿಸೆಯಲ್ಲಿದ್ದ ನೋಟುಗಳ ಕಂತೆಯನ್ನು ಬಿಚ್ಚಿದೆ
ರಾಶಿ ರಾಶಿಗಳ ನಡುವೆ ಶೋಧನೆಯ ನಡೆಸಿದೇ
ಸಿಗಲಾರದಾ ಆ ಒಂದು ಹತ್ತರಾ ನೋಟಿಗೆ..

ಕಂತೆಯಲಿ ಅವಿತಿದ್ದ ಐವತ್ತರ ನೋಟದು
ಕಂಡರೂ ಕಾಣದಂತೆ ಅಲ್ಲಿಯೇ ಉಳಿದಿತ್ತು
ಕೆಂಪು ಹಸಿರಾದಂತೆ ಯಮಕಿಂಕರರ ಮಧ್ಯೆ
ಹಸಿದಿದ್ದ ದೇಹವದು ಲಜ್ಜೆ ಮೀರಿ ನಿಂತಿತ್ತು..

"ಚಿಲ್ರೆ ಇಲ್ಲ ಮುಂದೆ ಹೋಗಪ್ಪಾ" ಎಂದ ನಾಲಿಗೆಗೆ
ಪಾಠವ ಕಲಿಸಿದೆ ಆ ನೋಟಿನಾ ಮಹಾತ್ಮರ ನಗೆ
ಇನ್ನೋರ್ವ ಭಿಕ್ಷುಕನ ಪಾಲಾದರೂ ಬಿಡದೆ
ಸ್ಮೃತಿ ಪಟಲಗಳಲ್ಲಿ ಹಾಗೆಯೇ ಉಳಿದಿದೆ...

## ಧಾವಂತದ ಬದುಕು

ಧಾವಂತದ ಬದುಕು ಇದೂ ಇಲ್ಲಿಲ್ಲ ಸಮಯಾ
ಸವೆಯಲೇ ಬೇಕು ನೀ ನಿನ್ನ ಬದುಕಿನ ದಾರಿಯಾ
ಅವರ್ಯಾರು ಬರಲೊಲ್ಲರು ನಿನ್ನೊಡನೆ ಗೆಳೆಯಾ
ನಿನ್ನ ನಾವೆಯ ಪಥಕೆ ನೀನೇನೆ ಒಡೆಯಾ.

ಮನಬಿಚ್ಚಿ ಮಾತಾಡೂ ಸಾಗಲಿ ನಿನ್ನ ನಾವೆ
ಹರಿಯುವ ನುಡಿಗೇಕೆ ಆಣೆಕಟ್ಟು ಕಟ್ಟುವೇ
ನಿನ್ನ ನೆರಳಲಿ ನೀನು ಬದುಕುವುದು ತರವೇ
ಬಿಚ್ಚಿಬಿಡು ಹಿಂಜರಿಕೆಯ ಆ ನಿನ್ನ ಅರಿವೇ.

ಬದುಕು ಸುಂದರ ಚಿತ್ರ ವರ್ಣಗಳ ಇಂದ್ರಛಾಪ
ಕಳಚಿಬಿಡು ಆ ನಿನ್ನ ಕಪ್ಪುಬಿಳುಪಿನ ರೂಪ
ಸ್ವಪ್ನಗಳ ಬದುಕಿಗೆ ತೋರು ನೈಜತೆಯ ದಾರಿದೀಪ
ನಿನ್ನ ಚಿತ್ರಕೆ ನೀನೇ ಹಚ್ಚು ಬಣ್ಣದ ಲೇಪ.

ನಿನ್ನೆಗಳ ಹಿಂದೂಡು ನಾಳೆಗಳ ಮುಂದೂಡು
ಪ್ರಸ್ತುತ ಕ್ಷಣದಲ್ಲಿ ಜೀವನದ ಸುಖ ನೋಡು
ಸ್ವಚ್ಛಂದದ ಹಕ್ಕಿಯಂತೆ ನಿನ್ನಿಚ್ಛೆಯಂತೆ ಹಾಡು
ನೀ ಬಯಸಿದಂತೆ ನೀ ನಿನ್ನ ಬಂಡಿಯ ಹೂಡು.
ಧಾವಂತದ ಬದುಕು ಇದೂ ಇಲ್ಲಿಲ್ಲ ಸಮಯಾ...



# ಬೆಳಕು - ಚೇತನಾ

ಡಾ. ಮಾರುತಿ ರಾಮ್, ಬೆಂಗಳೂರು

## ಬೆಳಗು ಬಾ ಬೆಳಕೆ

ಬೆಳಗು ಬಾ ಬೆಳಗೆನ್ನ ಬೆಳಕೆ
ಬೆಳಗು ಬಾ ಬೆಳಗೆನ್ನ ಬೆಳಕೆ
ಹೃತ್ಕಮಲ ಹೊಳೆಹೊಳೆದು
ವಿಶ್ವ ಚೇತನವಾಗಿ | ಬೆಳಗು |

ಅಗೋಚರದ ಅಸಂಭವದ
ಅಸಮಾನದ ಅನನ್ಯತೆಯ
ಅಪರೂಪದ ಅತಿಶಯದ
ಅನಂತತೆಯ ಅವಿಭಾಗದ | ಬೆಳಗು |

ಅವಿಚ್ಛಿನ್ನ ಅಪ್ರಮೇಯ
ಅನುರಾಗದ ಅನುಭಾವದ
ಅತ್ಯುನ್ನತ ಅವಿರತದ
ಅಸಂಖ್ಯಾತ ಅವಿಸ್ಮರಣ | ಬೆಳಗು |

ಅಂತರಾಳದಲ್ಲಿ ನೆಲೆಸಿ
ಪುಟಿದೆದ್ದ ಅಮರತ್ವವೆ
ಅನವರತ ಅನುಸರಿಸಿದ
ಅವನಿಗೆ ಅಪರೂಪವೆ | ಬೆಳಗು |

ಬೆಳಗು ಬಾ, ಹೊಳೆದು ಬಾ,
ನಲಿದು ಬಾ, ಒಲಿದು ಬಾ,
ಬೆಳೆದು ಬಾ, ಸೆಳೆದು ಬಾ,
ಬದುಕ ಆವರಿಸಿ ಬಾ, ಭವಣೆ ಎಲ್ಲ ನೀಗಿ ಬಾ,
ಸ್ಮರಣೆಯಾಗಿ ಬಾ, ಸುಸ್ಮರಣೆಯಾಗಿ ಬಾ ‖ ಬೆಳಗು‖

## ಬಾ ಚೇತನವೆ ಬಾ

ಬಾ ಚೇತನವೆ ಬಾ ನನ್ನನಾವರಿಸು ಬಾ
ಎಲ್ಲ ಎಲ್ಲೆಗಳ ಮೀರಿ ದಿಗ್ದಿಗಂತಗಳ
ಆಚೆಯಿಂದಿಳಿದು ಬಾ, ನಾನ್ನನಾವರಿಸು ಬಾ ‖

ಅರಿಯದಾ ತೆರೆಯದಾ ಭವ್ಯಲೊಕದ ಹಿಂದೆ
ಅಡಗಿರುವ ಶಕ್ತಿಯೆ ಅವತರಿಸು ಬಾ |
ಬದುಕನಾವರಿಸು ಬಾ, ಘನವಾಗಿ ನಿಲ್ಲು ಬಾ ‖

ವಿಶ್ವದೆಲ್ಲೆಲ್ಲೆಯು ಎಲ್ಲ ಎಡೆಯಲ್ಲಿಯು,
ಸುಪ್ತವಾಗಿಯೆ ಇರುವೆ ಪ್ರಕಟವಾಗಿರುವೆ |
ಎಲ್ಲರೊಳು ನೆಲೆಸುಬಾ, ನೆಲೆಯಾಗು ಬಾ ‖

ಎಲ್ಲವನು ನಡೆಸಿಹೆ ಎಲ್ಲೊ ಮರೆಯಾಗಿಹೆ
ಎಲ್ಲವನು ತಿಳಿದು ಮರೆಯಲ್ಲಿ ನಗುತಿಹೆ
ನಗುವಲ್ಲಿ ನಗುವಾಗಿ, ಒಲವಾಗು ಬಾ ‖

ಗಗನದೆದೆಯಲ್ಲಿ ಹುದುಗಿರುವ ಶಕ್ತಿಯೆ
ಮಿಂಚಾಗಿ ಸಂಚಾಗಿ ಹೊಂಚಿರುವ ಯುಕ್ತಿಯೆ |
ನೀನ್ ವರವಾಗುಬಾ, ನಿರ್ಗುಣವಾಗುಬಾ ‖

ಎಲ್ಲ ದನಿಯನು ಕೇಳು ಎಲ್ಲರಿಗು ಕಿವಿಯಾಗು
ನಿನ್ನೆದೆಯ ಆಳದಲಿ ಎಲ್ಲರನು ಹುದುಗು |
ಮೌನಕ್ಕೆ ಮೌನ ಬಾ, ಮಾತಾಗು ಬಾ ‖

ಈ ಭೂಮಿಯಾ ನಂಟು ಈ ವಿಷಯದ ಅಂಟು
ಬಿಡಿಸಿ ಹೃದಯದಿ ನೆಲೆಸೊ ಚಿತ್ಜ್ಯೋತಿಯಾಗು|
ಎಲ್ಲ ಎಲ್ಲೆಯ ಮೀರಿ ಎಲ್ಲರೊಳು ನೀ ಸೇರಿ ‖



# ನನ್ನ ಕವಿತೆಗಳು

ಮಧುಕರ್ ರಾವ್, ಮೈಸೂರು

## ಚಿಂತೆ

ಮನುಷ್ಯನಿಗೆ ಚಿಂತೆ ಇರಬೇಕಂತೆ,
ಒಬ್ಬಬ್ಬರಿಗೆ ಒಂದೊಂದು ಚಿಂತೆ,
ಇಲ್ಲೊಬ್ಬರು ಕಷ್ಟಗಳ ದಾಟಿ ಮುನ್ನುಗ್ಗುತ್ತಿದ್ದರಂತೆ,
ಮದುವೆಯಾಗಿ ಮೂರುವರ್ಷವಂತೆ,
ಎಲ್ಲಾ ದೇವರುಗಳಿಗೆ ಮೊರೆಯಂತೆ,
ಸಂತಾನ ಭಾಗ್ಯದ ಫಲಶ್ರುತಿ ಯಂತೆ,
ವಂಶೋದ್ಧಾರಕ ಜನ್ಮವೆತ್ತನ್ತೆ,
ವರ್ಷದ ಕೂಸಿಗೆ ವಿಜೃಂಭಣೆಯಂತೆ,
ನಾಮ ಗೋತ್ರದ ಫಲಕವಂತೆ,
ಲಕ್ಷ್ಮಿ ಹಬ್ಬಕ್ಕೆ ಲಕ ಲಕ ಅಂತಿತ್ತಂತೆ,
ಮಾರನೇದಿನ ಮಾತಿಲ್ಲದೆ ಮೌನವಂತೆ,
ಎನ್ಸಫಲೈಟಿಸ್ ಅನ್ನೋ ಹೊಸ ವೈರಸ್ ಅಂತೆ,
ಹೇಗೆ ಬಂತೋ ಗಾಳಿಯಲ್ಲಿ ಕಾಣದಂತೆ,
ನೂರಕ್ಕೊಬ್ಬರಿಗೆ ಬರಬಹುದಂತೆ,
ಸ್ಲಂ-ರಸ್ತೆ ಬದಿಯಲ್ಲಿರುವರಿಗೆ ಇದರ
ಚಿಂತೆಯಿಲ್ಲವಂತೆ,
ಜನ್ಮದ ಕರ್ಮವಿದ್ಧವನಿಗೆ ಇದು ಬರಬೇಕಂತೆ,
ಮಲಗಿದ್ದ ಮಗು ಕಣ್ಬಿಡಲಿಲ್ಲವಂತೆ,
ವೈದ್ಯರಿಗೇ ದಿಗಿಲಾದ ಈ ವೈರಸ್ಅಂತೆ,
ಶತ್ರುಗೂ ಬೇಡ ಈ ಪರಿಯ ಚಿಂತೆ
ಪುತ್ರ ಶೋಕದಿ ಮನದಲ್ಲುಳಿಯಿತಂತೆ.
ಚಿಂತೆ ಯಾಕೆ ಮಾಡುತಿ ರಾಯರಿದ್ದಾರಂತೆ,
ಭವದ ಭಂದದ ದಾರಿ ತೋರಿದ್ದಾರಂತೆ,
ಮುಗುಳ್ನಕ್ಕು ಮುಂದೆಸಾಗು ಎಂದರಂತೆ.



## ವೆಲ್ ಕಮ್ ವಿನಾಯಕ

ವರ್ಷ-ವರ್ಷವೂ ನಿನಗೆ ಪರ್ಮನೆಂಟ್ ಇನ್ವಿಟೇಷನ್,
ಶುರುವಾಗುತ್ತೆ ನಿನ್ನ ಹೆಸರಿನ ಅಸೋಸಿಯೇಷನ್,
ಚಪ್ಪರ, ಸ್ಟೇಜು, ಬ್ಯಾನರ್ ಹಾಕಿ ಮಾಡ್ತಾರೆ ಓಪನ್,
ಇದೆಲ್ಲಾ ತಾತ್ಕಾಲಿಕ ಕ್ರಿಯೇಷನ್.

ಬೀದಿಲಿ ಕೂರಿಸಲಿಕ್ಕೂ ಬೇಕು ಪರ್ಮಿಷನ್,
ನೀ ಬರೋಕ್ಕೂ,ಹೋಗುಕ್ಕೂ ಕೊಡಬೇಕು ಕಮೀಷನ್,
ನಿನ್ನ ಮುಟ್ಬೋಕು ಆಗಿರ್ಬೇಕು ವಾಕ್ಸಿನೇಷನ್,
ಈ ಬಾರಿ ಮನೆಗೆ ಸುಣ್ಣ ಬಣ್ಣದ ಜೊತೆ ಸ್ಯಾನಿಟೈಸೇಶನ್,
ನಿನ್ ನಮಸ್ಕಾರಕ್ಕೂ ಬೇಕು ಡಿಸ್ಟೆನ್ಸ್ ಮೇನ್ಟೇನ್,
ಈ ಕೊರೊನ ಇದ್ಯಾ - ಹೋಯ್ತಾ ಅನ್ನೋದೇ ಕಾಂಪ್ಲಿಕೇಷನ್.
ವೈರಲ್ ಫೀವರ್ ಮಾತ್ರ ಎಲ್ರಿಗೂ ಟೆನ್ಶನ್.

ನಿನ್ನ ಅಲಂಕಾರದಲ್ಲಾಗ್ತಿದೆ ಪ್ರಮೋಷನ್,
ನಿನಗೋಸ್ಕರ ಮಾಡ್ತಾರೆ ಬ್ಯಾಂಡ್, ಆರ್ಕೆಸ್ಟ್ರಾ ಫಂಕ್ಷನ್,
ಎಲ್ಲ ವಯ್ಯಸ್ಸಿ ನವರಿಗೂ ಇದೊಂದು ಎಂಟರ್ಟೇನ್,
ಬೀದಿ-ಬೀದಿಲಿ ಹೋಗ್ತಿದ್ರೆ ನಿನ್ ಪ್ರೊಸೇಷನ್,
ತಿಲಕ್ ರ ನೆನಪಿಸುವ ಸ್ವಾತಂತ್ರದ ಗಣಪ ಹೆಮ್ಮೆಯ ನೇಶನ್,

ಪ್ರಕೃತಿ ವಿಕೋಪಕ್ಕೆ ಮನೆ ಬೆಳೆ ಎಲ್ಲಾ ಕ್ಲೀನ್,
ನಿರ್ಗತಿಕರಿಗೆ ಹಾನಿಯಾದ ರೈತರಿಗೆ ಕಷ್ಟದ ಸಿಚುಯೇಷನ್.
ನೀ ಬಂದು ಎಲ್ಲರ ಕಷ್ಟ ಪರಿಹರಿಸಿ ಸಿಗಲಿ ನೆಮ್ಮದಿಯ
ಸ್ಯಾಟಿಸ್ಫ್ಯಾಕ್ಷನ್ !!






## ಮನಸ್ಸು ಮನಸ್ಸುಗಳ ನಡುವೆ

ಡಾ.ಸುಧಾ ಲಿಂಗರಾಜು

ಮನಸ್ಸೊಂದು ವಿಶಾಲ
ಅಂಗಳ
ವಿವಿಧ ಸುಂದರ ಗುಲಾಬಿಗಳ
ಹೂ ತೋಟ
ನಡುವೆ ಚಿಂತೆಯ
ಮುಳ್ಳುಗಳು
ಸುಖದ ಅನ್ವೇಷಣೆಯಲ್ಲಿ
ಮುಳ್ಳುಗಳ ಇರಿತ
ಸಹನೆಯ ಪರೀಕ್ಷೆ

ವಿಶಾಲ ಮನ-ಸಂಕುಚಿತ ಮನ
ನೋವಿನ ಮನ- ನಲಿವಿನ ಮನ
ಶಾಂತ ಮನ-ಕ್ಷೋಭೆಯ ಮನ
ಜೀವನದ ಮಜಲಿನಲ್ಲಿ
ವಿವಿಧ ಆಯಾಮಗಳು
ಕಡಿವಾಣಕೆ ಸಿಗದ
ಚಂಚಲಮನ

ಹುಣ್ಣಿಮೆಗೂ,,ಮನಸ್ಸಿಗೂ
ಸಂಬಂಧ ಕಲ್ಪಿಸಿದ
ಮನುಜ
ಮೆದುಳಿನ ರಾಸಾಯನಿಕ
ಕ್ರಿಯೆಯ  ವ್ಯತ್ಯಾಸ ಎಂದ
ಮನೋಶಾಸ್ತ್ರ

ಇವೆಲ್ಲದರ ಊಹೆಗೂ
ನಿಲುಕದ,,,,ಸಿಲುಕದ
ಸಮಯದ ಕೈಗೊಂಬೆಯಾಗಿ
ವರ್ತಿಸುವ ಮನಸೇ;
ವಿರಮಿಸು,,,,,ವಿಶ್ರಮಿಸು,,,,,
ರಿಲ್ಯಾಕ್ಸ್,,,,,



## ಕಲ್ಪನಾ

ಡಾ. ಹರಿಕುಮಾರ್

ಓ ಕಲ್ಪನೆಗಳೆ ನೀವು ಬರೀ ಕಲ್ಪನೆಗಳು
ಮನದ ಹಾದಿಯಲಿ ಪಯಣಿಸಿದ ಕ್ಷಣಿಕ ಭಾವಗಳು
ಆಸೆ- ಆಕಾಂಕ್ಷೆಗಳ ಕೆರಳಿಸುವ ಸಾಧಕಗಳು
ಒಂದು ಕ್ಷಣ ಸಂತಸದಿ ತೇಲಾಡಿಸುವ ಸ್ವರೂಪಗಳು

ಸಹಜ- ಅಸಹಜ ಈ ಬದುಕಿನೆಡೆಗೆ ಯೋಜಿಸಿ
ಸಂತಸ ನೆಮ್ಮದಿಗಳ ಸದಾ ಯಾಚಿಸಿ
ಒಮ್ಮೆ ಯೋಚನೆ- ಯಾಚನೆಗಳ ದೂರವಿರಿಸಿ
ಕಲ್ಪನೆಗಳು ಹೊರಟವು ಸಂತಸವ ಬಯಸಿ

ಮೃದು-ಕಟು ಭಾವಗಳ ಬೇರ್ಪಡಿಸಿ
ಕ್ಷುಲ್ಲುಕನೋ ಸನ್ನಡತೆಯ ಸಂತನೋ ಆಗುವ
ಹಾದಿಯಲಿ ಕಲ್ಪನಾತೀತ ಹೊಂಡವ
ತೋಡಿದವೆ ಅನಾಯಾಸ ಈ ಕಲ್ಪನೆಗಳು

ಕಲ್ಪಿತ- ಅಕಲ್ಪಿತ ಭಾವಗಳು ಏನೇ ಆಗಲಿ
ನಡದೇತೀರುವ ಘಟನೆಗಳು
ನಡೆಯುವ ಕರಾರು ಕ್ಷಣಗಳ ತಡೆದು
ನಿಲ್ಲಿಸುವ ಯತ್ನದಲ್ಲಿ ಅಸಫಲ ನಾನು ಇಲ್ಲಿ 'ನೆಪ'
ಮಾತ್ರ..!



# ಕೆಂಪವಲಕ್ಕಿ ಉಂಡೆ

ರೂಪಾ ತೇರದಾಳ

***ಬೇಕಾಗುವ ಸಾಮಾಗ್ರಿಗಳು***

⇒ ಕೆಂಪು ಅವಲಕ್ಕಿ : 2 ಕಪ್

⇒ ಏಲಕ್ಕಿ : 5-6

⇒ ಗೋಡಂಬಿ : 10-15

⇒ ಒಣ ಕೊಬ್ಬರಿ : ¾ ಕಪ್

***ಮಾಡುವ ವಿಧಾನ***

- ಒಂದು ಪಾತ್ರೆಯಲ್ಲಿ 2-3 ಚಮಚ ತುಪ್ಪವನ್ನು ಹಾಕಿ, ಗೋಡಂಬಿ, ಒಣದ್ರಾಕ್ಷಿಯನ್ನು ಹಾಕಿ ಹುರಿದುಕೊಳ್ಳಿ.
- ಒಣ ಕೊಬ್ಬರಿಯನ್ನು ಹಾಕಿ ಸ್ವಲ್ಪ ಸಮಯ ಹುರಿದುಕೊಳ್ಳಿ.
- ಬಳಿಕ ಬೆಲ್ಲವನ್ನು ಹಾಕಿ ಚೆನ್ನಾಗಿ ಬೆರೆಸಿರಿ.
- ಇನ್ನೊಂದು ಬಾಣಲೆಯಲ್ಲಿ ಅವಲಕ್ಕಿಯನ್ನು 2-3 ನಿಮಿಷ ಸಣ್ಣ ಉರಿಯಲ್ಲಿ ಹುರಿದುಕೊಳ್ಳಿ.
- ಆರಿದ ಅವಲಕ್ಕಿಯನ್ನು ಮಿಕ್ಸಿಗೆ ಹಾಕಿ, ಅದಕ್ಕೆ ಏಲಕ್ಕಿ ಹಾಕಿ ಸಣ್ಣಗೆ ರುಬ್ಬಿ.
- ರುಬ್ಬಿದ ಅವಲಕ್ಕಿಯನ್ನು ಹಿಂದಿನ ಮಿಶ್ರಣಕ್ಕೆ ವರ್ಗಾಯಿಸಿ ಚೆನ್ನಾಗಿ ಬೆರೆಸಿರಿ.
- ಸ್ವಲ್ಪ ತುಪ್ಪವನ್ನು ಕೈಗೆ ಹಾಕಿ ಕೆಲವು ಉಂಡೆ ಮಾಡಿ.
- ರುಚಿಯಾದ ಅವಲಕ್ಕಿ ಉಂಡೆ ಸಿದ್ಧ.





# ಅವರೆ ಕಾಳು ಗೊಜ್ಜು

ಕೆ.ವಿ.ಲಕ್ಷ್ಮಿ ಶಂಕರ್ , ಬೆಂಗಳೂರು

## ಬೇಕಾಗುವ ಸಾಮಾಗ್ರಿಗಳು

1. ಈರುಳ್ಳಿ- 4( medium ),
2. ಬೆಳ್ಳುಳ್ಳಿ - 1ಗಡ್ಡೆ ,
3. ಹಸಿಮೆಣಸಿನಕಾಯಿ - ಖಾರಕ್ಕೆ ,
4. ಟೊಮೇಟೊ -2,
5. ಉಪ್ಪು,
6. ಅವರೆ ಕಾಳು( Surthi papdi lilva) - 1pkt frozen,
7. ಜೀರಿಗೆ ಪುಡಿ,
8. ಕಾಯಿ ತುರಿ,
9. ಕರಿಬೇವು,
10. ಕೊತ್ತಂಬರಿ ಸೊಪ್ಪು,
11. ಹುಣಸೆಹಣ್ಣು.

## ಮಾಡುವ ವಿಧಾನ

- ಮೊದಲಿಗೆ ಕುಕ್ಕರ್ ನಲ್ಲಿ ಅವರೇಕಾಳು, ಈರುಳ್ಳಿ - 1(big), ಟೊಮೇಟೊ -2, ಹಸಿಮೆಣಸಿನಕಾಯಿ, ಬೆಳ್ಳುಳ್ಳಿ, ಉಪ್ಪು ಹಾಕಿ ಬೇಯಿಸಬೇಕು. ನಂತರ ನೀರನ್ನು ಬಸಿದಿಟ್ಟು ಕೊಳ್ಳಬೇಕು. ಮಿಕ್ಸಿಗೆ ಬೆಂದ ಈರುಳ್ಳಿ, ಬೆಳ್ಳುಳ್ಳಿ, ಟೊಮೇಟೊ, ಹಸಿಮೆಣಸಿನಕಾಯಿ, ಹುಣ್ಸೆಹಣ್ಣು, ಸ್ವಲ್ಪ ಬೆಂದ ಕಾಳನ್ನು ರುಬ್ಬಿ ಸೋಸಿಕೊಳ್ಳಬೇಕು (ಬೆಂದ ಕಾಳಲ್ಲಿ ಕಾಲು ಭಾಗ). ಹುಳಿ ಮುಂದಿರಬೇಕು, ರುಬ್ಬಿದ ನೀರಿಗೆ ಕೊತ್ತಂಬರಿ ಕಡ್ಡಿಗಳು, ಸಣ್ಣಗೆ ಹೆಚ್ಚಿದ ಕೊತ್ತಂಬರಿ ಸೊಪ್ಪು ಮತ್ತು ಕರಿಬೇವು ಹಾಕಬೇಕು.
- ಪಾತ್ರೆಗೆ ಸ್ವಲ್ಪ ಎಣ್ಣೆ, ಸಾಸಿವೆ, ಜೀರಿಗೆ ಪುಡಿ, ಕಾಳಿನ ನೀರು, ಉಪ್ಪು ಹಾಕಿ ಒಂದು ಕುದಿ ಕುದಿಸಬೇಕು.
- ಪಾತ್ರೆಗೆ ಎಣ್ಣೆ, ಸಾಸಿವೆ, ಸಣ್ಣಗೆ ಹೆಚ್ಚಿದ ಈರುಳ್ಳಿ, ಹಸಿಮೆಣಸಿನಕಾಯಿ, ಕರಿಬೇವು ಹಾಕಿ ಕಂದು ಬಣ್ಣ ಬರುವತನಕ ಹುರಿಯಬೇಕು, ನಂತರ ಬೇಯಿಸಿದ ಕಾಳು, ಸ್ವಲ್ಪ ಉಪ್ಪು, ಕಾಯಿತುರಿ, ಕೊತ್ತಂಬರಿ ಸೊಪ್ಪು ಹಾಕಿ ಕಲಸಿ ಬಿಸಿಯಾದ ನಂತರ ಸ್ಟವ್ ಆರಿಸಿ . ಮುದ್ದೆ ಮತ್ತು ಅನ್ನದ ಜೊತೆ ಸವಿಯಲು ರುಚಿಯಾಗಿರುತ್ತದೆ.
- ಕಾಳು ಬೇಯಿಸಿದ ನೀರಿನಲ್ಲೆ ಸಾರು ಮಾಡಬೇಕು, ಬೇರೆ ನೀರು ಸೇರಿಸಬಾರದು




# ಪುಟಾಣಿ–ಪ್ರಪಂಚ





ಅನನ್ಯ ಪ್ರಕಾಶ್





ಅನನ್ಯ ಪ್ರಕಾಶ್

10/9/2022

॥ ನವರಾತ್ರಿ ॥

ನವರಾತ್ರಿ ಶಬ್ದ ಎಂದರೆ "ನವ" ಎಂದರೆ ಒಂಬತ್ತು ರಾತ್ರಿಗಳ ಆಚರಣೆ. ಈ ಹಬ್ಬವನ್ನು ಅಶ್ವಯುಜ ಮಾಸದ ಶುಕ್ಲಪಕ್ಷದ ಪಾಡ್ಯದಿನದಿಂದ ಆರಂಭವಾಗಿ ದಶಮಿಯವರೆಗೂ ಆಚರಿಸುತ್ತಾರೆ. ಕರ್ನಾಟಕದಲ್ಲಿ ಈ ಹಬ್ಬವನ್ನು "ದಸರಾ" ಎಂದು ಕರೆಯುತ್ತೇವೆ ಮತ್ತು ಇದು ನಮ್ಮ ನಾಡಹಬ್ಬ. ಈ ಹಬ್ಬದಲ್ಲಿ ನಾವು ಮನೆಯಲ್ಲಿ ಗೊಂಬೆ ಇಡುತ್ತೇವೆ ಮತ್ತು ಇದನ್ನು ಗೊಂಬೆಹಬ್ಬವೆಂದು ಕರೆಯುತ್ತೇವೆ. [illegible] ಮನೆಯಲ್ಲಿ ಪ್ರತಿಷ್ಠಾಪಿಸುತ್ತೇವೆ. ಎಂಟನೆಯ ದಿನ ದುರ್ಗಾ ಪೂಜೆ, ಒಂಬತ್ತನೆಯ ದಿನ ಆಯುಧ ಪೂಜೆ. ಆಯುಧ ಪೂಜೆ ದಿನ ಎಲ್ಲ ಉಪಯುಕ್ತವಾದ ಕಾರು, ಸೈಕಲ್, ಕಂಪ್ಯೂಟರ್ ಮುಂತಾದುವುಗಳಿಗೆ ಪೂಜೆ ಮಾಡುತ್ತೇವೆ. ವಿಜಯ ದಶಮಿ ಕೊನೆಯ ದಿನ, ಆ ದಿನ ಮೈಸೂರಿನಲ್ಲಿ "ಜಂಬೂ ಸವಾರಿ" ಉತ್ಸವ ನಡೆಯುತ್ತದೆ. ಜಂಬೂ ಸವಾರಿಯಲ್ಲಿ ಅಲಂಕರಿಸಿಕೊಂಡಿರುವ ಆನೆಯೊಂದು 750 ಕೆ. ಜಿ ತೂಕದ ಬಂಗಾರದ ಮಂಟಪದಲ್ಲಿ ಚಾಮುಂಡೇಶ್ವರಿ ದೇವಿಯ ವಿಗ್ರಹವನ್ನು ಹೊತ್ತುಕೊಂಡು ನಡೆಯುತ್ತದೆ, ಅದರ ಜೊತೆಯಲ್ಲಿ ವಾದ್ಯಗಾರರು, ನರ್ತಕರು, ಕುದುರೆಗಳು ಕೂಡ ಪಾಲ್ಗೊಳ್ಳುತ್ತವೆ. ಇಡೀ ಮೈಸೂರನ್ನು ಈ ಹತ್ತು ದಿನಗಳ ಕಾಲ ದೀಪಾಲಂಕಾರದಿಂದ ಅಲಂಕರಿಸಿರುತ್ತಾರೆ. ಇದನ್ನು ನೋಡಲು ಹಲವಾರು ಜನರು ಮೈಸೂರಿಗೆ ಬರುತ್ತಾರೆ.





ಅನ್ವಿತಾ ಪ್ರಶಾಂತ್





ಸಂಧ್ಯಾ ಮಲ್ಲಿಕ್









ಐಸ್ ಲ್ಯಾಂಡ್ ಪ್ರವಾಸದಲ್ಲಿ ಸೆರೆಹಿಡಿದ ಮನಸೂರೆಗೊಳ್ಳುವ ಚಿತ್ರಗಳು

# ಕ್ಯಾಮೆರಾ ಕಣ್ಣು



ಸಂಧ್ಯಾ ಮಲ್ಲಿಕ್









ಶ್ರೀವಿದ್ಯಾ ಪ್ರಶಾಂತ್







# ಕ್ಯಾಮೆರಾ ಕಣ್ಣು



ಶ್ರೀವಿದ್ಯಾ ಪ್ರಶಾಂತ್











# ಹಿಂದಿನ ಸಂಚಿಕೆಗಳು





ಆಗಸ್ಟ್ ೨೦೨೨




ಜೂನ್ ೨೦೨೨





ಏಪ್ರಿಲ್ ೨೦೨೨





ಫೆಬ್ರವರಿ-2022





ಡಿಸೆಂಬರ್ 2021





ಅಕ್ಟೋಬರ್ - 2021




ಆಗಸ್ಟ್ - 2021




ಜೂನ್ - 2021




ಏಪ್ರಿಲ್ - 2021




ಫೆಬ್ರವರಿ 2021

## ಬೃಂದಾವನವಾಣಿ ಎಲ್ಲಾ ಸಂಚಿಕೆಗಳು